# ಅಖಿಲ ಭಾರತ ಪತ್ರಿಕೆ

## ಜುಲೈ 2024



# ಸರಳತೆ

**ಬೆಲೆ : 15/-**



ಫೋಟೊ: ಇಮೇಜಿಂಗ್ ಸಾವಿತ್ರಿ

ರೂಪ–ಸ್ಥೂಲದೊಲು ಹಂತ ಶಾಂತತೆಯು ಶಿಲೆ–ವಜ್ರ–ತಾರೆ–ದೀಪ್ತಿ
ಸ್ಪಂದಿಸುತ ನಿತ್ಯ ವಿಸ್ತಾರಗೊಂಡ ಚಿದ್ಘನದ ಗಗನ–ವ್ಯಾಪ್ತಿ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 1 ಪುಟ 9)**

**ಅಖಿಲ ಭಾರತ ಪತ್ರಿಕೆ**

**ಜುಲೈ 2024**

ಸಂಪುಟ: 34 ಸಂಚಿಕೆ: 07


# ಪರಿವಿಡಿ


**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ:**
ಡಾ॥ ಆರ್.ಕೆ. ಕುಲಕರ್ಣಿ



**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
https://www.sriaurobindo
complex.org/archive.php
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.


## ಸರಳತೆ

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು


**ಸರಳತೆ ಮತ್ತು ಸಂಕೀರ್ಣತೆ** 2
ಅನು: ಶ್ರೀ ಪ್ರವೀಣಕುಮಾರ ಪಾಟೀಲ

**ಸರಳತೆಯ ಸಂರಚನಾ ಪ್ರಗತಿ** 7
ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್

**ಏಕಾಂಗಿಯಾಗಿರುವುದು** 17
ಅನು: ಡಾ॥ ಮಹಾದೇವ ಸಕ್ರಿ

**ಜೀವನದ ಸೂತ್ರಗಳು** 27
ಅನು: ಶ್ರೀ ಕಿಶೋರಕುಮಾರ ಕಾಸಾರ

**ಶ್ರೀ ಅರವಿಂದರ 'ಗೀತಾ ಪ್ರಬಂಧಗಳು'** 30
ಅನು: ಜಾನ್ವಿ

**ಶ್ರೀ ಅರವಿಂದರ 'ಪ್ರೇಮ ಮತ್ತು ಮೃತ್ಯು'** 40
ಅನು: ಶ್ರೀ ಕಿಶೋರಕುಮಾರ ಕಾಸಾರ (ಸಮಷ್ಟಿ)

**ಸಾವಿತ್ರಿ: ಯೋಗಿಕ ಶಬ್ದಾರ್ಥ** 56
ಅನು: ಶ್ರೀ ಪುಟ್ಟು ಕುಲಕರ್ಣಿ

**ವಾರ್ತಾಪತ್ರ** 64


---

**ಸಂಪಾದಕರ ಟಿಪ್ಪಣಿ:** ಸರಳತೆಯಲ್ಲಿ ಮಹತ್ತರವಾದ ಸೌಂದರ್ಯವಿರುತ್ತದೆ. ಇದನ್ನು ಪ್ರಕೃತಿಯ ಪ್ರಾರಂಭಿಕದ ಅಂಶಗಳಲ್ಲಿ ಕಾಣುತ್ತೇವೆ. ಆದರೆ, ವಿಕಾಸದ ಅಲೆಯು ಪ್ರಾರಂಭವಾದೊಡನೆ ಮತ್ತು ಮತ್ತೂ ಅಧಿಕವಾಗಿ, ಮನೋಪ್ರಧಾನತೆಯ ಪ್ರಾಮುಖ್ಯದಲ್ಲಿ ಮಾನವನು ಸಂಕೀರ್ಣವಾಗುತ್ತ ಸಾಗಿದ ಹಾಗೆ, ಈ ಸರಳತೆಯು ಕ್ಷೀಣಿಸತೊಡಗಿ, ಅದು ಮುಕ್ತಾಯವೇ ಇಲ್ಲದ ಮಾನಸಿಕ ಅಜ್ಞಾನದ ತೊಡಕುಗಳಲ್ಲಿ ಸಿಲುಕಿತು. ನಾವೀಗ ಈ ಅವಸ್ಥೆಯ ಸಂಕ್ರಮಣದ ಸಮಯದಲ್ಲಿ ಅಂದರೆ, ಮಾನವನ ವಿಕಾಸದ ಹಂತದಲ್ಲಿ ರೂಪಿತಗೊಂಡಿರುವ ತಿರುವುಗಳಲ್ಲಿ ಇದ್ದೇವೆ. ದಟ್ಟೈಸಿರುವ ಈ ಸಂಕೀರ್ಣತೆಯ ಪಥದಲ್ಲಿ ಸಾಗದೇ ದಿವ್ಯತ್ವಪೂರ್ಣ ಸರಳತೆಯ ಕಡೆಗೆ ಸಾಗಬೇಕಿದೆ. ಇಂತಹ ಮಹತ್ವಪೂರ್ಣ ಜೊತೆಜೊತೆಗೆ ಅಪರೂಪವಾಗಿರುವ ವಿಷಯದ ಕುರಿತು, ಈ ಸಂಚಿಕೆಯು ರೂಪಿತಗೊಂಡಿದೆ. (ಎಐಎಂ)

# ಸರಳತೆ ಮತ್ತು ಸಂಕೀರ್ಣತೆ

**– ಅನು: ಶ್ರೀ ಪ್ರವೀಣಕುಮಾರ ಪಾಟೀಲ, ಮಾನವಿ**

**ನಾವು ಸರಳವಾಗಿರಬೇಕೆಂದು ಶ್ರೀ ಅರವಿಂದರು ಬಯಸುತ್ತಾರೆ**

ಒಂದು ಸಂತೋಷದಾಯಕ ಸಹಜತೆ.

ಈ ಸಂಘಟನೆ ಮಾಡುವ ಮನವು ಎಷ್ಟು ಭಯಂಕರವಾಗಿದೆ. ಇದು ಭಯಾನಕ! ಮನವಿಲ್ಲದೆ ನಾವು ಬದುಕುವುದು ಅಸಾಧ್ಯವೆಂದು ನಮ್ಮನ್ನು ಮನಗಾಣಿಸಿದೆ. ಹಾಗೂ ಇದನ್ನು ತಡೆದು ನಿಲ್ಲಿಸುವುದು ಬಹಳ ಕಷ್ಟವಾಗಿದೆ. ಮಾನಸಿಕ ಸಂಘಟನಾ ಶಕ್ತಿಯಿಲ್ಲದೆ ನಾವು ಏನನ್ನೂ ಸಾಧಿಸಲು ಸಾಧ್ಯವಿಲ್ಲವೆಂದು ಮಾನವತೆಯ ಗಣ್ಯ ವ್ಯಕ್ತಿಗಳಿಗೆ ಇಂದು ಮನಗಾಣಿಸಿದೆ.

ಆದರೆ ಒಂದು ಗುಲಾಬಿ ಹೂವಿನ ಅರಳುವಿಕೆಯ ಹಾಗೆ ನಮ್ಮ ಸಂತೋಷವು ಅಷ್ಟೇ ಸರಳವಾಗಿರಬೇಕೆಂದು ಶ್ರೀ ಅರವಿಂದರು ಬಯಸುತ್ತಾರೆ; ಸರಳವಾಗಿರಿ, ಸರಳವಾಗಿರಿ, ಸರಳವಾಗಿರಿ, ಮತ್ತು ನಾನು ಅದನ್ನು ಕೇಳಿಸಿಕೊಂಡಾಗ ಅಥವಾ ನೋಡಿದಾಗ ಅದು ಬಂಗಾರದ ಬೆಳಕಿನ ಝರಿಯಾಗಿ ಒಂದು ಸುಗಂಧಮಯ ಉದ್ಯಾನ ವನವಾಗಿ ಎಲ್ಲವೂ ಎಲ್ಲವೂ ಎಲ್ಲವೂ ತೆರೆದಿಟ್ಟುಕೊಂಡಿರುತ್ತದೆ.

ಸರಳವಾಗಿರಿ ಹೀಗೆ ತಿಳಿಯಿತೆ ನನ್ನ ಮಗುವೆ.

ಈ ಕೊನೆಯ ಎರಡು ಮೂರು ದಿನಗಳಿಂದ ನಾನು ಇದನ್ನು ಸತತವಾಗಿ ನಿಮಗಾಗಿ ಗಮನಿಸುತ್ತಿರುವೆ. ಇಂದಿನ ಬೆಳಿಗ್ಗೆ ನನಗನಿಸಿತು. ಏಕೆಂದರೆ, ಮಾಡಬೇಕಾದ ಕೆಲಸಗಳು ಎಷ್ಟಿವೆ ಎಂದರೆ ನನಗೆ ಸ್ವಲ್ಪ ಕಳವಳವಾಯಿತು; ನಾನು ನಡೆದಾಡುವ ಮಧ್ಯದಲ್ಲಿ ಒಂದು ಶಕ್ತಿಯು ನನಗೆ ವಿಶ್ರಾಂತಿ ತೆಗೆದುಕೊ ಎಂದು ಒತ್ತಾಯ ಮಾಡುತ್ತಿತ್ತು. ಮತ್ತು ನಾನು ಅದನ್ನು ನನ್ನೆಲ್ಲಾ ಸಂಕಲ್ಪದಿಂದ ಪ್ರತಿರೋಧಿಸುತ್ತಿದ್ದೆ. ಆದರೆ ನಾನು ಮಾಡುತ್ತಿರುವುದು ಮೂರ್ಖತನದಿಂದ ಕೂಡಿದೆಯೆಂದು ತಿಳಿಯಿತು. ಇದು ಒಂದೇ ರೀತಿಯ ವಿಷಯ. ಅವರು ನನಗೆ ಇದನ್ನೇ ಹೇಳಿದರು. ಆಗ ನಾನು ವಿಶ್ರಾಂತಿ ತೆಗೆದುಕೊಂಡೆ. ಆಗ ಎಲ್ಲವೂ ಸರಿಹೋಯಿತು.

ಅವಶ್ಯಕವಾಗಿ ನಾವು ಬಹಳಷ್ಟು ಒತ್ತಡದಲ್ಲಿ ಬದುಕುತ್ತಿದ್ದೇವೆ ಅಲ್ಲವೇ?

ನನ್ನ ಮಗುವೆ, ಈ ವಾರದ ಸಂದೇಶ ಇದೇ ಆಗಿದೆ.

ಅದಕ್ಕೇನು ಮಾಡಬೇಕು ಓಹ್! ಅದು ಬರುತ್ತದೆ. ಆದರೆ ಇದು ನಿಜ, ನಾವೆಲ್ಲರೂ ಬಹಳಷ್ಟು ಒತ್ತಡದಲ್ಲಿದ್ದೇವೆ. ಯಾವಾಗಲೂ ಮತ್ತು ಎಲ್ಲಿಯವರೆಗೆ ನಾವು ಈ ಪ್ರಶಂಸನೀಯ ಮನದ ಅಧೀನದಲ್ಲಿರುತ್ತೇವೆಯೋ, ವಿಶ್ರಾಂತಿ ತೆಗೆದುಕೊಳ್ಳುವುದೆಂದರೆ, ತಮಸ್ಸು ಮತ್ತು ಅಪ್ರಜ್ಞಾಪೂರ್ವಕವಾಗಿರುವುದೆಂದು ಅಂದುಕೊಳ್ಳುತ್ತೇವೆ. ಈ ಎಲ್ಲಾ ಹಳೆಯ ವಿಚಾರಗಳು ಇರುತ್ತವೆ. ತಮ್ಮನ್ನು ತಾವು ಮುಂದುವರೆಸುತ್ತವೆ; ಇದರ ಒಂದು ಅದ್ಭುತವಾದ ದೋಷನಿಯಂತ್ರಕ ಅಂಶವು ಯಾವಾಗಲೂ ಹೀಗೆ ಹೇಳುತ್ತಿರುತ್ತದೆ: 'ಹುಷಾರು, ತಮಸ್ಸು ತಮಸ್ಸು! ಹುಷಾರು, ನೀನು ನಿದ್ರಿಸುತ್ತಿರುವೆ. ಇದು ಬಹಳ ಕೆಟ್ಟದ್ದು, ಬಹಳ ಕೆಟ್ಟದ್ದು.' ಮತ್ತು ಇದು ಮೂರ್ಖತನದ ವಿಚಾರ, ಏಕೆಂದರೆ ತಮಸ್ಸಿನಲ್ಲಿ ಸಂತೋಷವಾಗಲಿ, ಬೆಳಕಾಗಲಿ ಇರುವುದಿಲ್ಲ. ಆದರೆ ಇಲ್ಲಿ ತಕ್ಷಣದ ಸಂತೋಷ ಮತ್ತು ಬೆಳಕಿದೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 16 ಸೆಪ್ಟೆಂಬರ್, 1961**

## ಹೇಗೆ ವಿಷಯಗಳು ಸಂಕೀರ್ಣವಾಗಿರುತ್ತವೆ

ಜನರ ಜೊತೆಗೆ ಅವಶ್ಯಕ ಮತ್ತು ಅನಿವಾರ್ಯವಾಗಿ ಸಂಪರ್ಕದಲ್ಲಿ ಬಂದಾಗ ಒಂದು ಹೆಚ್ಚುತ್ತಿರುವ ದೃಷ್ಟಿಕೋನವೆಂದರೆ, ಅದು ಯಾವುದೇ ಪರಿಸರವಿರಲಿ (ಅದು ತನ್ನಷ್ಟಕ್ಕೆ ತಾನೇ ಬಹಳಷ್ಟು ಸರಳ, ಮಗುವಿಗಿಂತಲೂ ಸರಳ ನಿಮಗೆ ಗೊತ್ತಾ ಪರಿಪೂರ್ಣ ಸರಳತೆ) ಪ್ರಾಪಂಚಿಕ ಮನುಷ್ಯನ ವಾತಾವರಣದ ಸಂಪರ್ಕಕ್ಕೆ ಬಂದಾಗ; ಅವು ಬಹಳ ಸಂಕೀರ್ಣವಾಗುತ್ತವೆ! ಮತ್ತು ಇದು ಅನವಶ್ಯಕವಾಗಿರುತ್ತದೆ. ಸರಳವಾಗಿರುವುದನ್ನು ಸಂಕೀರ್ಣಗೊಳಿಸುವುದೇ ಮನುಷ್ಯನ ವೃತ್ತಿಯಾಗಿದೆ. ನಾನು ಇದನ್ನು ದಿನದಿಂದ ದಿನಕ್ಕೆ ನೋಡುತ್ತಿದ್ದೇನೆ. ಪ್ರತಿದಿನದ ಸಣ್ಣ ಘಟನೆಗಳಿಂದ ಹಿಡಿದು ಪ್ರತಿ ನಿಮಿಷವು ಸಹ. ಕೆಲವೊಂದು ಪ್ರಜ್ಞೆಯನ್ನು ಸ್ಪರ್ಷಿಸಿದಾಗ ಅದು ಹೆಣೆದುಕೊಳ್ಳುತ್ತದೆ. ಕೆಲವೊಮ್ಮೆ ಭಯಂಕರ ಗಂಟುಗಳಾಗುತ್ತದೆ. ಇದನ್ನು ಸರಿಪಡಿಸಲು ಅತ್ಯದ್ಭುತ ಶ್ರಮ ಪಡಬೇಕಾಗುತ್ತದೆ. ಇಡೀ ವಿಷಯವೇ ಸಂಪೂರ್ಣ ಅನವಶ್ಯಕವಾಗಿದೆ.

ನಾನು ಕೆಲದಿನಗಳಿಂದ ಇವೆಲ್ಲವನ್ನು ನೋಡುತ್ತಿರುವೆ. ಹಾಗೂ ಆಶ್ಚರ್ಯಪಡುತ್ತಿರುವೆ. 'ಇವೆಲ್ಲ ಏಕೆ ಈ ರೀತಿಯಾಗಿವೆ?' ಇವೆಲ್ಲವೂ ತಮಸ್ಸಿನಿಂದ

ಹೊರಬರಲು ಇರುವ ಪ್ರಭಾವಶಾಲಿ ಮಾಧ್ಯಮವಿರಬೇಕೆ, ನನಗೆ ಗೊತ್ತಿಲ್ಲ. ಎಲ್ಲವೂ ಆ 'ಸರಳತೆಯಲ್ಲಿ' ಕಾರ್ಯಗೈದರೆ, ಅಂತಹ ಪರಿಪೂರ್ಣ ನಿಶ್ಚಲತೆಯಲ್ಲಿ ಬಹುಶಃ ಅಂತಹ ಪ್ರಜ್ಞೆಯಲ್ಲಿ ಮಾನವನು ನಿದ್ರೆಗೆ ಜಾರಬಹುದು. ಆಗ ಮಾನವನು ಎಂತಹ ಸ್ಥಿತಿಯನ್ನು ತಲುಪುವನು ಎಂದರೆ, ಪ್ರಾಣಿಯ ಸ್ಥಿತಿಯೂ ಅಲ್ಲ, ಬಹುಶಃ ನಿದ್ರೆ ಮಾಡುವ ಮರವಾಗುತ್ತಿದ್ದ.

ಅದೇ ಕಾರಣವೇ ಆಗಿರಬೇಕು.

ಆದರೆ ಇದನ್ನು ಬೇರೊಂದು ಕಡೆಯಿಂದ ನೋಡಿದರೆ ಅತ್ಯದ್ಭುತವಾದ ಮೂರ್ಖತನ! ನಿನ್ನಿಂದ ಬರುವ ಪ್ರತಿಯೊಂದು ಶಬ್ದವು ತಿರುಚಲಾಗುವುದು. ತನ್ನಷ್ಟಕ್ಕೆ ತಾನೇ, ಆದರೆ ಏಕೆಂದು ಗೊತ್ತಿಲ್ಲ? ಯಾವುದು ಸ್ಪಷ್ಟವಾಗಿ, ನಿಸ್ಸಂಶಯವಾಗಿ, ಯಾವುದೇ ಅಡೆತಡೆಗಳಿಲ್ಲದೆ, ನಯವಾಗಿ ಹೋಗಬೇಕಾಗಿತ್ತೋ, ಅದು ಸಂಕೀರ್ಣತೆಯ ಸುಳಿಯಲ್ಲಿ ಸಿಕ್ಕಿಹಾಕಿಕೊಳ್ಳುತ್ತದೆ.

ಎಲ್ಲಾ ಚಟುವಟಿಕೆಗಳು, ಎಲ್ಲಾ ಜೀವನವೇ ಹೀಗೆಯೇ ಇರುತ್ತದೆ.

ಮತ್ತು ಕೆಲವು ಸೂಕ್ಷ್ಮ ವ್ಯತ್ಯಾಸಗಳು, ಸಣ್ಣಪುಟ್ಟ ಭೇದಭಾವಗಳು, ಇಂತಹ ವಿಕಾರಗೊಂಡ ಪ್ರಜ್ಞೆಯಲ್ಲಿ ಅತಿರೇಕದ ಅಂಶಗಳಾಗಿ ಕಾಣುತ್ತವೆ; ಅವರು ಹೇಳುತ್ತಾರೆ, "ಈಗ ಎಲ್ಲವೂ ಚೆನ್ನಾಗಿದೆ." ಮತ್ತೆ "ಈಗ ಎಲ್ಲವೂ ಚೆನ್ನಾಗಿಲ್ಲ" ಆದರೆ ಇದು ನಿಜವಲ್ಲ! ಯಾವಾಗಲೂ ಅದು "ಒಂದೇ" ಅಂಶವಿರುತ್ತದೆ. ಕೇವಲ ಸ್ವಲ್ಪ ಸೂಕ್ಷ್ಮ ವ್ಯತ್ಯಾಸಗಳಿರುತ್ತವೆ.

ಆದರೆ ಎಲ್ಲವೂ ಚೆನ್ನಾಗಿಯೇ ಇರುತ್ತದೆ. "ನಿಜವಾದ ವಸ್ತುವು" ಇದ್ದ ಹಾಗೇ ಇರುತ್ತದೆ. ಇದು ಬಹಳ ಸರಳ! ಎಷ್ಟು ಸರಳ ಎಷ್ಟು ನಿಶ್ಚಲ, ಎಷ್ಟು ತತ್‌ಕ್ಷಣ, ಎಷ್ಟು ನೇರವೆಂದರೆ, ಮಾನವ ಪ್ರಜ್ಞೆಯ ವಿಚಾರಕ್ಕೆ ಮೀರಿದ್ದು, ಮಾನವ ಸಂವೇದನೆಗೆ ಇನ್ನೂ ನಿಲುಕದ್ದು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 29 ಮೇ, 1963**

## ಸಾಮಾನ್ಯ ಮನುಷ್ಯನ ಮನೋಭಾವ

ಸಾಮಾನ್ಯ ಮನುಷ್ಯನ ಮನೋಭಾವವು ತೊಂದರೆಗಳನ್ನು ಹೆಚ್ಚಿಸಿ ಮತ್ತು ದೊಡ್ಡದನ್ನಾಗಿ ಅತಿರೇಕದ ಮಟ್ಟಿಗೆ ಮಾಡುತ್ತದೆ. ಇದೊಂದು ಸಂವೇದನೆ ಮತ್ತು

ಭಾವನೆಗಳಿಂದ ಕೂಡಿದ ರಂಜನೀಯ ವಿಷಯವಾಗಿದೆ; ಆದರೆ ಅವರು ಒಂದು ನಿಜವಾದ ಮನೋಭಾವವನ್ನು ಹೊಂದಿದ್ದರೆ ಸಹಜ ಮನೋಭಾವ, ಸರಳವಾದ, ಸಂಕೀರ್ಣವಲ್ಲದ ಆಗ ಜೀವನವು ತುಂಬಾ ಸುಲಭವಾಗುತ್ತದೆ. ಏಕೆಂದರೆ, ದೇಹವು ಕಂಪನಗಳನ್ನು ಭಾವಿಸುತ್ತದೆ. (ಯಾವ ಕಂಪನಗಳಿಂದ ದೇಹವು ರೂಪುಗೊಂಡಿದೆಯೋ) ಕಂಪನಗಳ ಭಾವವನ್ನು ಗ್ರಹಿಸುತ್ತದೆ. ಮತ್ತು ಇವು ಸಹಜವಾದ ಪ್ರತಿಕ್ರಿಯೆಗಳೆಂದು ತಿಳಿಯುತ್ತದೆ. ಶಾಂತಿ ಮತ್ತು ಭರವಸೆಯಿಂದ ಕೂಡಿದ ಭರವಸೆಗಳೆಂದು, ಆಗ ಎಲ್ಲವೂ ಸುಲಭವಾಗುತ್ತದೆ! ಆದರೆ ಯಾವಾಗ ಆತಂಕ, ಭಯ, ಅತೃಪ್ತಿಯ ತಳಮಳವು ಬರುವುದೋ "ಇದೆಲ್ಲವೂ ನನಗೆ ಬೇಡ" ಎಂಬ ಸಂಕಲ್ಪದ ಪ್ರತಿಕ್ರಿಯೆ ಬರುವುದು, ಆಗ ತತ್‌ಕ್ಷಣ, ಕುದಿಯುವ ನೀರಿನಂತಾಗುವುದು, ಒಂದು ಯಂತ್ರದ ಹಾಗೆ. ಯಾವಾಗ ತೊಂದರೆಯನ್ನು ಭರವಸೆಯಿಂದ ಮತ್ತು ಸರಳತೆಯಿಂದ ಒಪ್ಪಿಕೊಂಡಾಗ, ಅದು ತನ್ನ ಕನಿಷ್ಠ ಪಕ್ಷಕ್ಕೆ ಇಳಿಯುತ್ತದೆ. ಮತ್ತು ಭೌತಿಕ ಹಂತದ ಕಂಪನದಲ್ಲಿಯೂ ವ್ಯತ್ಯಾಸ ತರುತ್ತದೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 25 ಫೆಬ್ರವರಿ, 1961**

## ಸರಳತೆ ಮತ್ತು ಸ್ವಾತಂತ್ರ್ಯ

ನಾವು ಮಾಡುವ ಒಳ್ಳೆಯ ಕಾರ್ಯವೆಂದರೆ, ಯಾವುದೇ ಪೂರ್ವಾಗ್ರಹ ಅಥವಾ ಪೂರ್ವಕಲ್ಪಿತ ವಿಚಾರ ಅಥವಾ ತತ್ವಗಳನ್ನು ಇಟ್ಟುಕೊಳ್ಳಬಾರದು ನೈತಿಕ ತತ್ವಗಳು ನಿರ್ಧಿಷ್ಟ ನಡುವಳಿಕೆ ನಿಯಮಗಳು 'ಏನು ಮಾಡಲೇಬೇಕು' ಮತ್ತು 'ಏನು ಮಾಡಲೇಬಾರದು' ನಮ್ಮ ಪ್ರಗತಿ ಮತ್ತು ನೈತಿಕತೆಯಲ್ಲಿ ಯಾವುದೇ ಪೂರ್ವಾಗ್ರಹ ಪೀಡಿತ ವಿಚಾರಗಳಿರಬಾರದು, ಮತ್ತು ಎಲ್ಲಾ ರೀತಿಯ ಸಾಮಾಜಿಕ ಮತ್ತು ಮಾನಸಿಕ ರೂಢಿಗಳು ಇದಕ್ಕಿಂತ ದೊಡ್ಡ ಅಡೆತಡೆಗಳು ಬೇರೇನೂ ಅಲ್ಲ. ನಾನು ಕೆಲವನ್ನು ಬಲ್ಲೆ, ಅವರು ಈ ಮಾನಸಿಕ ನಿಯಮಗಳಿಂದ ಹೊರಬರಲು ಬಹಳ ವರ್ಷಗಳ ಸಮಯವನ್ನು ಹಾಳು ಮಾಡಿಕೊಂಡಿದ್ದಾರೆ.

ನಮಗೆ ಈ ರೀತಿಯಾಗಿರಲು ಬಂದರೆ ಸರಳತೆಯಿಂದ ನಮ್ಮನ್ನು ನಿಜವಾಗಿ ತೆರೆದಿಟ್ಟುಕೊಂಡರೆ ನಾನು ಅಜ್ಞಾನದಲ್ಲಿರುವೆನು ಎಂದು ಸರಳವಾಗಿ ಒಪ್ಪಿಕೊಳ್ಳುವುದು, ಹೀಗೆ (ತಮ್ಮ ಕೈಯನ್ನು ತೆರೆದಿಟ್ಟು), ಏನು ಇಳಿದು ಬರುವುದೋ ಅದನ್ನು ಸ್ವೀಕರಿಸಲು ತಯಾರಾಗಿ ಆಗ ಏನಾದರೊಂದು ಆಗಬಹುದು.

ಸಹಜವಾಗಿ ಪ್ರಗತಿಯ ಹಸಿವು, ತಿಳಿಯುವ ಹಸಿವು, ತನ್ನನ್ನು ರೂಪಾಂತರ–ಗೊಳಿಸಿಕೊಳ್ಳುವ ಹಸಿವು, ಇದಕ್ಕಿಂತ ಹೆಚ್ಚಾಗಿ 'ಪ್ರೀತಿ' ಮತ್ತು 'ಸತ್ಯಕ್ಕಾಗಿ' ಇರುವ ಹಸಿವು ಇವನ್ನು ಇಟ್ಟುಕೊಂಡರೆ, ನೀನು ಬೇಗ ಮುಂದುವರೆಯುವೆ. ನಿಜವಾಗಿಯೂ ಆ ಹಸಿವು ಮತ್ತು ಅವಶ್ಯಕತೆ, ಇವು ಅತಿ ಅವಶ್ಯಕವಾದದು. ಈ ಅವಶ್ಯಕತೆಯ ಮುಂದೆ ಬೇರೆಲ್ಲವೂ ಮುಖ್ಯವಲ್ಲ.

ನನಗಿದು ಗೊತ್ತು ಎನ್ನುವ ವಿಚಾರಕ್ಕೆ ಅಂಟಿಕೊಳ್ಳುವುದು, ನೀನೇನು ಭಾವಿಸುತ್ತೀಯೋ ಅದಕ್ಕೆ ಅಂಟಿಕೊಳ್ಳುವುದು, ನನಗೇನು ಇಷ್ಟವಾಗುವುದೋ ಅದಕ್ಕೆ ಅಂಟಿಕೊಳ್ಳುವುದು, ಇದು ನಮ್ಮ ಅವಶ್ಯಕತೆಗಳೆಂದು ಅಂದುಕೊಂಡವುಗಳಿಗೆ ಅಂಟಿಕೊಳ್ಳುವುದು, ಜಗತ್ತು ಹೇಗಿದೆಯೋ ಹಾಗೆಯೇ ಇರುವ ಜಗತ್ತಿಗೆ ಅಂಟಿಕೊಳ್ಳುವುದು, ಇದೇ ನಮ್ಮ ಕೈ–ಕಾಲುಗಳನ್ನು ಕಟ್ಟಿಹಾಕುತ್ತದೆ. ಒಂದಾದ ಮೇಲೊಂದು ನಾವು ಬಂಧನಗಳಿಂದ ಹೊರಬರಬೇಕು.

ಇದನ್ನು ಸಾವಿರಬಾರಿ ಹೇಳಲಾಗಿದೆ. ಆದರೆ ಜನರು ಅದನ್ನೇ ಮಾಡುತ್ತಾ ಹೋಗುತ್ತಾರೆ... ಯಾರು ನಿರರ್ಗಳವಾಗಿ ಇನ್ನೊಬ್ಬರಿಗೆ ಬೋಧಿಸುತ್ತಾರೋ ಅವರೂ ಸಹ ಅಂಟಿಕೊಂಡಿರುತ್ತಾರೆ. ಇವರು ತಮ್ಮದೇ ಆದ ನೋಡುವ ರೀತಿಗೆ ಅಂಟಿಕೊಂಡಿರುತ್ತಾರೆ. ತಮ್ಮದೇ ರೀತಿಯ ಭಾವನೆಗಳಿಗೆ, ತಮ್ಮದೇ ರೀತಿಯ ಪ್ರಗತಿಯಾಗುವ ರೂಢಿಗೆ, ಇದೊಂದೆ ರೀತಿ ನಮಗೆ ಸಾಧ್ಯವೆಂದು ಅದಕ್ಕೆ ಅಂಟಿಕೊಂಡಿರುತ್ತಾರೆ.

ಯಾವುದೇ ಬಂಧನಗಳಿಲ್ಲ. ಸ್ವತಂತ್ರ್ಯ, ಸ್ವತಂತ್ರ್ಯ, ಸ್ವತಂತ್ರ್ಯ! ಯಾವಾಗಲೂ ಎಲ್ಲವನ್ನೂ ಬದಲಿಸಲು ತಯಾರಿಯಾಗಿರಬೇಕು. ಒಂದನ್ನು ಬಿಟ್ಟು; ಅಭೀಪ್ಸೆಪಡುವ ಆ "ಹಸಿವು".

ನನಗಿದು ಅರ್ಥವಾಗುತ್ತದೆ. ಕೆಲವೊಂದು ಜನರಿಗೆ ಈ "ದೈವತ್ವ"ವೆಂಬ ಶಬ್ದವು ಇಷ್ಟವಾಗುವುದಿಲ್ಲ. ಅಲ್ಲಿ ಯುರೋಪಿನ ಅಥವಾ ಪಾಶ್ಚಾತ್ಯರ ವಿಚಾರಗಳಲ್ಲಿ ಕಲಬೆರಕೆಯಾಗುತ್ತದೆ. (ಅವು ಭಯಾನಕ ವಿಚಾರಗಳೇ) ಇವು ಅವರ ಜೀವನವನ್ನು ಸ್ವಲ್ಪ ಸಂಕೀರ್ಣಗೊಳಿಸುತ್ತವೆ. ಆದರೆ ನಮಗೆ ಅವು ಬೇಡ!: "ಯಾವುದೋ" ಅವಶ್ಯಕತೆ, ಒಂದು 'ಪರಿಪೂರ್ಣತೆ'ಯ ಅವಶ್ಯಕತೆಯಿದೆ. ನಮಗೆ 'ಬೆಳಕು' ಬೇಕಾಗಿದೆ. ಆ ಪ್ರೀತಿ ನಮಗೆ ಬೇಕಾಗಿದೆ. ಸತ್ಯದ ಅವಶ್ಯಕತೆಯಿದೆ. ಇದಿಷ್ಟೇ ಸೂತ್ರಗಳು. ಎಷ್ಟು ಕಡಿಮೆ ಸೂತ್ರಗಳಿವೆಯೋ ಅಷ್ಟು ಒಳ್ಳೆಯದು ಒಂದು ಅವಶ್ಯಕತೆ,

ಅವಶ್ಯಕತೆ, ಅವಶ್ಯಕತೆ... ಅದು ಮಾತ್ರ ನಮ್ಮನ್ನು ಸಂತೃಪ್ತಗೊಳಿಸುವುದು. ಮತ್ತೇನೂ ಅಲ್ಲ. ಕೇವಲ 'ಅದು' ಆ ಮೇಲೆ ಆ ದಾರಿಯಲ್ಲಿ ಮುಂದುವರೆಯುವುದು! ಅದು ನಿನ್ನದೇ ಮಾರ್ಗವಾಗಿರುತ್ತದೆ. ಇದರ ಬಗ್ಗೆ ವಿಚಾರ ಅನವಶ್ಯಕ, ಯಾವುದೇ ಮಾರ್ಗವಿರಲಿ, ಈಗಿನ ಅಮೇರಿಕದ ಯುವಕರ ತಪ್ಪುಗಳು ಸಹ ಮಾರ್ಗಗಳೇ, ಯಾವುದಾದರೂ ಸರಿ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 7 ಅಕ್ಟೋಬರ್, 1964**

## ಸರಳತೆಯ ಸಂರಚನಾ ಪ್ರಗತಿ

**– ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್, ಬೆಂಗಳೂರು**

### ಜಗಳವಿಲ್ಲದೆ ಜೀವಿಸು

ಯಾರಾದರೂ ಜಗಳವಿಲ್ಲದೆ ಜೀವಿಸಬಹುದು. ಇದು ಆಶ್ಚರ್ಯಕರವಾದ ವಾಕ್ಯ ಎನಿಸಬಹುದು. ಏಕೆಂದರೆ ಈಗಿರುವ ಪರಿಸ್ಥಿತಿಯಲ್ಲಿ ಇದಕ್ಕೆ ವ್ಯತಿರಿಕ್ತವಾಗಿ, ಜಗಳಕ್ಕಾಗಿಯೇ ಜೀವನವಿರುವದು ಅಂದರೆ ಬಹಿರಂಗವಾಗಿ ಅಥವಾ ರಹಸ್ಯವಾಗಿ ಒಟ್ಟಿಗೆ ಜೀವಿಸುವ ಜನರ ಪ್ರಮುಖ ವೃತ್ತಿಯೇ ಜಗಳ ಎನ್ನುವಂತಾಗಿದೆ. ನೀನು ಯಾವಾಗಲೂ ಕೆಟ್ಟ ಮಾತುಗಳನ್ನು ಆಡುವದಿಲ್ಲ. ಅದೃಷ್ಟವಶಾತ್ ಯಾವಾಗಲೂ ಬಡಿದಾಡುವದಿಲ್ಲ – ಅಂದರೆ ಆಂತರಿಕವಾಗಿ ಯಾವಾಗಲೂ ಒಂದು ತರಹ ನಿರಂತರವಾದ ತಳಮಳದ ಅವಸ್ಥೆಯಲ್ಲಿ ಇರುವೆ. ಏಕೆಂದರೆ ನಿನಗೆ ಬೇಕೆನಿಸುವ ಪರಿಪೂರ್ಣತೆಯನ್ನು ನಿನ್ನ ಸುತ್ತಮುತ್ತಲೂ ಕಾಣಸಿರುವದಿಲ್ಲ. ಆ ಪರಿಪೂರ್ಣತೆಯು ನಿನಗೆ ಸಿಗುವದು ಕಷ್ಟವೆಂದೂ ಸಹ ಅನಿಸುತ್ತಿರಬಹುದು. ಆದರೆ ಇತರರು ಅದನ್ನು ಅರಿಯಬೇಕೆಂಬುದು ನಿನ್ನ ಸಹಜ ಅಭಿಲಾಷೆ. ನೀನು ಹೇಳುವೆ: "ಅವರು ಹಾಗಿರಲು ಹೇಗೆ ಸಾಧ್ಯ?" ಹಾಗಿರದಿರುವದು "ಎಷ್ಟು ಕಷ್ಟ ನಿನಗೆ ಎಂಬುದನ್ನು ನೀನು ಮರೆತುಬಿಡುವೆ"!

ಪ್ರಯತ್ನಿಸು, ನೀನು ಅದನ್ನು ಕಾಣುವೆ.

ದಯಾಭರಿತ ಮುಗುಳ್ನಗೆಯೊಂದಿಗೆ ಎಲ್ಲದರ ಕಡೆ ದೃಷ್ಟಿ ಹರಿಸು. ನಿನ್ನನ್ನು ಕೆರಳಿಸುವ ಎಲ್ಲ ವಿಷಯಗಳು ನಿನಗೆ ಒಂದು ಪಾಠವನ್ನು ಕಲಿಸುತ್ತಿವೆ ಎಂದು ಪರಿಗಣಿಸು. ಆಗ ನಿನ್ನ ಜೀವನವು ಹೆಚ್ಚು ಶಾಂತವಾಗಿರುವದು ಮತ್ತು ಹೆಚ್ಚು

ಪರಿಣಾಮಕಾರಿಯಾಗಿ ಇರುವದು ಸಹ. ಏಕೆಂದರೆ ನಿನ್ನಲ್ಲಿ ಯಾವ ಪರಿಪೂರ್ಣತೆಯ ಅರಿವು ಉಂಟಾಗಬೇಕಾಗಿದೆಯೋ ಅದು ಇತರರಲ್ಲಿ ಕಾಣದಿರುವಾಗ ಉಂಟಾಗುವ ಕಿರಿಕಿರಿಯಿಂದ ನಿನ್ನ ಚೈತನ್ಯದ ಬಹುಪಾಲು ಉಪಯೋಗವಾಗದೆ ನಷ್ಟವಾಗಿ ಹೋಗುವದು.

ಇತರರು ಪಡೆಯಬೇಕಾಗಿರುವ ಪರಿಪೂರ್ಣತೆಯ ಬಗ್ಗೆ ಚಿಂತಿಸುವದನ್ನು ನಿಲ್ಲಿಸಿಬಿಡು. ನೀನು ಸ್ವತಃ ಯಾವ ಧ್ಯೇಯದತ್ತ ಮುನ್ನಡೆಯಬೇಕೆಂಬುದರ ಪ್ರಜ್ಞೆಯನ್ನೇ ಹೊಂದಿಲ್ಲ. ನೀನು ಅದರ ಬಗ್ಗೆ ಜಾಗರೂಕನಾದರೆ, ಆಗ, ನಿನಗೆ ಕೊಡಲಾಗಿರುವ ಕಾರ್ಯವನ್ನು ಪ್ರಾರಂಭಿಸು. ಅಂದರೆ, ನೀನು ಏನು ಮಾಡಬೇಕಾಗಿದೆಯೋ ಅದನ್ನು ಅರಿತುಕೋ. ಇತರರು ಏನು ಮಾಡುತ್ತಿರುವರು? ಎಂಬುದರ ಬಗ್ಗೆ ನೀನು ಯೋಚಿಸದಿರು. ಏಕೆಂದರೆ ಅದು ನಿನಗೆ ಸಂಬಂಧಿತವಾದ ವಿಷಯವಲ್ಲ. ಸಮರ್ಪಕವಾದ ಮನೋಭಾವವನ್ನು ಹೊಂದಿರುವ ದಾರಿ ಯಾವುದೆಂದರೆ, ಸಹಜವಾಗಿ ಹೀಗೆ ಹೇಳುವದು: "ನನ್ನ ಸುತ್ತಮುತ್ತಲಿರುವ ಎಲ್ಲವೂ, ನನ್ನ ಜೀವನದ ಎಲ್ಲಾ ಪರಿಸ್ಥಿತಿಗಳು, ನನ್ನ ಬಳಿ ಇರುವ ಎಲ್ಲಾ ಜನರು, ನಾನು ಪಡೆಯಬೇಕಾಗಿರುವ ಪ್ರಗತಿಯನ್ನು ತೋರಿಸಲು ದೈವೀ ಪ್ರಜ್ಞೆಯು ನನ್ನ ಮುಂದೆ ಹಿಡಿದ ಕನ್ನಡಿಯಾಗಿದೆ. ಇತರರಲ್ಲಿ ಯಾವುದನ್ನು ಕಂಡು ನನಗೆ ಆಘಾತವಾಗುವದೋ ಅದು ನನ್ನ ಆಂತರ್ಯದಲ್ಲಿ ನೆರವೇರಬೇಕಾಗಿರುವ ಕಾರ್ಯದ ಸೂಚಕ."

ಮತ್ತು ಬಹುಶಃ ಯಾರಾದರೂ ನೈಜ ಪರಿಪೂರ್ಣತೆಯನ್ನು ತಮ್ಮಲ್ಲಿ ಹೊಂದಿದ್ದರೆ ಅದನ್ನೇ ಅವರು ಇತರರಲ್ಲಿ ಅನೇಕ ಸಲ ಕಾಣುವರು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/22–23**

### ಯಾರಿಗಾದರೂ ಸ್ವಲ್ಪ ಕಾಲಾವಕಾಶ ದೊರಕಿದಾಗ

ಜೀವನದ ಹಾದಿಯಲ್ಲಿ ಒಂದು ವಿಧವಾದ ಶೂನ್ಯತೆಯು ಎಷ್ಟು ಸಲ ಅನುಭವಕ್ಕೆ ಬರುವದು. ಖಾಲಿಯಾಗಿರುವ ಕ್ಷಣ, ಕೆಲವು ನಿಮಿಷಗಳು, ಕೆಲವು ವೇಳೆ ಇನ್ನೂ ಹೆಚ್ಚು. ಮತ್ತು ನೀನು ಆಗ ಏನು ಮಾಡುವೆ? ತಕ್ಷಣವೇ ನಿನ್ನ ಗಮನವನ್ನು ಬೇರೊಂದು ಕಡೆ ಹರಿಸಲು ಪ್ರಯತ್ನಿಸುವೆ. ಕಾಲ ಕಳೆಯಲು ಏನೋ ಉಪಯೋಗರಹಿತವಾದುದನ್ನು ಮಾಡತೊಡಗುವೆ.

ಇದು ಸಹಜವಾಗಿ ಯಾವಾಗಲೂ ನಡೆಯುವ ಪ್ರಕ್ರಿಯೆ. ಎಲ್ಲಾ ಜನರು ತುಂಬಾ ಚಿಕ್ಕವರಿಂದ ಪ್ರಾರಂಭಿಸಿ ಅತಿ ಹೆಚ್ಚು ವಯಸ್ಸಾದವರವರೆಗೂ, ಬೇಸರವಾಗದಿರುವಂತೆ ಮಾಡಲು ತಮ್ಮ ಹೆಚ್ಚು ಕಾಲವನ್ನು ವ್ಯಯಿಸುವರು. ಅವರಿಗೆ ಬೇಡದಿರುವದು ಬೇಸರ. ಅದರಿಂದ ತಪ್ಪಿಸಿಕೊಳ್ಳಲು ಯಾವುದೋ ಬೇಡದಿರುವ ಕೆಲಸವನ್ನು ಮಾಡುವರು.

ಸರಿ, ಅದಕ್ಕಿಂತಲೂ ಉತ್ತಮವಾದ ದಾರಿಯೊಂದು ಇದೆ – ನೆನಪಿನಲ್ಲಿ ಇಟ್ಟುಕೊಳ್ಳಬೇಕು.

ನಿನಗೆ ಸ್ವಲ್ಪ ಕಾಲಾವಕಾಶ ದೊರಕಿದರೆ, ಅದು ಒಂದು ಗಂಟೆಯೇ ಆಗಿರಲಿ ಅಥವಾ ಕೆಲವು ನಿಮಿಷಗಳೇ ಆಗಿರಲಿ, ನಿಮಗೆ ನೀವೇ ಹೀಗೆ ಹೇಳಿಕೊಳ್ಳಿ: ಕೊನೆಗೂ, ನನ್ನ ಗಮನವನ್ನು ಕೇಂದ್ರೀಕರಿಸಲು ಸ್ವಲ್ಪ ಸಮಯ ಸಿಕ್ಕಿತು; ನನ್ನನ್ನು ಒಗ್ಗೂಡಿಸಿಕೊಳ್ಳಲು, ನನ್ನ ಜೀವನದ ಗುರಿಯನ್ನು ಜೀವಂತಗೊಳಿಸಲು, ಸತ್ಯ ಮತ್ತು ನಿರಂತರತೆಗೆ ನನ್ನನ್ನು ನಾನು ಸಮರ್ಪಣೆ ಮಾಡಲು, "ಪ್ರತಿಯೊಂದು ಸಲ ಬಾಹ್ಯ ಪರಿಸ್ಥಿತಿಗಳಿಂದ ಹೊರಗೆ ನಿನಗೆ ಸ್ವಲ್ಪ ಕಾಲಾವಕಾಶ ಸಿಕ್ಕಾಗಲೆಲ್ಲಾ ನೀನು ಇದನ್ನು ಮಾಡಿದರೆ, ನಿನ್ನ ಪಥದಲ್ಲಿ ಶೀಘ್ರವಾಗಿ ಮುನ್ನಡೆಯುತ್ತಿರುವ ಅನುಭವವು ನಿನಗೆ ಉಂಟಾಗುವದು." ಹರಟೆಯಲ್ಲಿ ಕಾಲ ಕಳೆಯದೆ, ಉಪಯೋಗರಹಿತ ಕಾರ್ಯಗಳನ್ನು ಮಾಡದೆ, ನಿನ್ನ ಪ್ರಜ್ಞೆಯನ್ನು ಕೆಳ ಹಂತಕ್ಕೆ ತರುವ ಪುಸ್ತಕಗಳನ್ನು ಓದದೆ, ಹೀಗೆ ಮಾಡಿದರೆ ಅತ್ಯಂತ ಉಪಯುಕ್ತ ಜೀವನವು ನಿನ್ನದಾಗುವದು – ಅತ್ಯುತ್ತಮವಾದ ಉದಾಹರಣೆಗಳನ್ನು ಮಾತ್ರ ಆರಿಸಿಕೊಂಡಿರುವೆ. ಇನ್ನೂ ಹೆಚ್ಚು ಗಂಭೀರ ಪರಿಸ್ಥಿತಿಗಳನ್ನು ಉಂಟುಮಾಡುವ ಇತರ ತಿಳಿಗೇಡಿತನಗಳ ಬಗ್ಗೆ ನಾನು ಮಾತನಾಡುತ್ತಿಲ್ಲ – ನಿನಗೆ ತಲೆಸುತ್ತುವಂತೆ ಮಾಡಿಕೊಳ್ಳುವದರ ಬದಲಾಗಿ, ಈಗಾಗಲೇ ಸಮಯವು ಕಡಿಮೆ ಇದೆ. ಅದನ್ನು ಇನ್ನೂ ಹೆಚ್ಚು ಕಡಿಮೆ ಮಾಡಿಕೊಳ್ಳುವದು ಬೇಡ. ಇಲ್ಲದೆ ಹೋದರೆ ನಿನ್ನ ಜೀವನದ ಅಂತ್ಯ ಕಾಲದಲ್ಲಿ ನಿನಗೆ ಸಿಕ್ಕ ಅವಕಾಶದಲ್ಲಿ ಮುಕ್ಕಾಲು ಭಾಗ ಕಳೆದುಕೊಂಡಿರುವೆಯೆಂಬ ಅರಿವಾಗುವದು. – ಆಗ ನೀನು ದುಪ್ಪಟ್ಟು ಕೆಲಸ ಮಾಡಲು ಪ್ರಯತ್ನಿಸುವೆ, ಆದರೆ ಅದು ಸಾಧ್ಯವಾಗುವದಿಲ್ಲ. ಆದುದರಿಂದ ಮಧ್ಯಮ ನಿಖರತೆ, ಸಮತೋಲನದೊಂದಿಗೆ, ತಾಳ್ಮೆಯಿಂದದೊಡಗೂಡಿ, ಮೌನವಾಗಿ ಇರುವದು ಅತ್ಯುತ್ತಮವೆನಿಸುವದು. ಆದರೆ ನಿನಗೆ ನೀಡಿರುವ ಅವಕಾಶವನ್ನು ನೀನು ಎಂದಿಗೂ ಕಳೆದುಕೊಳ್ಳಬಾರದು. ಅಂದರೆ ನಿನ್ನ ಮುಂದಿರುವ ಖಾಲಿ ಕ್ಷಣವನ್ನು ನೈಜ ಗುರಿಗೆ ಉಪಯೋಗಿಸಿಕೊಳ್ಳಬೇಕು.

ನಿನಗೆ ಮಾಡಬೇಕಾದ ಕೆಲಸವೇನೂ ಇಲ್ಲದಿರುವಾಗ, ನೀನು ಪ್ರಕ್ಷುಬ್ಧಗೊಳ್ಳುವೆ, ನೀನು ನಡಿಗೆಯಲ್ಲಿ ತೊಡಗುವೆ, ಗೆಳೆಯರನ್ನು ಭೇಟಿಯಾಗುವೆ, ತಿರುಗಾಡಲು ಹೋಗುವೆ, ಅತ್ಯುತ್ತಮವಾದುದನ್ನು ಮಾತ್ರ ಹೇಳುತ್ತಿರುವೆ. ಯಾವ ಕೆಲಸವನ್ನು ಮಾಡಬಾರದು ಎಂಬುದರ ಬಗ್ಗೆ ನಾನು ಮಾತನಾಡುತ್ತಿಲ್ಲ. ಅದರ ಬದಲಾಗಿ, ಆಕಾಶದ ಮುಂದೆ ಅಥವಾ ಸಮುದ್ರದ ಮುಂದೆ ಮೌನವಾಗಿ ಕುಳಿತುಕೋ, ಅಥವಾ ಮರಗಳ ಕೆಳಗೆ ಕುಳಿತುಕೋ ನಿನಗೆ ಯಾವುದು ಸಾಧ್ಯವೋ ಅದನ್ನು ಮಾಡು (ಇಲ್ಲಿ ನಿನಗೆ ಅವೆಲ್ಲವೂ ಇದೆ) ಮತ್ತು ಇವುಗಳಲ್ಲಿ ಯಾವುದಾದರೂ ಒಂದನ್ನು ಅರಿಯಲು ಪ್ರಯತ್ನಿಸು – ನೀನೇಕೇ ಜೀವಿಸುತ್ತಿರುವೆ? ನೀನು ಹೇಗೆ ಬದುಕಬೇಕು? ನೀನು ಏನು ಮಾಡಬೇಕಾಗಿದೆ? ಅದಕ್ಕೆ ಯಾವ ರೀತಿ ಪ್ರಯತ್ನಿಸಬೇಕು? ಎಂದು ಯೋಜಿಸು. ನಿನ್ನ ಜೀವನದಲ್ಲಿ ಈಗ ಇರುವ ಅಜ್ಞಾನ, ಸುಳ್ಳು ಮತ್ತು ನೋವಿನಿಂದ ಪಾರಾಗಲು ಇರುವ ಅತ್ಯುತ್ತಮ ದಾರಿ ಯಾವುದೆಂದು ಆಲೋಚನೆ ಮಾಡು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/253–54**

**ಸಂತಸ**

ಈ ಸಾಲುಗಳಲ್ಲಿ ಒಂದು ಅತ್ಯಂತ ಸುಂದರವಾಗಿದೆ. ನಾವು ಅದನ್ನು ಹೀಗೆ ಅನುವಾದಿಸಬಹುದು: "ಯಾರು ತನ್ನ ಸ್ವಂತವಾದುದೆಂದು ಏನನ್ನೂ ಇಟ್ಟುಕೊಂಡಿಲ್ಲವೋ ಆತನು ಪ್ರಕಾಶಮಾನವಾದ ದೇವತೆಗಳ ಮಹದಾನಂದದಲ್ಲಿ ಭಾಗವನ್ನು ಪಡೆಯುವನು." ಏನನ್ನು ಹೊಂದಿಲ್ಲದಿರುವದು ಎಂಬುದರ ಅರ್ಥ ಏನನ್ನೂ ಉಪಯೋಗಿಸಬಾರದು ಎಂದಲ್ಲ. "ಯಾವುದನ್ನೂ ತನ್ನ ಸ್ವಾಧೀನದಲ್ಲಿ ಇರಿಸಿಕೊಳ್ಳಬಾರದು" ಎಂಬುದು ಮಾತ್ರವೇ ಅದರ ಅರ್ಥ. "ಏನನ್ನೂ ಹೊಂದಿಲ್ಲದಿರುವವನು ಸಂತಸದಿಂದ ಇರುವನು" ಯಾರು ಯಾವುದನ್ನೂ ತನ್ನ ಸ್ವಾಧೀನದಲ್ಲಿದೆ ಎನ್ನುವದಿಲ್ಲವೋ, ಯಾರಿಗೆ ಯಾವುದೂ ತನ್ನ ಸ್ವಂತ ಎಂಬ ಭಾವನೆಯೇ ಇಲ್ಲವೋ ಆತನು ಸಂತಸದಿಂದಿರುವನು. ಆತನು ಯಾವುದೇ ವಸ್ತುಗಳು ತನ್ನ ಬಳಿಗೆ ಬಂದಾಗ ಅವುಗಳನ್ನು ಉಪಯೋಗಿಸುವನು, ಆದರೆ ಅವು ತನ್ನವೆಂದು ತಿಳಿಯುವದಿಲ್ಲ. ಅವು ಪರಮೋತ್ತಮನಿಗೆ ಸೇರಿದವು ಎಂದು ತಿಳಿಯುವನು, ಮತ್ತು ಇದೇ ಕಾರಣಕ್ಕಾಗಿ ಆ ವಸ್ತುಗಳು ಆತನಿಂದ ದೂರವಾದಾಗ ನೋವನ್ನು ಅನುಭವಿಸುವದಿಲ್ಲ. ಆತನು ಭಗವಂತನು ನನಗೆ ಈ ವಸ್ತುಗಳನ್ನು ನೀಡಿದ್ದನು. ಇತರರು ಅವುಗಳಿಂದ ಸಂತಸವನ್ನು ಅನುಭವಿಸಲೆಂದು ಈಗ ನನ್ನಿಂದ

ಆ ವಸ್ತುಗಳನ್ನು ತೆಗೆದುಕೊಳ್ಳುತ್ತಿದ್ದಾನೆ. ಅದು ನಿಜಕ್ಕೂ ಅತ್ಯಂತ ಸಹಜವಾದ ವಿಷಯ ಎಂದು ಭಾವಿಸುವನು. ಅಂತಹ ಮಾನವನು ವಸ್ತುಗಳನ್ನು ಉಪಯೋಗಿಸುವದರಲ್ಲಿ ಮತ್ತು ವಸ್ತುಗಳು ಇಲ್ಲದಿದ್ದಾಗಲೂ ಅಷ್ಟೇ ಸಂತಸಯುಕ್ತನಾಗಿರುವನು. ಅವುಗಳು ನಿನ್ನ ಹತೋಟಿಯಲ್ಲಿ ಇದ್ದಾಗ ಅವು ಭಗವಂತನ ಅನುಗ್ರಹವೆಂದು ಸ್ವೀಕರಿಸು. ಅವುಗಳು ನಿನ್ನನ್ನು ತೊರೆದಾಗ ಅಥವಾ ಅವುಗಳನ್ನು ನಿನ್ನಿಂದ ತೆಗೆದು ಹಾಕಲಾದಾಗ ನೀನು ನಿರ್ಮಲತೆಯನ್ನು ಹೊಂದಿದ ಸಂತಸವನ್ನು ಅನುಭವಿಸು. ಏಕೆಂದರೆ ಯಾವುದೇ ವಸ್ತುವು ನನ್ನ ಅಧೀನದಲ್ಲಿದೆ. ನಾನು ಅದರ ಯಜಮಾನ ಎಂಬ ಭಾವವೇ ನಿನ್ನನ್ನು ಆ ವಸ್ತುಗಳಿಗೆ ಅಂಟಿಕೊಳ್ಳುವಂತೆ ಮಾಡುವದು; ನಿನ್ನನ್ನು ಅವುಗಳ ಗುಲಾಮನನ್ನಾಗಿಸುವದು. ಹಾಗಿಲ್ಲದೆ ಇದ್ದರೆ ಯಾರಾದರೂ ಶಾಶ್ವತವಾದ ಆನಂದಲ್ಲಿ ಜೀವಿಸಬಹುದು. ವಸ್ತುಗಳು ನಿರಂತರವಾಗಿ ಚಲಿಸುತ್ತಲೇ ಇರುವವು. ಅವು ಬರುತ್ತವೆ, ಹೋಗುತ್ತವೆ ಮತ್ತು ದಾಟಿ ಹೋಗುವವು. ಅವುಗಳು ಇರುವಾಗ ಒಂದು ವಿಧವಾದ ಪೂರ್ಣತೆಯ ಭಾವವನ್ನು ತಮ್ಮೊಂದಿಗೆ ತರುವವು ಮತ್ತು ಅವು ಹೊರಟುಹೋದಾಗ ಬೇರ್ಪಟ್ಟ ಆನಂದವು ಉಂಟಾಗುವದು, ಮಹದಾನಂದ!

ಮಹದಾನಂದವೆಂದರೆ ಸತ್ಯದಲ್ಲಿ ಜೀವಿಸುವದು, ನಿರಂತರತೆಯ ಸಹವಾಸದಲ್ಲಿ ಜೀವಿಸುವದು, ನೈಜ ಜೀವನದೊಂದಿಗೆ, ಎಡೆಬಿಡದ ಪ್ರಕಾಶದೊಂದಿಗೆ.

ಮಹದಾನಂದವೆಂದರೆ ಸ್ವಾತಂತ್ರ್ಯ. ನೈಜ ಸ್ವಾತಂತ್ರ್ಯದೊಂದಿಗೆ ಸ್ವತಂತ್ರ–ವಾಗಿರುವದು. ದೈವೀ ಸಂಕಲ್ಪದೊಂದಿಗೆ ಬದಲಾಗದ, ನಿರಂತರವಾದ ಸಂಪರ್ಕವನ್ನು ಹೊಂದಿರುವ ಸ್ವಾತಂತ್ರ್ಯ. ಶಾಶ್ವತವಾದವರು ದೇವತೆಗಳು. ಅವರು ಸುಳ್ಳು, ಅವಾಸ್ತವಿಕತೆ, ಕ್ಷುಲ್ಲಕತೆ, ಸಂಕುಚಿತತೆಗಳನ್ನು ಒಳಗೊಂಡಿರುವ ಭೌತಿಕ ಜೀವನದ ಬದಲಾವಣೆಗಳಿಂದ ಬಂಧಿತರಾಗಿಲ್ಲ.

ಪ್ರಕಾಶದ ಕಡೆ ತಿರುಗಿರುವವರು ದೇವತೆಗಳು. ಅವರು ಸಾಮರ್ಥ್ಯ ಮತ್ತು ಜ್ಞಾನದಲ್ಲಿ ಜೀವಿಸುವರು. ಬುದ್ಧನು ಹೇಳುವದರ ಅರ್ಥ ಅದೇ ಆಗಿದೆ. ಆತನು ಮತೀಯತೆಗೆ ಸಂಬಂಧಿಸಿದ ದೇವತೆಗಳ ಬಗ್ಗೆ ಮಾತನಾಡುತ್ತಿಲ್ಲ. ಅವರು ದೈವೀ ಸ್ವಭಾವವನ್ನು ಹೊಂದಿರುವ ಸತ್ತೆಗಳಾಗಿದ್ದಾರೆ. ಅವರು ಮಾನವ ದೇಹಗಳಲ್ಲಿ ಜೀವಿಸುತ್ತಿರಬಹುದು ಆದರೆ ಅಜ್ಞಾನ ಮತ್ತು ಸುಳ್ಳಿನಿಂದ ದೂರವಾಗಿದ್ದಾರೆ.

ನೀನು ಯಾವುದನ್ನೂ ಹೊಂದಿರದಿದ್ದಾಗ, ವಿಶ್ವದಷ್ಟು ವಿಶಾಲವಾಗಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/253–54**

## ಬುದ್ಧಿವಂತನಾಗಿರುವದು

ಬುದ್ಧಿವಂತನಾಗಲು ಕೊಡುವ ಉಪಾಯಗಳು ಸಾಮಾನ್ಯವಾಗಿ ಅತ್ಯಂತ ಕೆಳಮಟ್ಟದವಾಗಿರುವವು ಎಂಬುದು ನನ್ನ ಅನಿಸಿಕೆ: “ಇದನ್ನು ಮಾಡಬೇಡ, ಅದು ನಿನಗೆ ದುಃಖವನ್ನು ತರುವದು. ಅದನ್ನು ಮಾಡಬೇಡ. ಅದು ನಿನ್ನಲ್ಲಿ ಭಯವನ್ನು ಹುಟ್ಟುಹಾಕುವದು”.... ಮತ್ತು ಪ್ರಜ್ಞೆಯು ಹೆಚ್ಚು ಹೆಚ್ಚು ಒಣಗಿ ನಿತ್ರಾಣವಾಗುವದು, ಅದು ಗಟ್ಟಿಯಾಗುವದು. ಏಕೆಂದರೆ ಅದು ದುಃಖ ಮತ್ತು ನೋವಿಗೆ ಭಯಪಡುವದು.

ಪ್ರಜ್ಞೆಯ ಒಂದು ನಿರ್ದಿಷ್ಟ ಅವಸ್ಥೆ ಇದೆ – ಅದನ್ನು ಅಭೀಪ್ಸೆ ಮತ್ತು ಆಂತರಿಕ ಪ್ರಯತ್ನಗಳಿಂದ ಯಾರು ಬೇಕಾದರೂ ಪಡೆಯಬಹುದು ಎಂದು ಹೇಳುವದು ಉತ್ತಮವಾದ ರೀತಿ ಎಂಬುದು ನನ್ನ ಅಭಿಪ್ರಾಯ – ಆ ಅವಸ್ಥೆಯಲ್ಲಿ ಸಂತಸವು ಕಲಬೆರಕೆಯಾಗಿಲ್ಲ ಮತ್ತು ಬೆಳಕು ನೆರಳನ್ನು ಹೊಂದಿಲ್ಲ. ಜೊತೆಗೆ ಭಯದ ಎಲ್ಲಾ ಸಾಧ್ಯತೆಗಳೂ ಕಾಣದಾಗುವವು. ಈ ಅವಸ್ಥೆ ಇರುವವನು ತನಗಾಗಿ ಜೀವಿಸುವದಿಲ್ಲ. ಆದರೆ ಆ ಜೀವನದಲ್ಲಿ ಆತನು ಏನೆಲ್ಲಾ ಮಾಡುವದು, ಆತನ ಎಲ್ಲಾ ಭಾವನೆಗಳೂ ಎಲ್ಲಾ ಚಲನೆಗಳು ಪರಮೋತ್ತಮನಿಗೆ ಮಾಡಿದ ಸಮರ್ಪಣೆಗಳಾಗಿವೆ. ಈ ಅರ್ಪಣೆಯನ್ನು ಸಂಪೂರ್ಣ ಶ್ರದ್ಧಾಯುಕ್ತನಾಗಿ ಮಾಡಲಾಗುವದು. ಆತನು ತನ್ನ ಜವಾಬ್ದಾರಿಯಿಂದ ಸಂಪೂರ್ಣವಾಗಿ ಮುಕ್ತನಾಗಿರುವನು. ಈ ಭಾರವನ್ನು ಪೂರ್ತಿಯಾಗಿ ಆತನಿಗೆ (ಭಗವಂತನಿಗೆ) ವಹಿಸಲಾಗಿರುವದರಿಂದ ಅದು ಈಗ ಭಾರವಾಗಿ ಉಳಿದಿಲ್ಲ.

ಯಾವುದೇ ಜವಾಬ್ದಾರಿಯನ್ನು ಹೊಂದಿಲ್ಲದಿರುವ ಅನುಭವವು ವ್ಯಕ್ತಪಡಿಸಲು ಅಸಾಧ್ಯವಾದಷ್ಟು ಸಂತಸವನ್ನು ನೀಡುವದು. ಆಗ ಆತನು ತನ್ನ ಬಗ್ಗೆ ಯೋಚಿಸಬೇಕಾಗಿಲ್ಲ. ಎಷ್ಟು ಮಂದ ಬುದ್ಧಿಯ ಕಾರ್ಯ, ಎಷ್ಟು ಏಕತಾನತೆಯನ್ನು ಹೊಂದಿದೆ, ಮತ್ತು ಎಷ್ಟು ನಿಸ್ಸಾರವಾದುದು ತನ್ನ ಬಗ್ಗೆ ಯೋಚಿಸುವದು. ಜೊತೆಗೆ ಏನು ಮಾಡಬೇಕು? ಏನು ಮಾಡಬಾರದು ಯಾವುದು ನಿನಗೆ ಒಳ್ಳೆಯದು ಮತ್ತು ಯಾವುದು ನಿನಗೆ ಕೆಟ್ಟದು, ಯಾವುದನ್ನು ತೊರೆಯಬೇಕು? ಯಾವುದನ್ನು ಮುಂದುವರೆಸಬೇಕು – ಓ ಇದೆಲ್ಲಾ ಅತ್ಯಂತ ಬೇಸರದ ಕೆಲಸ! ಆದರೆ ಯಾರಾದರೂ ಹೀಗೆ ಜೀವಿಸಿದರೆ, ಪೂರ್ಣಮುಕ್ತವಾಗಿ, ಪರಮೋತ್ತಮ ಪ್ರಜ್ಞೆ ಅತ್ಯುತ್ತಮ ಬೆಳಕು, ಪರಮೋತ್ತಮ ಪ್ರೇಮದ ಮುಂದೆ, ಮುಕ್ತವಾಗಿ ಸೂರ್ಯನ ಬೆಳಕಿನಲ್ಲಿ ಅರಳುತ್ತಿರುವ ಹೂವಿನಂತೆ! ಅದು ಎಲ್ಲವನ್ನೂ ಅರಿತಿದೆ, ಅದು

ಸಮಸ್ತವನ್ನೂ ಮಾಡಬಲ್ಲದು. ಅದು ನಿನ್ನ ಹೊಣೆಯನ್ನು ತನ್ನದಾಗಿಸಿಕೊಳ್ಳುವದು ಮತ್ತು ನಿನಗೆ ಆಗ ಯಾವ ಚಿಂತೆಯೂ ಇರುವದಿಲ್ಲ – ಅದೇ ಪರಿಪೂರ್ಣ ಅವಸ್ಥೆ.

ಅದನ್ನು ಏಕೆ ಮಾಡುವದಿಲ್ಲ?

ಯಾರೂ ಅದರ ಬಗ್ಗೆ ಯೋಚಿಸುವದಿಲ್ಲ, ಅದನ್ನು ಮಾಡಲು ಮರೆಯುವರು.. ಹಳೆಯ ಅಭ್ಯಾಸಗಳು ಬರುವವು. ಮತ್ತು ಎಲ್ಲಕ್ಕಿಂತಲೂ ಹೆಚ್ಚಾಗಿ ಹಿಂದುಗಡೆ, ಜಡ ಚೇತನದಲ್ಲಿ ಅಥವಾ ಅಧೋ ಚೇತನದಲ್ಲಿಯೂ ಸಹ, ಎಲ್ಲೋ ಅಡಗಿರುವ, ಈ ಅಸಂಬದ್ಧ ಸಂಶಯವು ನಿನ್ನ ಕಿವಿಯಲ್ಲಿ ಹೀಗೆ ಪಿಸುಗುಟ್ಟುವದು: ಓ! ನೀನು ಜಾಗರೂಕವಾಗಿ ಇರದಿದ್ದರೆ, ನಿನಗೆ ಹಲವಾರು ದುರಂತಗಳು ಸಂಭವಿಸುವವು. ನೀನು ನಿನ್ನ ಬಗ್ಗೆ ಕಾಳಜಿವಹಿಸದಿದ್ದರೆ, ಏನು ಬೇಕಾದರೂ ಸಂಭವಿಸಬಹುದು – ಮತ್ತು ನೀನು ಎಷ್ಟು ಪೆದ್ದ, ಎಂತಹ ಪೆದ್ದನೆಂದರೆ, ಎಂತಹ ಅಸ್ಪಷ್ಟತೆಯನ್ನು ಹೊಂದಿರುವೆಯೆಂದರೆ ಅಥವಾ ನೀನು ಎಷ್ಟು ಮೂರ್ಖನೆಂದರೆ ಆ ನುಡಿಗಳನ್ನು ಆಲಿಸುವೆ ಮತ್ತು ನಿನಗೆ ನೀನು ಗಮನಕೊಡುವದರಲ್ಲಿ ಮಗ್ನನಾಗುವೆ. ಮತ್ತು ಎಲ್ಲವೂ ನಾಶವಾಗುವದು.

ಒಂದು ಸ್ವಲ್ಪ ಜ್ಞಾನ, ಸ್ವಲ್ಪ ಸಾಮಾನ್ಯ ಪ್ರಜ್ಞೆ ನಿನ್ನ ಕಣಗಳ ಒಳಗೆ ತುಂಬಲು ನೀನು ಮತ್ತೊಮ್ಮೆ ಮೊದಲಿನಿಂದ ಪ್ರಾರಂಭಿಸಬೇಕಾಗುವದು ಮತ್ತು ಮತ್ತೊಮ್ಮೆ ಚಿಂತಿಸದಿರುವ ಅಭ್ಯಾಸವನ್ನು ಕಲಿಯಬೇಕಾಗುವದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/256–57**

## ನುಡಿಯಲೇಬೇಕಾಗಿರುವ ಮಾತುಗಳನ್ನು ಮಾತ್ರ ಹೇಳು

ನಿಮ್ಮಲ್ಲಿ ಪ್ರತಿಯೊಬ್ಬರೂ ಇದನ್ನು ಪ್ರಯತ್ನಿಸಬೇಕೆಂದು ನಾನು ಸೂಚಿಸುತ್ತಿರುವೆ – ಓ! ಬಹಳ ಸಮಯವಲ್ಲ, ಒಂದು ದಿನದಲ್ಲಿ ಒಂದು ಗಂಟೆ ಮಾತ್ರ – ಹೇಳದೆ ಇರಲು ಸಂಪೂರ್ಣವಾಗಿ ಅಸಾಧ್ಯವಾದ ಮಾತುಗಳನ್ನು ಹೊರತುಪಡಿಸಿ ಬೇರೆ ಏನನ್ನೂ ಹೇಳಬಾರದು. ಒಂದು ಪದ ಹೆಚ್ಚಾಗಿ ಅಥವಾ ಒಂದು ಪದ ಕಡಿಮೆ ಹೇಳಬಾರದು.

ನಿನ್ನ ಜೀವನದ ಒಂದು ಗಂಟೆಯನ್ನು ತೆಗೆದುಕೋ, ನಿನಗೆ ಅತ್ಯಂತ ಅನುಕೂಲಕರವಾದುದನ್ನೇ ಆರಿಸಿಕೋ. ಆ ಅವಧಿಯಲ್ಲಿ ನಿನ್ನನ್ನೇ ನೀನು

ನಿಕಟವಾಗಿ ಗಮನಿಸು ಮತ್ತು ಸಂಪೂರ್ಣವಾಗಿ ಹೇಳದೆ ಇರಲೂ ಅಸಾಧ್ಯವಾದ ಮಾತುಗಳನ್ನು ಮಾತ್ರ ಹೇಳು.

ಮೊದಲಿಗೆ, ಯಾವ ಮಾತುಗಳನ್ನು ಹೇಳಲೇಬೇಕಾಗಿದೆ ಮತ್ತು ಯಾವ ಮಾತುಗಳನ್ನು ನುಡಿಯಬೇಕಾಗಿಲ್ಲ ಎಂಬುದನ್ನು ಅರಿಯುವದೇ ಬಹಳ ಕಷ್ಟ. ಅದೇ ಸ್ವತಃ ಒಂದು ಅಧ್ಯಯನ ಮತ್ತು ಪ್ರತಿದಿನ ನೀನು ಹೆಚ್ಚು ಹೆಚ್ಚು ಪ್ರಗತಿಯನ್ನು ಹೊಂದುವೆ.

ನಂತರದಲ್ಲಿ, ಯಾರಾದರೂ ಏನಾದರೂ ಹೇಳದೆ ಇರುವವರೆಗೂ, ಸಂಪೂರ್ಣವಾಗಿ ಮೌನವಾಗಿರುವದು ಕಷ್ಟಕರವಲ್ಲ ಎಂಬುದನ್ನು ನೀನು ಕಾಣುವೆ. ಆದರೆ ನೀನು ಮಾತನಾಡಲು ಪ್ರಾರಂಭಿಸುತ್ತಿದ್ದಂತೆ ಯಾವಾಗಲೂ ಅಥವಾ ಅನೇಕ ಸಲ ಎರಡು ಅಥವಾ ಮೂರು ಅಥವಾ 10 ಅಥವಾ 20 ಅನುಪಯುಕ್ತ ಪದಗಳನ್ನು ನೀನು ಹೇಳುವೆ. ಅವುಗಳನ್ನು ಹೇಳುವ ಅಗತ್ಯವೇ ಇರುವದಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/259**

## ಉತ್ತಮತೆಗಾಗಿ ಉತ್ತಮನಾಗಿರು

ಹೌದು, ನೀನು ನೇರವಾದ ಹಾದಿಯನ್ನು ಅನುಸರಿಸಲು ಅಪೇಕ್ಷಿಸಿದರೆ, ನೀನು ಸಭ್ಯನಾಗಿದ್ದರೆ, ನೀನು ಪರಿಶುದ್ಧತೆಯನ್ನು ಅರಸಿದರೆ, ನೀನು ನಿರಾಸಕ್ತನಾಗಿದ್ದರೆ, ನೀನು ಏಕಾಂಗಿ ಜೀವನವನ್ನು ನಡೆಸಬೇಕೆಂದು ಅಪೇಕ್ಷಿಸಿದರೆ ಮತ್ತು ಸ್ಪಷ್ಟ ತೀರ್ಮಾನಗಳನ್ನು ಹೊಂದಿದ್ದರೆ, ಜೀವನವು ಸುಲಭಸಾಧ್ಯವಾಗುವದು ಎಂಬ ಕಲ್ಪನೆಯನ್ನು ನೀನು ಪ್ರೋತ್ಸಾಹಿಸಬೇಡ.... ಆದರೆ ಅದಕ್ಕೆ ಬದಲಾಗಿ ತದ್ವಿರುದ್ಧವಾದ ಘಟನೆಗಳು ಸಂಭವಿಸುವವು! ನೀನು ಆಂತರಿಕ ಮತ್ತು ಬಾಹ್ಯ ಪರಿಪೂರ್ಣತೆಗಳತ್ತ ಮುಂದುವರಿಯತೊಡಗಿದಾಗ, ಕಷ್ಟಗಳೂ ಅದೇ ಸಮಯದಲ್ಲಿ ಪ್ರಾರಂಭವಾಗುವವು.

ನಾನು ಜನರು ಈ ರೀತಿ ಹೇಳುವದನ್ನು ಅನೇಕ ಸಲ ಕೇಳಿಸಿಕೊಂಡಿದ್ದೇನೆ. "ಓ ನಾನೀಗ ಒಳ್ಳೆಯವನಾಗಲು ಪ್ರಯತ್ನಿಸುತ್ತಿದ್ದೇನೆ. ಪ್ರತಿಯೊಬ್ಬರೂ ನನಗೆ ಕೆಟ್ಟದ್ದನ್ನು ಮಾಡಲು ಪ್ರಯತ್ನಿಸುತ್ತಿರುವಂತಿದೆ!" ಅಂದರೆ ಆಸಕ್ತ ಗುರಿಯೊಂದಿಗೆ ಯಾರೂ ಒಳ್ಳೆಯವರಾಗಲು ಪ್ರಯತ್ನಿಸಬಾರದು ಇತರರು ನನಗೆ ಒಳ್ಳೆಯವ–ರಾಗಿರಲಿ ಎಂಬ ಕಾರಣಕ್ಕೆ ಒಳ್ಳೆಯವರಾಗಬಾರದು. ಒಳ್ಳೆಯತನಕ್ಕಾಗಿಯೇ

ಯಾರಾದರು ಒಳ್ಳೆಯವರಾಗಿರಬೇಕು ಎಂಬುದನ್ನು ಇದು ನಿರ್ದಿಷ್ಟವಾಗಿ ಬೋಧಿಸುತ್ತದೆ.

ಯಾವಾಗಲೂ ಇದೇ ಪಾಠವನ್ನು ಕಲಿಸುವದು: ಯಾರಾದರೂ ತನ್ನಿಂದ ಎಷ್ಟು ಸಮರ್ಪಕವಾಗಿ ಸಾಧ್ಯವೋ ಅಷ್ಟು ಉತ್ತಮವಾಗಿ ಕೆಲಸವನ್ನು ನಿರ್ವಹಿಸಬೇಕು, ತನ್ನಿಂದ ಆದಷ್ಟು ಉತ್ತಮವಾಗಿ, ಆದರೆ ಯಾವ ಫಲವನ್ನೂ ಅಪೇಕ್ಷಿಸಬಾರದು, ಫಲಿತಾಂಶವನ್ನು ಎದುರು ನೋಡುತ್ತಾ ಕೆಲಸ ಮಾಡಬಾರದು. ಅಂದರೆ ಒಂದು ಉತ್ತಮ ಕ್ರಿಯೆಗೆ ಬಹುಮಾನವನ್ನು ಅಪೇಕ್ಷಿಸುವದು – ಜೀವನವನ್ನು ಸುಗಮಗೊಳಿಸುವದೆಂಬ ಕಾರಣಕ್ಕೆ ಒಳ್ಳೆಯವರಾಗುವದು ಮುಂತಾದ ಮನೋಭಾವವು ಉತ್ತಮ ಕ್ರಿಯೆಯ ಎಲ್ಲಾ ಮೌಲ್ಯವನ್ನು ತೆಗೆದು ಹಾಕುವದು. ಉತ್ತಮತೆಯ ಪ್ರೇಮಕ್ಕಾಗಿ ನೀನು ಉತ್ತಮನಾಗಿರಬೇಕು. ನ್ಯಾಯದ ಪ್ರೇಮಕ್ಕಾಗಿ ಸಮರ್ಪಕವಾಗಿರಬೇಕು. ಪರಿಶುದ್ಧತೆಯ ಪ್ರೇಮಕ್ಕಾಗಿ ಪರಿಶುದ್ಧವಾಗಿರಬೇಕು. ಉದಾಸೀನತೆಯ ಪ್ರೇಮಕ್ಕಾಗಿ ಉದಾಸೀನದಿಂದೊಡಗೂಡಿರಬೇಕು. ಆಗ ನೀನು ಖಂಡಿತವಾಗಿ ಪಥದಲ್ಲಿ ಮುಂದುವರಿಯುವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/264–65**

## ಸ್ವಾತಂತ್ರ್ಯ ಮತ್ತು ಮಹದಾನಂದ

ಯಾರಾದರೂ ಆಸೆಗಳನ್ನು ತೊರೆದರೆ, ಅಂತಹವರು ಅವಶ್ಯಕವಾಗಿ ಅನಂತ ಮಹದಾನಂದವನ್ನು ಪ್ರವೇಶಿಸುವರು ಎಂಬುದಾಗಿ ಬುದ್ಧನು ಹೇಳಿರುವನು ಅಥವಾ ಆತನು ಹೇಳುವಂತೆ ಮಾಡಲಾಯಿತು. ಈ ಮಹದಾನಂದವು ಸ್ವಲ್ಪ ಒಣಗಿ ಬರಡಾಗಿರುವದು ಮತ್ತು ನನಗೆ ಅದು ಅತ್ಯಂತ ಶೀಘ್ರವಾಗಿ ಪ್ರಯಾಣ ಮಾಡಬಹುದಾದ ಹಾದಿ ಎನಿಸುವದಿಲ್ಲ.

ಆದರೆ ಯಾರಾದರೂ ಪ್ರಾರಂಭದಿಂದಲೇ ಸಮಸ್ಯೆಯ ಬುಡವನ್ನೇ ಹಿಡಿದುಕೊಂಡು, ಅದರೊಳಗಡೆ ಧೈರ್ಯ ಮತ್ತು ದೃಢತೆಯೊಂದಿಗೆ ಧುಮುಕಿದರೆ ಮತ್ತು, ಉದ್ಧವಾಗಿ, ಪ್ರಯಾಸಕಾರವಾಗಿ ನೋವಿನಿಂದ ತುಂಬಿರುವ ಹಾಗೂ ನಿರಾಶದಾಯಕ ಆಸೆಗಳ ಬೇಟೆಗೆ ತೊಡಗುವ ಬದಲಾಗಿ ಯಾರಾದರೂ ತನ್ನನ್ನು ತಾನು ಸಹಜವಾಗಿ, ಸಂಪೂರ್ಣವಾಗಿ, ಯಾವುದೇ ಷರತ್ತಿಲ್ಲದೆ, ಪರಮೋತ್ತಮ ಅಸ್ತಿತ್ವ, ಪರಮೋನ್ನತ ಸಂಕಲ್ಪ, ಪರಮೋನ್ನತ ಸತ್ತೆಗೆ ಶರಣಾದರೆ, ಜೊತೆಗೆ

ತನ್ನನ್ನು ಸಂಪೂರ್ಣವಾಗಿ ಆತನಿಗೆ ಒಪ್ಪಿಸಿದರೆ ಇಡೀ ಸತ್ತೆಯ ಮತ್ತು ಸತ್ತೆಯ ಎಲ್ಲಾ ಅಂಶಗಳ ಅಭಿವೃದ್ಧಿಯನ್ನು ಸಹ ಯಾವ ಲೆಕ್ಕಾಚಾರವನ್ನೂ ಸಹ ಮಾಡದೆ "ಆತನ" ಕೈಗಳಲ್ಲಿ ಹಾಕಿದರೆ ಅದೇ ಅಹಂಕಾರವನ್ನು ಜಯಿಸಲು ಅತ್ಯಂತ ಶೀಘ್ರವಾದ ಮತ್ತು ಮೂಲಭೂತ ಹಾದಿ. ಅದನ್ನು ಮಾಡುವದು ಬಹಳ ಕಷ್ಟವೆಂದು ಜನರು ಹೇಳುವದು. ಆದರೆ ಕೊನೆಯ ಪಕ್ಷ ಒಂದು ಪ್ರೀತಿಪೂರಿತತೆ ಇರುವದು, ಒಂದು ಉತ್ಸಾಹ, ಒಂದು ಬೆಳಕು, ಒಂದು ಸೌಂದರ್ಯ, ಒಂದು ಕಟ್ಟಾ ಮತ್ತು ಸೃಷ್ಟಿಶೀಲ ಜೀವನ.

ಆಸೆಯಿಲ್ಲದಿದ್ದರೆ ಅಹಂಕಾರವನ್ನು ಉಳಿಸುವಂತಹ ಭಾಗಗಳು ಬಹಳ ಕಡಿಮೆಯೇ ಆಗುವವು ಎಂಬುದಂತೂ ಸತ್ಯ ಮತ್ತು ಈ ರೀತಿ ಅನಿಸುವದು: ಪ್ರಜ್ಞೆಯು ಎಷ್ಟು ಗಟ್ಟಿಯಾಗುವದೆಂದರೆ ಅಹಂಕಾರವು ಧೂಳಾಗಿ ಇಲ್ಲವಾಗುವದು, ನಂತರ ಆತ್ಮದ ಒಂದು ಭಾಗವೂ ಸಹ ಧೂಳಿನೊಳಗೆ ಬೀಳುವದು ಮತ್ತು ಆ ಮಾನವನು ನಿರ್ವಾಣವನ್ನು ಪ್ರವೇಶಿಸಲು ಸಿದ್ಧನಾಗಿರುವನು ಅದೇ ಶುದ್ಧ ಮತ್ತು ಸರಳ ಶೂನ್ಯೀಕರಣ.

ಆದರೆ ಪರಮೋತ್ತಮನ ವೈವಿಧ್ಯತೆಯೊಳಗೆ ಅಹಂಕಾರವು ಕಾಣದಾಗುವದನ್ನು ನೈಜ ನಿರ್ವಾಣವೆಂದು ನಾವು ಇಲ್ಲಿ ಭಾವಿಸುವೆವು. ಮತ್ತು ನಾನು ಇದನ್ನು ಸಕಾರಾತ್ಮಕ ಹಾದಿ ಎನ್ನುವೆ. ಸಮಗ್ರವಾದ ಆತ್ಮ ಸಮರ್ಪಣೆ. ಇಲ್ಲಿ ಯಾವುದೇ ಪರಿಮಿತಿಯೂ ಇಲ್ಲ ಮತ್ತು ಚೌಕಾಶಿಯೂ ಇಲ್ಲ. ತನಗಾಗಿ ಅಸ್ತಿತ್ವದಲ್ಲಿ ಇರುವದಿಲ್ಲ, ತನಗೆ ಏನನ್ನೂ ಅನ್ವಯಿಸುವದಿಲ್ಲ. ತನ್ನ ಬಗ್ಗೆ ಸ್ವಲ್ಪವೂ ಯೋಚಿಸದೆ ಅತ್ಯಧಿಕ ಸುಂದರವಾದುದರ ಬಗ್ಗೆ ಮಾತ್ರ ಚಿಂತಿಸುವದರಿಂದ ಮತ್ತು ಪ್ರಕಾಶಮಾನವಾದುದು, ಪರಮಾನಂದಕರ–ವಾದುದು, ಶಕ್ತಿಭರಿತವಾದುದು ಕನಿಕರಪೂರ್ಣವಾದುದು ಮತ್ತು ಅನಂತವಾದುದರ ಬಗ್ಗೆ ಚಿಂತಿಸುವದರಿಂದ ಇಂತಹ ಗಂಭೀರ ಪರಮಾನಂದವು ಉದ್ಭವಿಸಿದೆ. ಇದಕ್ಕೆ ಇನ್ಯಾವುದನ್ನೂ ಹೋಲಿಸಲು ಸಾಧ್ಯವಿಲ್ಲ.

ಪ್ರಯತ್ನಿಸಲು ಅರ್ಹವಾದುದು ಇದು.

ಇದು ಮಾತ್ರವೇ ನಿಜಕ್ಕೂ ಪ್ರಯತ್ನಿಸಲೇ ಬೇಕಾದುದು. ಮಿಕ್ಕಿದ್ದೆಲ್ಲಾ ಕಾಲಕ್ರಮೇಣ ಅಳಿಸಿಹೋಗುವದು.

ಪರ್ವತವನ್ನು ಏರಲು ನಿಧಾನವಾಗಿ ಸುತ್ತಿ ಸುತ್ತಿ, ನೂರಾರು ವರ್ಷ ಒಂದೊಂದು ಮೆಟ್ಟಿಲನ್ನು ಹತ್ತುತ್ತಾಹೋಗುವದು ಮತ್ತು ಅಗೋಚರ ರೆಕ್ಕೆಗಳನ್ನು

ಹರಡಿಕೊಂಡು ಶೃಂಗಕ್ಕೆ ನೇರವಾಗಿ ಹಾರಿಹೋಗುವದರ ನಡುವಿನ ವ್ಯತ್ಯಾಸವನ್ನೇ ಇದು ಪ್ರತಿಬಿಂಬಿಸುವದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/268–69**

## ಏಕಾಂಗಿಯಾಗಿರುವುದು

**– ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ**

ಕಾಡಿನಲ್ಲಿ ಏಕಾಂಗಿಯಾಗಿ ವಾಸಿಸುವ ಬಹಳಷ್ಟು ಜನರು ತಮ್ಮ ಸುತ್ತ–ಮುತ್ತ ಇರುವಂಥ ಎಲ್ಲ ಪ್ರಾಣಿ–ಸಸ್ಯ ಸಂಕುಲದೊಡನೆ ಸ್ನೇಹದಿಂದ ಇರುತ್ತಾರೆ ಎನ್ನುವುದನ್ನು ಗಮನಿಸಲಾಗಿದೆ; ಆದರೆ, ಏಕಾಂಗಿಯಾಗಿರುವುದು, ನಿಮಗೆ ಧ್ಯಾನಸ್ಥ ಸ್ಥಿತಿಯನ್ನು ಪ್ರವೇಶಿಸುವ ಮತ್ತು ಅತ್ಯುನ್ನತ ಸತ್ಯದೊಡನೆ ಸಂಪರ್ಕದಲ್ಲಿರುವ ಶಕ್ತಿಯನ್ನು ಕೊಡುತ್ತದೆ ಎನ್ನುವಂಥ ವಾಸ್ತವಾಂಶ ಅಲ್ಲವೇ ಅಲ್ಲ. ಸನ್ನಿವೇಶದ ಒತ್ತಡದಿಂದ ನಿಮಗೆ ಮಾಡಲು ಏನೂ ಇಲ್ಲದಿದ್ದಾಗ, ಏಕಾಂಗಿಯಾಗಿರುವುದು ಬಹುಶಃ ಸುಲಭವಿರಬಹುದು, ಆದರೆ ಅದರ ಬಗ್ಗೆ ನನಗೆ ಮನವರಿಕೆಯಾಗಿಲ್ಲ. ನಾವು ಯಾವಾಗಲೂ ವೃತ್ತಿಗಳನ್ನು/ಹವ್ಯಾಸಗಳನ್ನು ಶೋಧಿಸಬಹುದು ಮತ್ತು ನನಗೆ ಅದು ಹಾಗೆ ತೋರುತ್ತದೆ, ನನ್ನ ಜೀವನದ ಅನುಭವದ ಪ್ರಕಾರ, ತೊಂದರೆಗಳ ನಡುವೆ ನಮ್ಮ ಹುಟ್ಟುಗುಣವನ್ನು ನಿಗ್ರಹಿಸಲು ಯಶಸ್ವಿಯಾದರೆ, ಅನಂತ ಅಸ್ತಿತ್ವದೊಂದಿಗೆ ನಮ್ಮೊಳಗಡೆ ಏಕಾಂಗಿಯಾಗಿರಲು ಪ್ರಯತ್ನ ಪಟ್ಟರೆ, ಆ ಕೃಪೆಯು ನಮಗೆ ಕೊಡಮಾಡಿದಂಥ ಅದೇ ಸನ್ನಿವೇಶದಲ್ಲಿ, ನಾವು ಪಡೆದುಕೊಳ್ಳುವಂಥ ಸಿದ್ಧಿಯು ಹೆಚ್ಚು ನೈಜವಾಗಿರುತ್ತದೆ, ಆಳವಾಗಿರುತ್ತದೆ, ಶಾಶ್ವತವಾಗಿರುತ್ತದೆ.

ಕಷ್ಟಗಳನ್ನು ಜಯಿಸುವ ಸಲುವಾಗಿ, ಅವುಗಳಿಂದ ದೂರ ಓಡಿ ಹೋಗುವುದು ಪರಿಹಾರವಲ್ಲ. ಅದು ಅತ್ಯಂತ ಆಕರ್ಷಣೀಯವಾದ ಮಾರ್ಗವಾಗಿದೆ. ಆಧ್ಯಾತ್ಮ ಜೀವನವನ್ನು ಬಯಸುವವರಲ್ಲಿ, "ಓಹ್! ಏಕಾಂಗಿಯಾಗಿ ಒಂದು ಮರದ ಕೆಳಗೆ ಕುಳಿತುಕೊಳ್ಳುವುದು, ಧ್ಯಾನದಲ್ಲಿರುವುದು, ಮಾತನಾಡಲು ಅಥವಾ ಕೆಲಸ ಮಾಡಲು ಪ್ರಲೋಭನೆ ಹೊಂದದೇ ಇರುವುದು, ಎಷ್ಟೊಂದು ಒಳ್ಳೆಯ ಸಂಗತಿಯಾಗಿರಬೇಕು!" ಎಂದು ಹೇಳುವ ಏನೋ ಒಂದು ಸಂಗತಿ ಇರುತ್ತದೆ. ಅದು ಯಾಕೆಂದರೆ, ಈ ದಿಶೆಯಲ್ಲೊಂದು ಅತ್ಯಂತ ಬಲವಾದ ಸಿದ್ಧತೆ ಇರುತ್ತದೆ, ಆದರೆ ಅದು ಅತಿಯಾದ ಭ್ರಮೆಯಾಗಿರುತ್ತದೆ.

ಅಕಸ್ಮಾತ್ತಾಗಿ ಹೊಂದುವಂಥ ಧ್ಯಾನಗಳು ಅತ್ಯಂತ ಉತ್ತಮವಾದ ಧ್ಯಾನಗಳಾಗಿದೆ, ಯಾಕೆಂದರೆ ಅವುಗಳು ನಿಮ್ಮನ್ನು ಒಂದು ಅತ್ಯಗತ್ಯವಾದ ಅವಶ್ಯಕತೆ ಎಂದು ಸ್ವಾಧೀನ ಪಡಿಸಿಕೊಳ್ಳುತ್ತವೆ. ಏಕಾಗ್ರತೆ, ಧ್ಯಾನ, ತೋರಿಕೆಗಳಾಚೆ ನೋಡುವುದನ್ನು ಬಿಟ್ಟು ನಿಮಗೆ ಬೇರೆ ಆಯ್ಕೆಯಿಲ್ಲ. ಕಾಡಿನ ಏಕಾಂತತೆಯಲ್ಲಿ ಅದು ನಿಮ್ಮನ್ನು ಅನಿವಾರ್ಯವಾಗಿ ಹಿಡಿದುಕೊಳ್ಳುವಂಥದ್ದಲ್ಲ, ನೀವು ಸಿದ್ಧವಾದಾಗ, ಸಮಯ ಬಂದಾಗ, ನಿಜವಾದ ಅಗತ್ಯವಿದ್ದಾಗ, ಅನುಗ್ರಹವು ನಿಮ್ಮೊಂದಿಗಿರುವಾಗ ಅದು ಸಂಭವಿಸುತ್ತದೆ.

ಮಾನವೀಯತೆಯು ಸ್ವಲ್ಪಮಟ್ಟಿಗೆ ಪ್ರಗತಿಯನ್ನು ಸಾಧಿಸಿದೆ ಮತ್ತು ನಿಜವಾದ ವಿಜಯವನ್ನು ಜೀವನದಲ್ಲಿಯೇ ಪಡೆದುಕೊಳ್ಳಬೇಕೆಂದು ನನಗೆ ತೋರುತ್ತದೆ.

ಎಲ್ಲಾ ಸಂದರ್ಭಗಳ ನಡುವೆಯೂ ನಿತ್ಯತೆಯೊಂದಿಗೆ ಮತ್ತು ಅನಂತದೊಂದಿಗೆ ಏಕಾಂಗಿಯಾಗಿ ಬದುಕುವುದು ಹೇಗೆ ಎಂದು ನೀವು ತಿಳಿದಿರಬೇಕು. ಎಲ್ಲ ಕಾರ್ಯಗಳ ನಡುವೆಯೂ ಪರಮಾತ್ಮನನ್ನು ನಿಮ್ಮ ಒಡನಾಡಿಯಾಗಿಟ್ಟುಕೊಂಡು ಹೇಗೆ ಸ್ವತಂತ್ರರಾಗಬೇಕೆಂದು ನೀವು ತಿಳಿದಿರಬೇಕು. ಅದೇ ನಿಜವಾದ ಗೆಲುವು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/276**

**ಪಥದಲ್ಲಿ ಮುಂದಕ್ಕೆ ಸಾಗುತ್ತಿರುವುದು**

ಜನರು ನಿಮ್ಮ ಬಗ್ಗೆ ಹೇಳುವ ದುರುದ್ದೇಶಪೂರಿತ ಮೂರ್ಖತನಗಳಿಂದ ನೀವು ವ್ಯಾಕುಲಗೊಂಡಿದ್ದರೆ, ದುಃಖಕ್ಕೀಡಾಗಿದ್ದರೆ, ಎದೆಗುಂದಿದ್ದರೆ, ಈ ಪಥದಲ್ಲಿ ನೀವು ದೂರ ಸಾಗಲಾರಿರಿ. ಇಂತಹ ಸಂಗತಿಗಳನ್ನು ನೀವು ಎದುರಿಸಬೇಕಾಗುತ್ತದೆ, ಕಾರಣ ನೀವು ಅದೃಷ್ಟವಂತರೆಂದು ಅಲ್ಲ, ಅಥವಾ ನೀವು ಸಂತೋಷದಿಂದ ಇಲ್ಲವೆಂದಲ್ಲ, ಆದರೆ ಇದಕ್ಕೆ ವ್ಯತಿರಿಕ್ತವಾಗಿ ನಿಮ್ಮ ತೀರ್ಮಾನ ಗಂಭಿರವಾಗಿದೆಯೋ ಅಥವಾ ಇಲ್ಲವೋ ಎಂದು ನೋಡಲು ಮತ್ತು (ಮಾರ್ಗದಲ್ಲಿ ಬರುವ) ಕಷ್ಟಗಳನ್ನು ಎದುರಿಸಲು ನೀವು ಸಾಕಷ್ಟು ಗಟ್ಟಿಯಾಗಿರುವಿರೋ ಅಥವಾ ಇಲ್ಲವೋ ಎಂದು ನೋಡಲು ದೈವೀ ಪ್ರಜ್ಞೆ ಮತ್ತು ದೈವೀ ಅನುಗ್ರಹವು ನಿಮ್ಮ ಸಂಕಲ್ಪವನ್ನು ಗಂಭೀರವಾಗಿ ತೆಗೆದುಕೊಳ್ಳುತ್ತವೆ ಮತ್ತು ಸಂದರ್ಭಗಳನ್ನು ನಿಮ್ಮ ಪಥದಲ್ಲಿ ಒಂದು ಮಾನದಂಡವಾಗುವಂತೆ ಸಮ್ಮತಿಸುತ್ತವೆ.

ಆದ್ದರಿಂದ, ಯಾರಾದರೂ ನಿಮ್ಮನ್ನು ಹೀಯಾಳಿಸಿದರೆ ಅಥವಾ ಹೆಚ್ಚು ಧಾರ್ಮಿಕವಿಲ್ಲದ್ದನ್ನು ಹೇಳಿದರೆ, ನೀವು ಮಾಡಬೇಕಾದ ಮೊದಲ ಕೆಲಸವೆಂದರೆ,

ಯಾವುದೇ ದೌರ್ಬಲ್ಯ ಅಥವಾ ಅಪೂರ್ಣತೆಯು ಅಂತಹ ಒಂದು ವಿಷಯ ಸಂಭವಿಸಲು ಅವಕಾಶ ಮಾಡಿಕೊಟ್ಟಿದೆಯೇ ಎಂದು ನಿಮ್ಮೊಳಗಡೆ ನೋಡಿಕೊಳ್ಳುವುದು ಮತ್ತು ಎದೆಗುಂದದೆ ಇರುವುದು, ಕೋಪಗೊಳ್ಳದೆ ಇರುವುದು ಅಥವಾ ಅಸಮಾಧಾನಗೊಳ್ಳದೆ ಇರುವುದು, ಏಕೆಂದರೆ ನೀವು ನಿಮ್ಮ ನಿಜವಾದ ಮೌಲ್ಯವೆಂದು ಯಾವುದನ್ನು ಭಾವಿಸಿರುವುರೊ, ಅದರ ಬಗ್ಗೆ ಜನರು ಪ್ರಶಂಸಿಸುವುದಿಲ್ಲ; ಇದಕ್ಕೆ ವ್ಯತಿರಿಕ್ತವಾಗಿ, ನಿಮ್ಮಲ್ಲಿರುವ ದೌರ್ಬಲ್ಯ ಅಥವಾ ಅಪೂರ್ಣತೆ ಅಥವಾ ವಿರೂಪತೆಯನ್ನು ಸರಿಪಡಿಸಿಕೊಳ್ಳಲು (ದೈವೀ ಕೃಪೆಯು) ನಿಮಗೆ ಸೂಚಿಸಿದ್ದಕ್ಕಾಗಿ ನೀವು ದೈವೀ ಕೃಪೆಗೆ ಕೃತಜ್ಞರಾಗಿರಬೇಕು.

ಆದ್ದರಿಂದ, ಅತೃಪ್ತರಾಗುವ ಬದಲು, ನೀವು ಸಂಪೂರ್ಣವಾಗಿ ತೃಪ್ತರಾಗಬಹುದು ಮತ್ತು ಸನ್ನಿವೇಶದ ಲಾಭವನ್ನು ಪಡೆದುಕೊಳ್ಳಬಹುದು, ನಿಮ್ಮ ವಿರುದ್ಧದ ಉದ್ದೇಶಿತ ಹಾನಿಯಿಂದ ಹೆಚ್ಚಿನ ಲಾಭವನ್ನು ಪಡೆದುಕೊಳ್ಳಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/382**

**ಹಿಂದೆ ಸರಿಯುವುದು**

ಬಾಹ್ಯ ಪ್ರಭಾವಗಳ ಸ್ಪರ್ಶಕ್ಕೆ ತೆರೆದುಕೊಂಡ ನಿಮ್ಮಲ್ಲಿಯ ಹೆಚ್ಚಿನವರು ನಿಮ್ಮ ವ್ಯಕ್ತಿತ್ವದ ಬಾಹ್ಯದಲ್ಲಿ ವಾಸಿಸುತ್ತೀರಿ. ನಿಮ್ಮ ಸ್ವಂತ ದೇಹದ ಹೊರಗೆ ನೀವು ಬಹುತೇಕ ಪ್ರಕ್ಷೇಪಿತವಾಗಿ ಇರುತ್ತೀರಿ ಮತ್ತು ಅದೇ ರೀತಿಯ ಪ್ರಕ್ಷೇಪಿಸಲ್ಪಟ್ಟ ಕೆಲ ಅಹಿತಕರ ಸಂಗತಿಗಳನ್ನು ನೀವು ಭೇಟಿಯಾದಾಗ ಅಸಮಾಧಾನಗೊಳ್ಳುತ್ತೀರಿ. ನೀವು ಹಿಂದೆ ಸರಿಯಲು ಹೊಂದಿಕೊಳ್ಳದ ಕಾರಣ ಇಡೀ ತೊಂದರೆಯು ಉಂಟಾಗುತ್ತದೆ. ನೀವು ಯಾವಾಗಲೂ ನಿಮ್ಮೊಳಗೆ ಹಿಂದಕ್ಕೆ ಹೆಜ್ಜೆ ಹಾಕಬೇಕು – ಒಳಗೆ ಆಳವಾಗಿ ಹೋಗಲು ಕಲಿಯಿರಿ – ಹಿಂದೆ ಸರಿದುಕೊಳ್ಳಿ, ಆಗ ನೀವು ಸುರಕ್ಷಿತವಾಗಿರುವಿರಿ. ಹೊರಗಿನ ಪ್ರಪಂಚದಲ್ಲಿ ಚಲಿಸುವ ಬಾಹ್ಯ ಶಕ್ತಿಗಳಿಗೆ ನಿಮ್ಮನ್ನು ನೀವು ಒಪ್ಪಿಸಿಕೊಳ್ಳಬೇಡಿ. ನೀವು ಏನನ್ನಾದರೂ ಮಾಡುವ ಆತುರದಲ್ಲಿದ್ದರೂ ಸಹ, ಕೊಂಚ ಹಿಂದಕ್ಕೆ ಸರಿಯಿರಿ ಮತ್ತು ನಿಮ್ಮ ಕೆಲಸವನ್ನು ಎಷ್ಟು ಬೇಗ ಮತ್ತು ಎಷ್ಟು ಹೆಚ್ಚಿನ ಯಶಸ್ಸಿನೊಂದಿಗೆ ಮಾಡಬಹುದೆನ್ನುವುದನ್ನು ಕಂಡುಕೊಂಡು ಆಶ್ಚರ್ಯಗೊಳ್ಳುವಿರಿ. ಯಾರಾದರೂ ನಿಮ್ಮ ಮೇಲೆ ಕೋಪಗೊಂಡಿದ್ದರೆ, ಅವರ ಸ್ಪಂದನಗಳಿಗೆ ಸಿಲುಕಿಕೊಳ್ಳಬೇಡಿ, ಸುಮ್ಮನೆ ಹಿಂದೆ ಸರಿಯಿರಿ, ಆಗ ಯಾವುದೇ ಬೆಂಬಲ ಅಥವಾ ಪ್ರತಿಕ್ರಿಯೆಯನ್ನು ಕಾಣದೆ ಅವನ ಕೋಪವು ಮಾಯವಾಗುತ್ತದೆ.

ಯಾವಾಗಲೂ ಶಾಂತವಾಗಿರಿ, ಅದನ್ನು ಕಳೆದುಕೊಳ್ಳುವ ಎಲ್ಲಾ ಪ್ರಲೋಭನೆಗಳನ್ನು ವಿರೋಧಿಸಿ. ಹಿಂದೆ ಸರಿಯದೆ ಯಾವುದನ್ನೂ ನಿರ್ಧರಿಸಬೇಡಿ, ಹಿಂದೆ ಸರಿಯದೆ ಏನನ್ನೂ ಮಾತನಾಡಬೇಡಿ, ಹಿಂದೆ ಸರಿಯದೆ ಕಾರ್ಯಪ್ರವೃತ್ತರಾಗಬೇಡಿ. ಸಾಮಾನ್ಯ ಜಗತ್ತಿಗೆ ಸೇರಿದ ಎಲ್ಲವೂ ಅಶಾಶ್ವತ ಮತ್ತು ಪಲಾಯನಶೀಲವಾಗಿದೆ, ಆದ್ದರಿಂದ ಅದರಲ್ಲಿ ಅಸಮಾಧಾನಗೊಳ್ಳಲು ಯೋಗ್ಯವಾದದ್ದು ಏನೂ ಇಲ್ಲ. ಯಾವುದು ನಿತ್ಯವಾಗಿದೆಯೋ, ಶಾಶ್ವತವಾಗಿದೆಯೋ, ಅಮರವಾಗಿದೆಯೋ ಮತ್ತು ಅನಂತವಾಗಿದೆಯೋ – ಅದನ್ನು ನಿಜವಾಗಿಯೂ ಹೊಂದಲು ಯೋಗ್ಯವಾಗಿದೆ, ಜಯಿಸಲು ಯೋಗ್ಯವಾಗಿದೆ, ಪಡೆದುಕೊಳ್ಳಲು ಯೋಗ್ಯವಾಗಿದೆ. ಅದು ದೈವೀ ಬೆಳಕು, ದೈವೀ ಪ್ರೇಮ, ದೈವೀ ಜೀವನ – ಅದು ಅತ್ಯುನ್ನತ ಶಾಂತಿಯಾಗಿದೆ, ಪರಿಪೂರ್ಣ ಆನಂದವಾಗಿದೆ ಮತ್ತು ಕಳಶಪ್ರಾಯವೆಂಬಂತೆ, ಸಂಪೂರ್ಣ ಅಭಿವ್ಯಕ್ತಿಯೊಂದಿಗೆ ಭೂಮಿಯ ಮೇಲೆ ಅದು ಅಧಿಪತ್ಯವಾಗಿದೆ. ನೀವು ವಸ್ತುಗಳ ಸಾಪೇಕ್ಷತೆಯ ಅರ್ಥವನ್ನು ಪಡೆದುಕೊಂಡಾಗ, ಏನೇ ಸಂಭವಿಸಿದರೂ ನೀವು ಹಿಂದೆ ಸರಿಯಬಹುದು ಮತ್ತು ನೋಡಬಹುದು; ನೀವು ಶಾಂತವಾಗಿರಬಹುದು ಮತ್ತು ದೈವೀ ಶಕ್ತಿಯನ್ನು ಕರೆದು ಉತ್ತರಕ್ಕಾಗಿ ಕಾಯಬಹುದು. ನಂತರ ನೀವು ಸ್ಪಷ್ಟವಾಗಿ ಏನು ಮಾಡಬೇಕೆಂದುದನ್ನು ತಿಳಿದುಕೊಳ್ಳುವಿರಿ. ಆಂತರಿಕವಾಗಿ ಶಾಂತ–ವಾಗಿರುವುದನ್ನು ಅಭ್ಯಾಸ ಮಾಡಿಕೊಳ್ಳಿ, ಅದನ್ನು ಚಿಕ್ಕದಾಗಿ ಪ್ರಾರಂಭಿಸಿ ಮತ್ತು ಅದು ನಿಮ್ಮೊಂದಿಗೆ ಒಂದು ಹವ್ಯಾಸವಾಗುವವರೆಗೆ ಅಭ್ಯಾಸದಲ್ಲಿ ಮುಂದುವರೆಯಿರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/160**

## ನಿಜವಾದ ಮನೋಭಾವ

ನಿಜವಾದ ಮನೋಭಾವವೆಂದರೆ, ಸನ್ಯಾಸಿಯಾಗುವುದಲ್ಲ ಅಥವಾ ಆಸೆಗಳಲ್ಲಿ ಮುಳುಗುವುದೂ ಅಲ್ಲ. ನಿಜವಾದ ಮನೋಭಾವವೆಂದರೆ – ನಾನು ಕೊಡುವ ಎಲ್ಲವನ್ನೂ ಸರಳತೆಯಿಂದ ಸ್ವೀಕರಿಸುವುದು, ಅದರೊಂದಿಗೆ ಸಂಪೂರ್ಣವಾಗಿ ತೃಪ್ತರಾಗುವುದು ಮತ್ತು ಹೆಚ್ಚಿನದನ್ನು ಕೇಳದೆ ಇರುವುದು ಅಥವಾ ಕೊಟ್ಟದ್ದನ್ನು ನಿರಾಕರಿಸದೆ ಇರುವುದು. ಸಾಧಕರಾಗಿ ತಮ್ಮ ಕರ್ತವ್ಯಗಳನ್ನು ಚೆನ್ನಾಗಿ ತಿಳಿದುಕೊಳ್ಳಲು ಇತರರಿಗೆ ಸಹಾಯ ಮಾಡುವವರಿಗೆ ನೀಡಲು ಇದು ಉತ್ತಮವಾದ ಉದಾಹರಣೆಯಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/47**

## ನಾವು ಸಹನಶೀಲರಾಗಿರಬೇಕು

ನೀವು (ಸಾಧನೆಯ ಪಥದಲ್ಲಿ) ಮುಂದುವರೆದಂತೆ ಮತ್ತು ಪ್ರಜ್ಞೆಯು ಹೆಚ್ಚು ಸಕ್ರೀಯವಾಗಿ, ನೈಜವಾಗಿ ಹಾಗೂ ನಿರಂತರವಾಗಿ ಬೆಳೆದಂತೆ, ಮೊದಲು ನೀವೊಂದು ಅಪ್ರಾಮಾಣಿಕತೆಯ, ಬೂಟಾಟಿಕೆಯ, ನಂಬಿಕೆ ಇರದ, ಸಂಶಯದ, ಮೂರ್ಖತನದ ಕೊಳಕು ಮೂಟೆಯಾಗಿದ್ದೀರಿ ಎನ್ನುವ ಭಾವನೆ ನಿಮಗಿತ್ತು ಎನ್ನುವುದನ್ನೂ ನೀವು ಊಹಿಸಲಾರಿರಿ. ಏಕೆಂದರೆ (ನಾನು ಹೇಗೆ ವಿವರಿಸಲಿ?...) ಜೀವಿಯ ಅಂಶಗಳ(ಅಂಗಗಳ) ನಡುವಿನ ಸಮತೋಲನವು ಬದಲಾದಾಗ ಮತ್ತು ಪ್ರಕಾಶಮಾನವಾದ ಅಂಶವು ಹೆಚ್ಚಾದಾಗ, ಉಳಿದೆಲ್ಲವು ಹೆಚ್ಚು ಅಸಮರ್ಪಕವಾಗಿ ಮತ್ತು ಅಸಹನೀಯವಾಗಿ ಬೆಳೆಯುತ್ತವೆ. ಆಗ ನೀವು ನಿಜವಾಗಿಯೂ ಬಹಳೇ ಅಸಹ್ಯಪಟ್ಟುಕೊಳ್ಳುವಿರಿ (ಬಹಳ ಹಿಂದೆ, ಅದು ನನಗೆ ನೋವುಂಟುಮಾಡುತ್ತಿದ್ದ ಸಮಯವಿತ್ತು – ಬಹಳ ಹಿಂದೆ ಏನಲ್ಲ, ಆದರೆ ಕೆಲವು ವರ್ಷಗಳ ಹಿಂದೆ) ಮತ್ತು ಅಲ್ಲಿ ಹೆಚ್ಚು ಚಲನೆ ಇರುವಾಗ (ಅತ್ಯಂತ ಸ್ವಾಭಾವಿಕ, ಸರಳ ಮತ್ತು ಸಂಪೂರ್ಣ ಚಲನೆ): "ನಾನದರ ಬಗ್ಗೆ ಏನನ್ನೂ ಮಾಡಲಾರೆ. ಅದು ಬೃಹತ್ ಪ್ರಮಾಣದ ಕಾರ್ಯವಾಗಿದೆ ಎಂದರೆ, ಅದು ಸಾಧ್ಯವಿಲ್ಲ, ನಾನು ಅದನ್ನು ಮಾಡಲಾರೆ – ದೇವರೆ ನೀನದನ್ನು ನನಗಾಗಿ ಮಾಡು." ಮತ್ತು ನೀವು ಒಂದು ಮಗುವಿನ ಮುಗ್ಧತೆಯಿಂದ(ಸಮರ್ಪಣೆಯ ಸನ್ನೆ) ಇದನ್ನು ಮಾಡಿದಾಗ, ನಿಜವಾಗಿಯೂ ಈ ರೀತಿಯಾಗಿ ಮಾಡಿದಾಗ, ನೀವು ಅದನ್ನು ಮಾಡಲು ಸಾಧ್ಯವಿಲ್ಲ, "ಅದು ಸಾಧ್ಯವಿಲ್ಲ, ಅದನ್ನು ನಾನೆಂದಿಗೂ ಮಾಡಲಾರೆ ಎನ್ನುವುದು ನಿಮಗೆ ಮನವರಿಕೆಯಾಗುವುದು – ಅದಕ್ಕಾಗಿ ದೇವರೆ, ಅದನ್ನು ನನಗಾಗಿ ಮಾಡು," ಇದು ಅದ್ಭುತವಾಗಿದೆ!... ಓಹ್, ಅವನು ಅದನ್ನು ಮಾಡುತ್ತಾನೆ, ನನ್ನ ಮಗುವೆ, ನಂತರ ನೀನು ಮೂಕವಿಸ್ಮಿತನಾಗುವಿ: ಅಲ್ಲಿ, ಮಾಯವಾಗುಂಥ, ಕೊನೆಗೊಂಡ – ಎಂದಿಗೂ ಹಿಂದಿರುಗಿ ಬಾರದ ಅನೇಕ ಸಂಗತಿಗಳಿವೆ! "ಅದು ಹೇಗೆ ಅಥವಾ ಯಾಕೆ!... ಸ್ವಲ್ಪ ಸಮಯದ ನಂತರ, ಅದು ಹೇಗೆ ಸಾಧ್ಯ ಎಂದು ನೀವು ಆಶ್ಚರ್ಯಪಡುವಿರಿ, ಅದು ಅಲ್ಲಿಯೇ ಇತ್ತು..." ಆದರೆ, ಒಂದೇ ಕ್ಷಣದಲ್ಲಿ, ಪ್ರರ್!

ಆದರೆ, ಎಲ್ಲಿಯವರೆಗೆ ವೈಯಕ್ತಿಕ ಪ್ರಯತ್ನವಿರುವುದೋ... ಅದು ಹೇಗೆಂದರೆ, ಒಬ್ಬ ಮನುಷ್ಯ, ಏರಿಕೆಯ ಮೇಲೆ ಏರಿಸಿದ ಪೀಪಾಯಿಯು ಮುಂದಿನ ಘಳಿಗೆಯಲ್ಲಿ ಕೆಳಗುರುಳಿದಂತೆ? ಉಫ್!

ಆದರೆ ಅದು ಸ್ವಯಂಪ್ರೇರಿತವಾಗಿರಬೇಕು, ಲೆಕ್ಕಾಚಾರದಂತೆ ಅಲ್ಲ, "ಇದು ಕೆಲಸ ಮಾಡುತ್ತದೆ" ಎಂಬ ಕಲ್ಪನೆಯೊಂದಿಗೆ ಮಾಡಬಾರದು. ಇದು ನಿಜವಾಗಿಯೂ ನಿಮ್ಮ ಸಂಪೂರ್ಣ ಅಸಹಾಯಕತೆ ಮತ್ತು ಕಾರ್ಯದ ಅತ್ಯಂತ ಅಸಾಧಾರಣ ಆಯಾಮದ ಅರ್ಥದಲ್ಲಿ ಮಾಡಬೇಕು.... "ಓಹ್, ದಯವಿಟ್ಟು ಅದನ್ನು ನೀವೇ ಮಾಡಿ; ನನಗೆ ಸಾಧ್ಯವಿಲ್ಲ – ಇದು ಸಾಧ್ಯವಿಲ್ಲ."

ತತ್ತ್ವಚಿಂತನೆಯ ಅಥವಾ ಪಾಂಡಿತ್ಯಪೂರ್ಣ ಜನರು ನಿನಗೆ ಕನಿಕರ ತೋರಬಹುದು, ಆದರೆ ವ್ಯಕ್ತಿಗತವಾಗಿ ನಾನು ನಿರ್ಲಕ್ಷಿಸುತ್ತೇನೆ! ನಾನು ಗಮನ ಕೊಡುವುದಿಲ್ಲ. ನಾನು ತತ್ತ್ವಜ್ಞಾನಿಯಲ್ಲ, ನಾನು ಪಂಡಿತಳಲ್ಲ, ನಾನು ಮೇಧಾವಿಯಲ್ಲ, ನಾನಿದನ್ನು ಗಟ್ಟಿ ಧ್ವನಿಯಲ್ಲಿ ಘೋಷಿಸುತ್ತೇನೆ: ನಾನು ತತ್ತ್ವಜ್ಞಾನಿಯಲ್ಲ ಅಥವಾ ಪಂಡಿತಳಲ್ಲ ಅಥವಾ ಮೇಧಾವಿಯಲ್ಲ. ಇದರಲ್ಲಿ ಯಾವುದೇ ಢಾಂಬಿಕತೆ ಇಲ್ಲ. ನಾನು ಸಾಹಿತಿಯೂ ಅಲ್ಲ ಅಥವಾ ಕಲಾವಿದಳೂ ಅಲ್ಲ – ನಾನೇನೂ ಅಲ್ಲ. ಇದು ನನಗೆ ನಿಜವಾಗಿಯೂ ಮನದಟ್ಟಾಗಿದೆ. ಅದು ಅಷ್ಟೊಂದು ಮಹತ್ವದ್ದಲ್ಲ – ಅದು ಮಾನವ ಜೀವಿಗಳಿಗೆ ಪರಿಪೂರ್ಣತೆಯಾಗಿದೆ.

ನೀವು ಏನನ್ನೂ ಮಾಡಲಾರೆ ಮತ್ತು ಸಂಪೂರ್ಣ ಅಸಹಾಯಕರೆಂದು, ಮಾಡುವವರು ನೀವಲ್ಲವೆಂದು ಅರಿತುಕೊಳ್ಳುವುದಕ್ಕಿಂತ ಹೆಚ್ಚಿನ ಆನಂದವಿಲ್ಲ ಮತ್ತು ಏನನ್ನು ಚಿಕ್ಕದಾಗಿ ಮಾಡಲಾಗಿದೆಯೋ – ಕಡಿಮೆ ಚಿಕ್ಕದೊ ಅಥವಾ ದೊಡ್ಡದೊ, ಅದು ಮಹತ್ವದ್ದಲ್ಲ – ಅದು ಭಗವಂತನಿಂದ ಮಾಡಲ್ಪಟ್ಟಿದೆ; ಮತ್ತು ಸಂಪೂರ್ಣ ಜವಾಬ್ದಾರಿಯು ಅವನದಾಗಿದೆ. ಈ ಸಂಗತಿಯು ನಿನ್ನನ್ನು ಖುಷಿಯಾಗಿಸುತ್ತದೆ. ಅದರಿಂದ ನೀನು ಖುಷಿಯಾಗಿರುವಿ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 11 ಆಗಸ್ಟ್, 1964**

**ವಿನೀತನಾಗಿರುವುದು**

ನಿಜವಾದ ನಮ್ರತೆಯು ಆ ಸರ್ವೋಚ್ಚ ಪ್ರಜ್ಞೆಯನ್ನು ಅರಿತುಕೊಳ್ಳುವುದನ್ನು, ಸರ್ವೋಚ್ಚ ಸಂಕಲ್ಪವು ಮಾತ್ರ ಅಸ್ತಿತ್ವದಲ್ಲಿರುತ್ತದೆ ಮಾತ್ತು 'ನಾನು' ಎನ್ನುವುದಲ್ಲ ಎನ್ನುವುದನ್ನು ಓಳಗೊಂಡಿರುತ್ತದೆ.

ಮನಸ್ಸಿಗೆ, ಪ್ರಾಣಕ್ಕೆ ಮತ್ತು ದೇಹಕ್ಕೆ ನಮ್ರವಾಗಿರುವುದೆಂದರೆ, ದೇವರಿಲ್ಲದೆ ಅವುಗಳಿಗೆ ಏನೂ ತಿಳಿದಿಲ್ಲ, ಅವುಗಳು ಏನೂ ಅಲ್ಲ ಮತ್ತು ಅವುಗಳು ಏನನ್ನೂ

ಮಾಡಲಾರವು ಎನ್ನುವುದನ್ನು ಅವುಗಳು (ಪ್ರಾಣ ಮತ್ತು ದೇಹ) ಎಂದಿಗೂ ಮರೆಯದೆ ಇರುವುದು; ದೇವರಿಲ್ಲದೆ ಅವುಗಳು ಅಜ್ಞಾನ, ಗೊಂದಲ ಮತ್ತು ದುರ್ಬಲವಾಗಿವೆ. ದೇವರು ಮಾತ್ರ ಸತ್ಯ, ಜೀವ, ಶಕ್ತಿ, ಪ್ರೇಮ, ಆನಂದನಾಗಿದ್ದಾನೆ.

ಆದುದರಿಂದ, ಮನಸ್ಸು, ಪ್ರಾಣ ಮತ್ತು ದೇಹಗಳು, ಅವೆಲ್ಲವುಗಳೂ ಒಟ್ಟಾಗಿ ದೇವರನ್ನು ಆತನ ಮೂಲ ಸ್ವರೂಪದಲ್ಲಿ ಮಾತ್ರವಲ್ಲದೆ ಆತನ ಕ್ರಿಯೆ ಹಾಗೂ ಅಭಿವ್ಯಕ್ತಿಯಲ್ಲೂ ಸಹ ತಿಳಿದುಕೊಳ್ಳಲು ಮತ್ತು ವಿಮರ್ಶಿಸಲು ಅಶಕ್ತವಾಗಿವೆ ಎನ್ನುವುದನ್ನು ಅರಿತುಕೊಳ್ಳಬೇಕು.

ಇದುವೇ ನಿಜವಾದ ನಮ್ರತೆಯಾಗಿದೆ, ಅದರೊಂದಿಗೆ ನಿಶ್ಚಲತೆ ಮತ್ತು ಶಾಂತಿ ಬರುತ್ತವೆ.

ಇದುವೇ ಎಲ್ಲ ಅಹಿತಕರ ದಾಳಿಗಳಿಂದ ರಕ್ಷಿಸುವ ಗಟ್ಟಿಯಾದ ರಕ್ಷಾ ಕವಚವಾಗಿದೆ. ವಾಸ್ತವದಲ್ಲಿ, ಮನುಷ್ಯನಲ್ಲಿರುವ ಪ್ರತಿಷ್ಠೆಯ ಬಾಗಿಲನ್ನು ಯಾವಾಗಲೂ ಪ್ರತಿಕೂಲ ಸನ್ನಿವೇಶವು ತಟ್ಟುತ್ತದೆ, ಏಕೆಂದರೆ ಅವನು ಒಳಹೋಗಲೆಂದು ತೆರೆದುಕೊಳ್ಳುವ ಬಾಗಿಲು ಇದಾಗಿದೆ.

ನಿಮ್ಮ ವೈಯಕ್ತಿಕ ಮಹತ್ವ ಅಥವಾ ನಿಮ್ಮ ವ್ಯಕ್ತಿಗತ ತಿಳುವಳಿಕೆ ಏನೇ ಇರಲಿ, ಯೋಗದಲ್ಲಿ ಬೇಕಾದ ಮೊದಲ ಗುಣವೆಂದರೆ ನಮ್ರತೆ.

ನಿಜವಾದ ಹಾಗೂ ಪ್ರಾಮಾಣಿಕವಾದ ನಮ್ರತೆಯು ನಮ್ಮ ರಕ್ಷಾ ಕವಚವಾಗಿದೆ, ಅದು ಪ್ರತಿಷ್ಠೆಯ ಅನಿವಾರ್ಯ ಕೊನೆಗೊಳಿಸುವಿಕೆಗೆ ಖಚಿತವಾದ ಮಾರ್ಗವಾಗಿದೆ. ಅವುಗಳಿಲ್ಲದೆ ಪ್ರತಿ ಹೆಜ್ಜೆಯೂ ಅಪಾಯವಾಗಿದೆ; ಅವುಗಳೊಂದಿಗೆ ಗೆಲುವು ನಿಶ್ಚಿತ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/152–53**

## ನಮ್ಮ ಪ್ರತಿಷ್ಠೆಯನ್ನು ಬಿಸಾಕುವುದು

ಈ ವಿಷಯಕ್ಕೆ ಬಂದರೆ ಸಮಸ್ತ ಸೃಷ್ಟಿಯು, ಸಮಸ್ತ ವಿಶ್ವವ್ಯಾಪಿ ಅಭಿವ್ಯಕ್ತಿಯು ಅತ್ಯಂತ ಕೆಟ್ಟ ಹಾಸ್ಯದಂತೆ ಕಾಣುತ್ತದೆ. ಅದರಿಂದ ಹೊರಬರುವ ಉದ್ದೇಶ ಮಾತ್ರವಿದ್ದರೆ, ಪ್ರಾರಂಭವನ್ನೇಕೆ ಮಾಡಬೇಕು! ಇಷ್ಟೊಂದು ಕಷ್ಟಪಟ್ಟು, ಯಾತನೆಯನ್ನು ಅನುಭವಿಸಿ, ತನ್ನ ಬಾಹ್ಯ ನೋಟದಲ್ಲಿ ದುರಂತಮಯ ಮತ್ತು ನಾಟಕೀಯವಾದ ಏನೊ ಒಂದನ್ನು ರಚಿಸಿ ಏನು ಪ್ರಯೋಜನ, ಅದರಿಂದ ಹೊರಬರುವುದು ಹೇಗೆ ಎಂದು ನಿಮಗೆ ಕಲಿಸುವುದೇ ಆಗಿದ್ದರೆ – ಅದನ್ನು ಪ್ರಾರಂಭಿಸದಿರುವುದೇ ಉತ್ತಮ.

ಸಂಗತಿಗಳ ಆಳಕ್ಕೆ ನಾವು ಹೋದರೆ, ಅಹಂಭಾವವನ್ನು ತೆಗೆದು ಹಾಕುವುದಲ್ಲದೆ, ಪ್ರತಿಷ್ಠೆಯನ್ನೂ ಕಳಚಿ ಹಾಕಿದರೆ, ನಮ್ಮನ್ನು ನಾವು (ಯಾವುದೇ ಸಂಕೋಚವಿಲ್ಲದೆ) ಸಂಪೂರ್ಣವಾಗಿ ಅರ್ಪಿಸಿಕೊಳ್ಳುತ್ತೇವೆ – ಎಷ್ಟೊಂದು ಪೂರ್ಣ ಮತ್ತು ನಿರ್ಲಿಪ್ತವೆಂದರೆ ನಾವು ದೇವರ ಯೋಜನೆಯನ್ನು ತಿಳಿದುಕೊಳ್ಳುವಷ್ಟು ಶಕ್ತರಾಗುತ್ತೇವೆ, ಆಗ ಅದೊಂದು ಕೆಟ್ಟ ಹಾಸ್ಯವಲ್ಲವೆಂದು ನಮಗೆ ಗೊತ್ತಾಗುತ್ತದೆ, ಆರಂಭದ ಸ್ಥಾನಕ್ಕೆ, (ಕೊಂಚ ತಲ್ಲಣಗೊಂಡಿದ್ದರೂ) ನೀವು ಮರಳುವ ಮಾರ್ಗವು ಅಂಕುಡೊಂಕಾದ ಮಾರ್ಗವಲ್ಲವೆಂದು ಗೊತ್ತಾಗುತ್ತದೆ; ಇದಕ್ಕೆ ವ್ಯತಿರಿಕ್ತವಾಗಿ, ಇಡೀ ಸೃಷ್ಟಿಗೆ ಇರುವಿಕೆಯ ಆನಂದವನ್ನ, ಅಸ್ತಿತ್ವದ ಸೌಂದರ್ಯವನ್ನ, ಇರುವಿಕೆಯ ಶ್ರೇಷ್ಠತೆಯನ್ನ, ಅದ್ಭುತ ಜೀವನದ ಘನತೆಯನ್ನ ಕಲಿಸುವುದಾಗಿದೆ ಮತ್ತು ಆ ಆನಂದದ, ಸೌಂದರ್ಯದ, ಶ್ರೇಷ್ಠತೆಯ ನಿರಂತರ ಬೆಳವಣಿಗೆಯನ್ನ, ಶಾಶ್ವತ ಪ್ರಗತಿಶೀಲತೆಯನ್ನ ಕಲಿಸುವುದಾಗಿದೆ. ನಂತರ ಪ್ರತಿಯೊಂದಕ್ಕೂ ಒಂದು ಅರ್ಥ ಬರುತ್ತದೆ, ಆಗ ನಾವು ಅನುಭವಿಸಿದ ಕಷ್ಟದ ಮತ್ತು ಯಾತನೆಯ ಬಗ್ಗೆ ವಿಷಾದಿಸುವುದಿಲ್ಲ, ದೈವೀ ಉದ್ದೇಶವನ್ನು ಅರಿತುಕೊಳ್ಳುವ ಉತ್ಸಾಹ ಮಾತ್ರ ನಮ್ಮಲ್ಲಿರುತ್ತದೆ, ಮತ್ತು ಯಾವುದೇ ವಿವೇಚನೆ ಇಲ್ಲದೆ, ಗುರಿಯ ಮತ್ತು ವಿಜಯದ ಖಚಿತತೆಯೊಂದಿಗೆ ಸಾಧನೆಯಲ್ಲಿ ನಾವು ಮುಳುಗುತ್ತೇವೆ.

ಆದರೆ ಅದನ್ನು ತಿಳಿದುಕೊಳ್ಳಲು ನಾವು ಸ್ವಾರ್ಥಪರವಾಗಿರುವುದನ್ನು ನಿಲ್ಲಿಸಬೇಕು, ಒಬ್ಬ ಪ್ರತ್ಯೇಕ ಮತ್ತು ಅತ್ಯುನ್ನತ ಮೂಲದಿಂದ ಸಂಪರ್ಕವನ್ನು ಕಡಿದುಕೊಂಡ ವ್ಯಕ್ತಿಯಾಗಿರುವುದನ್ನು ನಿಲ್ಲಿಸಬೇಕು. ನಾವು ಮಾಡಲೇಬೇಕಾಗಿರುವುದು ಅದನ್ನೇ: ಅಹಂಭಾವವನ್ನು ಬಿಸಾಕುವುದು. ಆಗ ನಮಗೆ ನಿಜವಾದ ಗುರಿಯು ಗೊತ್ತಾಗುತ್ತದೆ – ಇದು ಏಕಮಾತ್ರ ಮಾರ್ಗವಾಗಿದೆ!

ನಮ್ಮ ಪ್ರತಿಷ್ಠೆಯನ್ನು ಕಳಚಿ ಬಿಸಾಕುವುದೆಂದರೆ, ಅದನ್ನು ನಾವು ತೊಟ್ಟ ಬಟ್ಟೆಯು ಬಿದ್ದು ಹೋಗುವ ಹಾಗೆ ಬೀಳಲು ಬಿಡುವುದು.

ಮಾಡಲೇಬೇಕಾದ ಪ್ರಯತ್ನಗಳಿಗೆ ಫಲಿತಾಂಶವು ಯೋಗ್ಯವಾಗಿರುತ್ತದೆ. ಆಗ ಈ ಮಾರ್ಗದಲ್ಲಿ ನಾವು ಏಕಾಂಗಿಯಾಗಿರುವುದಿಲ್ಲ. ನಮ್ಮಲ್ಲಿ ನಂಬಿಕೆ ಇದ್ದರೆ, ನಮಗೆ ಸಹಾಯವು ಲಭಿಸುವುದು.

ನೀವು ಕೃಪೆಯೊಂದಿಗೆ, ಒಂದು ಕ್ಷಣದಷ್ಟಾದರೂ ಸಂಪರ್ಕವನ್ನು ಹೊಂದಿದ್ದರೆ, ಆ ಅದ್ಭುತವಾದ ಅನುಗ್ರಹವು ನಿಮ್ಮನ್ನು ಮಾರ್ಗದುದ್ದಕ್ಕೂ ಮುನ್ನಡೆಸುತ್ತದೆ, ಮಾರ್ಗದಲ್ಲಿ ನೀವು ವೇಗವಾಗಿ ಸಾಗುವಂತೆ ಮಾಡುತ್ತದೆ, ನೀವು ಆತುರಪಡಬೇಕು

ಎಂಬುದನ್ನೂ ಸಹ ಮರೆಯುವಂತೆ ಮಾಡಿಬಿಡುತ್ತದೆ – ನೀವು ಅದರೊಂದಿಗೆ, ಒಂದು ಕ್ಷಣದಷ್ಟಾದರೂ ಸಂಪರ್ಕವನ್ನು ಹೊಂದಿದ್ದರೆ, ಆಗ ನೀವು ಮರೆಯದಿರಲು ಪ್ರಯತ್ನಿಸಬಹುದು. ಒಂದು ಮಗುವಿನ ನಿಷ್ಕಪಟತೆಯೊಂದಿಗೆ, ಯಾವುದೇ ಜಟಿಲತೆಗಳಿಲ್ಲದ ಒಂದು ಮಗುವಿನ ಸರಳತೆಯೊಂದಿಗೆ, ನಿಮ್ಮನ್ನು ನೀವು ಆ ಅನುಗ್ರಹಕ್ಕೆ ಒಪ್ಪಿಸಿಕೊಳ್ಳಿ ಮತ್ತು ಅದು ಎಲ್ಲವನ್ನೂ ಮಾಡಲು ಬಿಡಿ.

ಅಗತ್ಯವಾದುದೇನೆಂದರೆ, ವಿರೋಧಿಸುವುದನ್ನು ಕೇಳದಿರುವುದು, ವಿರೋಧಾಭಾಸಗಳನ್ನು ನಂಬದಿರುವುದು – ನಿಜವಾದ ನಂಬಿಕೆಯನ್ನು ಹೊಂದಲು, ಲೆಕ್ಕಾಚಾರವಿಲ್ಲದೆ, ಚೌಕಸಿ ಇಲ್ಲದೆ ನಿಮ್ಮನ್ನು ನೀವು ಪೂರ್ಣವಾಗಿ ಅರ್ಪಿಸಿ–ಕೊಳ್ಳುವಂತೆ ಮಾಡುವ ಒಂದು ಭರವಸೆ. ನಂಬಿಕೆ! “ಇದನ್ನು ಮಾಡು, ನನಗಾಗಿ ಮಾಡು, ನಾನು ಇದನ್ನು ನಿನಗೆ ಬಿಟ್ಟಿದ್ದೇನೆ ಎಂದು ಹೇಳುವಂಥ ನಂಬಿಕೆ.”

ಅದು ಅತ್ಯುತ್ತಮ ಮಾರ್ಗವಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/426–27**

## ನಿಜವಾದ ಪ್ರಗತಿಯ ಸಂಕೇತ

ಕೊಂಚ ಅನುಭವ ಹೊಂದಿದ ಜನರು ಹೆಚ್ಚು ಪ್ರಗತಿ ಹೊಂದಿದವರೆಂದು ಹೇಳಲಾಗದು, ಹಾಗೇನೂ ಇಲ್ಲ. ಆತ ಇನ್ನೂ ಸಂಪೂರ್ಣವಾಗಿ ಪ್ರಗತಿಯನ್ನು ಸಾಧಿಸಿಲ್ಲ ಎಂಬ ವಾಸ್ತವ ಸಂಗತಿಯಿಂದ ಬರುವ ಸರಳತೆಯ, ನಮ್ರತೆಯ ಮತ್ತು ವಿನಯತೆಯ ಅಂಶದ ಕೊರತೆ ಆತನಲ್ಲಿರುತ್ತದೆ. ನಾವು ಬೆಳೆದಂತೆ ಅಥವಾ ಪ್ರಗತಿ ಹೊಂದಿದಂತೆ, ತಲೆಯಲ್ಲಿ ಏನೋ ಒಂದು ಸಂಗತಿ ಸ್ಪಷ್ಟಗೊಳ್ಳುತ್ತ ಹೋಗುತ್ತದೆ; ಅದು ಹೆಚ್ಚು ಹೆಚ್ಚು ಸ್ಥಿರಗೊಳ್ಳುತ್ತದೆ ಮತ್ತು ನೀವು ತುಂಬಾ ಕಷ್ಟಪಟ್ಟು ಪ್ರಯತ್ನಿಸದ ಹೊರತು ನೀವೇ ಗಟ್ಟಿಯಾಗುವ ಮೂಲಕ ಮುಗಿಸಿ ಬಿಡುವಿರಿ. ಸಾಮಾನ್ಯವಾಗಿ ಜನರಿಗೆ ಸಂಭವಿಸುವಂಥ ಸಂಗತಿ ಇದಾಗಿದೆ, ವಿಶೇಷವಾಗಿ ಸಾಕ್ಷಾತ್ಕಾರಕ್ಕಾಗಿ ಪ್ರಯತ್ನಿಸಿ ಅದರಲ್ಲಿ ಯಶಸ್ವಿಯಾದವರಿಗೆ ಅಥವಾ ಗುರಿಯನ್ನು ತಲುಪಿದ್ದೇವೆ ಎಂದು ನಂಬಿದವರಿಗೆ. ಯಾವುದೇ ಸಂದರ್ಭದಲ್ಲಿ, ಇದು ಅವರ ವೈಯಕ್ತಿಕ ಗುರಿಯಾಗಿತ್ತು. ಅವರು ಅದನ್ನು ತಲುಪಿದ್ದಾರೆ ಮತ್ತು ಯಶಸ್ವಿಯಾಗಿದ್ದಾರೆ. ಅಗ ಅವರು ಅಲ್ಲಿಯೇ ಇರುತ್ತಾರೆ; ಅವರು ಅಲ್ಲಿಯೇ ನೆಲೆಸುತ್ತಾರೆ, ಆಗ ಅವರು “ಅಷ್ಟೆ” ಎಂದು ಹೇಳುತ್ತಾರೆ. ಆದ್ದರಿಂದ, ಅದಾದ ನಂತರ ಅವರು ಹತ್ತು ವರ್ಷ

ಹೆಚ್ಚು ಅಥವಾ ಇಪ್ಪತ್ತು ಅಥವಾ ಮೂವತ್ತು ವರ್ಷ ಬದುಕಬಹುದು, ಅವರು ಕದಲುವುದಿಲ್ಲ. ಅವರು ಅಲ್ಲಿಯೇ ಇರುವರು. ಅಂತಹ ಜನರು ಮುಂದೆ ಹೋಗಲು ಮತ್ತು ಪ್ರಗತಿಗೆ ಅಗತ್ಯವಾದ ಎಲ್ಲಾ ಮೃದುತ್ವವನ್ನು ಹೊಂದಿರುವುದಿಲ್ಲ. ಅವರು ಅಲ್ಲಿ ಸಿಲುಕಿಕೊಳ್ಳುತ್ತಾರೆ. ಅಂಥವರು ವಸ್ತು ಸಂಗ್ರಹಾಲಯದಲ್ಲಿ ಇರಿಸಲು ಉತ್ತಮವಾದ ವಸ್ತುಗಳಾಗಿದ್ದಾರೆ, ಆದರೆ ಕೆಲಸ ಮಾಡಲು ಅಲ್ಲ. ಏನು ಮಾಡಬಹುದೆಂದು ತೋರಿಸಲು ಅವು ಮಾದರಿಗಳಂತೆ ಮಾತ್ರ, ಆದರೆ ಅವರುಗಳು ಹೆಚ್ಚಿನದನ್ನು ಮಾಡುವ ಸಾಧನಗಳಲ್ಲ. ನನಗೆ ವೈಯಕ್ತಿಕವಾಗಿ, ನನ್ನ ಕಾರ್ಯಕ್ಕಾಗಿ, ಅತಿ ಕಡಿಮೆ ತಿಳಿದುಕೊಂಡವರನ್ನು, ಹೆಚ್ಚು ಶ್ರಮವಹಿಸದವರನ್ನು, ಆದರೆ ದೊಡ್ಡ ಅಭೀಪ್ಸೆ ಉಳ್ಳವರನ್ನು, ಸದ್ಭಾವನೆ ಹೊಂದಿದವರನ್ನು ಮತ್ತು ಈ ಪ್ರಗತಿ ಹೊಂದಲು ಬೇಕಾದ ಜ್ವಾಲೆಯನ್ನು ತಮ್ಮಲ್ಲಿ ಹೊಂದಿದವರನ್ನು ನಾನು ಆರಿಸಿಕೊಳ್ಳುತ್ತೇನೆ. ಆತ ಅತಿ ಕಡಿಮೆ ತಿಳಿದುಕೊಂಡಿರಬಹುದು, ಕಡಿಮೆ ಅರಿವನ್ನು ಹೊಂದಿರಬಹುದು, ಆದರೆ ಅದು ಆತನೊಳಗೆ ಇದ್ದರೆ, ಆತ ಹೆಚ್ಚು ಮುಂದೆ ಸಾಗಲು ಅದೊಂದು ಉತ್ತಮ ಸಾಧನವಾಗಬಹುದು. ನಮಗೆ ಮಾರ್ಗವು ತಿಳಿದಿರಲೇಬೇಕೆಂದರೆ (ಇದು ನಿಮ್ಮ ಗ್ರಂಥಾಲಯದ ಥರ) ಮುಂದೆ ಹೋಗಲು ನಮಗೆ ಮಾರ್ಗವು ಗೊತ್ತಿರಲೇಬೇಕು. ಸಾಮಾನ್ಯವಾಗಿ ಜೀವನದಲ್ಲಿ ನೀವು ಒಂದು ಪರ್ವತವನ್ನು ಏರಿದಾಗ ಅಥವಾ ಅಪರಿಚಿತ ಸ್ಥಾನಕ್ಕೆ ಹೋದಾಗ, ನೀವು ಅಲ್ಲಿಗೆ ಬಂದಂಥ ವ್ಯಕ್ತಿಯನ್ನು, ಮಾರ್ಗದರ್ಶಿಯನ್ನು ಹುಡುಕುತ್ತೀರಿ, ಮತ್ತು ನಿಮಗೆ ದಾರಿ ತೋರಲು ಕೇಳಿಕೊಳುತ್ತೀರಿ. ಇದೂ ಅದರಂತೆಯೇ. ನೀವು ಮಾರ್ಗದರ್ಶಿಯನ್ನು ಅನುಸರಿಸಿದರೆ, ಹೆಚ್ಚಿನ ಪ್ರಯತ್ನಗಳನ್ನು ಮಾಡಿದ, ತನ್ನದೇ ಆದ ಮಾರ್ಗವನ್ನು ಕಂಡುಕೊಂಡ ಮತ್ತು ಸಾಮಾನ್ಯವಾಗಿ ತನ್ನ ಬಗ್ಗೆ ಸಾಕಷ್ಟು ಹೆಮ್ಮೆಪಡುವ ಮತ್ತು ಯಾವುದೇ ಸಂದರ್ಭದಲ್ಲಿ, ತಾನು ಕೊನೆಯ ಹಂತಕ್ಕೆ ಬಂದ ಭಾವನೆಯನ್ನು ಹೊಂದಿರುವ, ತಾನು ನಿರ್ಧರಿಸಿದ ಗುರಿಯನ್ನು ತಲುಪಿದ ಭಾವನೆಯನ್ನು ಹೊಂದಿರುವ ಇತರರಿಗಿಂತ ನೀವು ಹೆಚ್ಚು ವೇಗವಾಗಿ ಹೋಗಬಹುದು – ಆತ ಅಲ್ಲಿ ನೆಲೆಗೊಳ್ಳುತ್ತಾನೆ. ಆತ ಇನ್ನು ಮುಂದೆ ಚಲಿಸುವುದಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/285 – ಶ್ರೀಮಾತೆ**

---

**ದೈವೀ ಪರಿಶುದ್ಧತೆ: ಮೂಲಭೂತವಾಗಿ ಸಂತೃಪ್ತನಾಗಿರುವುದು.**

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/150 – ಶ್ರೀಮಾತೆ**

# ಜೀವನದ ಸೂತ್ರಗಳು

**– ಅನು: ಶ್ರೀ ಕಿಶೋರಕುಮಾರ ಕಾಸಾರ, ಕಲಬುರ್ಗಿ**

ಆತುರ ಪಡುವ ಅಗತ್ಯವಿಲ್ಲ – ಆತುರ ಪಡುವ ಅಗತ್ಯವಿಲ್ಲ, ತಾಳ್ಮೆ ಕಳೆದುಕೊಳ್ಳುವ ಅಗತ್ಯವಿಲ್ಲ; ಇದರಿಂದ ಯಾವ ಪ್ರಯೋಜನವೂ ಆಗದು, ಇದು ಹೃದಯವನ್ನು ಕಹಿಯಾಗಿಸುತ್ತದೆ – ಇದು ಕೆಲಸಕ್ಕೆ ಬಾರದ ವಿಷಯವಾಗಿದೆ.

ಕಾಲ ಯಾವಾಗ ಬರಬೇಕೋ, ಅಂದು ಅದು ಬಂದೇ ಬರುತ್ತದೆ. ಭಗವಂತನು ಯಾವಾಗ ಅದು ಸಂಭವಿಸಲೆಂದು ಬಯಸುತ್ತಾನೋ, ಅಂದು ಅದು ಘಟಿಸಿಯೇ ತೀರುತ್ತದೆ; ಇದು ಶತಸಿದ್ಧ. ನಾವು ವ್ಯರ್ಥವಾಗಿ ಅದರ ಕುರಿತು ಚಿಂತಿಸುತ್ತಿರುತ್ತೇವೆ. ನಮ್ಮ ಚಿಂತನೆಗಳು ಈರುಳ್ಳಿಯ ಮೇಲಿನ ಪದರಗಳಂತೆ ಬಿಚ್ಚುತ್ತಾ ಹೋದಂತೆ ಹೊಸದಾಗಿ ಹುಟ್ಟಿಕೊಳ್ಳುತ್ತಲೇ ಹೋಗುತ್ತವೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 11 ಆಗಸ್ಟ್, 1964**

ನಾವು ಚಿರಂತನವಾದ ಅಭೀಪ್ಸೆಯನ್ನು ಹೊಂದಿರಬೇಕು. ಯಾವಾಗ ನಮ್ಮಲ್ಲಿ ಅಭೀಪ್ಸೆಯು ಬತ್ತಿಹೋಗುತ್ತದೆಯೋ ಆಗ ನಾವು ಮಗುವಿನ ಸರಳತೆಯೊಂದಿಗೆ ಪ್ರಾರ್ಥಿಸೋಣ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/208**

ವಿನಯತೆ: ಸರಳತೆಯಲ್ಲಿ ಇರುವ ಪೂಜ್ಯಭಾವನೆ.

*

ಉನ್ನತಮಟ್ಟದ ಜೀವಗಳು ಯಾವಾಗಲೂ ಅತ್ಯಂತ ಸರಳ ಮತ್ತು ಸಹಜವಾದ ಜೀವನವನ್ನು ನಡೆಸುತ್ತಿರುತ್ತವೆ.

*

ಸ್ವಯಂ ಮೌಲ್ಯಮಾಪನ ಮತ್ತು ಸರಳ–ಸುಂದರವಾದ ಜೀವನವು ತನ್ನಷ್ಟಕ್ಕೆ ತಾನೇ ಪ್ರವೃದ್ಧಮಾನವಾಗಿ ಬೆಳೆಯುವದಿಲ್ಲ.

*

ವಿನಮ್ರತೆಯು ತನ್ನ ಆಕರ್ಷಣೆಯಿಂದ ತಾನೇ ತೃಪ್ತಿ ಹೊಂದುತ್ತದೆ.
ಮತ್ತು ಅದು ಇತರರನ್ನು ಆಕರ್ಷಿಸಲು ಎಂದಿಗೂ ಪ್ರಯತ್ನಿಸುವದಿಲ್ಲ.

*

ನಾವು ನಮ್ಮ ದಾರಿಯಲ್ಲಿ ಇನ್ನೂ ಮುಂದುವರಿಯುತ್ತೇವೆ. ನಾವು ನಮ್ಮ ಜೀವನ ಶೈಲಿಯನ್ನು ಇನ್ನೂ ಸರಳ–ಸಹಜವಾಗಿಸಿಕೊಳ್ಳುತ್ತೇವೆ. ಮತ್ತು ನಾವಿನ್ನೂ ಏನೇನು ಮಾಡಬೇಕು ಎಂಬುದನ್ನು ಧೇನಿಸುತ್ತಾ ಮುಂದಿನ ದಾರಿಯನ್ನು ಕ್ರಮಿಸುತ್ತೇವೆ.

*

ನಾವು ಇಲ್ಲಿಯವರೆಗೆ ಏನೆಲ್ಲಾ ಪ್ರಯತ್ನಗಳನ್ನು ಮಾಡಿದ್ದೇವೆ, ನಾವು ಎಷ್ಟೆಲ್ಲಾ ಹೋರಾಡಿದ್ದೇವೆ, ನಾವು ಏನನ್ನೆಲ್ಲಾ ಸಾಧಿಸಿದ್ದೆವೆ ಎಂಬುದು ಮುಖ್ಯವಲ್ಲ. ನಾವು ನಡೆದು ಬಂದ ದಾರಿಯಲ್ಲಿ ನಾವು ಇನ್ನೂ ಏನನ್ನು ಸಾಧಿಸಬೇಕಾಗಿದೆ ಎಂಬುದನ್ನು ಕುರಿತು ಧೇನಿಸುತ್ತಾ ಮುನ್ನುಗ್ಗಬೇಕಾಗಿದೆ.

*

ನಾವು ದೊಡ್ಡವರೋ? ಚಿಕ್ಕವರೋ?; ನಾವು ಬಹಳ ಪ್ರತಿಷ್ಠಿತರೋ? ಅಥವಾ ಗಣನೆಗೆ ಬಾರದವರೋ? ಎಂಬುದು ಮುಖ್ಯವಲ್ಲ. ನಾವು ನಮ್ಮ ಬಗೆಗೆ ಏನನ್ನು ಯೋಚಿಸುತ್ತೇವೆಯೋ ಅದು ನಮ್ಮೊಳಗಿನ ಚೈತನ್ಯವಲ್ಲ. ಹಾಗಾಗಿ ಆ ಭಗವಂತನು ನಮಗಾಗಿ ರೂಪಿಸಿದ ನಿಯತಿಯ ಇಚ್ಛೆಯಂತೆ ಬದುಕಿದರೆ ಸಾಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/151–52**

ಮಾನವನ ಬುದ್ಧಿಮತ್ತೆಗೂ ಮೀರಿದ ಉಚ್ಛತಮದ ಪಾತಳಿಯಲ್ಲಿ ಪ್ರಖರವಾಗಿ ಹೊಳೆಯುತ್ತಿರುವ ದಿವ್ಯತೆಯ ಸರಳತೆಯೊಂದು ಸದಾ ನಮಗಾಗಿ ಕಾಯುತ್ತಿರುತ್ತದೆ.

ಮಾನವನ ಬುದ್ಧಿಯು ನಿಷ್ಪ್ರಯೋಜಕವಾದ ತೊಡಕುಗಳನ್ನು ಸೃಷ್ಟಿಸದೇ ಇದ್ದಲ್ಲಿ ನಮ್ಮ ಜೀವನವು ಸರಳ ಮತ್ತು ಸಹಜವಾಗಿ ರೂಪುಗೊಳ್ಳುತ್ತದೆ.

ಒಮ್ಮೆ ಮಾನವನ ಬುದ್ಧಿಮತ್ತೆಯು ತನ್ನ ಕಾರ್ಯವನ್ನು ಆರಂಭಿಸಿದ್ದೇ ಆದಲ್ಲಿ ಅದು ಆ ದಿವ್ಯತೆಯ ಕಾರ್ಯಕ್ಕೆ ಸದಾ ಅಡ್ಡಿ ಆತಂಕಗಳನ್ನು ಸೃಷ್ಟಿಸುತ್ತಲೇ ಇರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/344**

ಸರಳತೆ

ಸರಳತೆಯಲ್ಲಿ ಉಚ್ಚತಮವಾದ ಸೌಂದರ್ಯವಿದೆ.

*

ಆಧ್ಯಾತ್ಮಿಕತೆಯೇ ಸರ್ವೋಚ್ಚವಾದ ಸರಳತೆಯಾಗಿದೆ.

*

ನೈಜ ಆಧ್ಯಾತ್ಮಿಕತೆ ಎಂಬುದು ಬಹು ಸರಳವಾಗಿದೆ.

*

ಸಮಷ್ಟಿಯನ್ನು ವ್ಯಕ್ತಪಡಿಸಲು ಸರಳತೆಗಿಂತ ಉತ್ತವಾದ ಮಾಧ್ಯಮ ಮತ್ತೊಂದಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/150–51**

ಚಿಂತಿಸಬೇಡಿ.

ನಿಮ್ಮ ಕರ್ಮವನ್ನು ಪ್ರಾಮಾಣಿಕತೆಯಿಂದ ಮಾಡಿ. ಫಲಾಫಲಗಳನ್ನು ದಿವ್ಯತೆಗೆ ಬಿಟ್ಟುಬಿಡಿ.

*

ಕರ್ಮವನ್ನು ಮಾಡುವ ಮೊದಲೇ ಅದರಿಂದಾಗುವ ತೊಂದರೆಗಳ ಕುರಿತು ಯೋಚಿಸಬೇಡಿ ಅದು ನಿಮ್ಮನ್ನು ನಿಮ್ಮ ಲಕ್ಷ್ಯದಿಂದ ವಿಮುಖರನ್ನಾಗಿಸುತ್ತದೆ.

ಪ್ರಗತಿಯ ಕುರಿತು ಯೋಚಿಸದೆ ನಿಮ್ಮ ಕಾರ್ಯದಲ್ಲಿ ತೊಡಗಿಕೊಳ್ಳುವುದು ಉತ್ತಮ. ಏಕೆಂದರೆ, ಆ ಯೋಚನೆಯೇ ನಿಮಗೆ ನಿಮ್ಮ ಪ್ರಗತಿಯಲ್ಲಿ ಅಡ್ಡಿ ಆತಂಕಗಳನ್ನು ಒಡ್ಡಿ. ನಿಮ್ಮಿಂದ ಜಯವನ್ನು ಕಿತ್ತುಕೊಳ್ಳಬಹುದು.

ಚೈತ್ಯ ಪ್ರಜ್ಞೆಯಲ್ಲಿ ವಿಶ್ವಾಸವಿಟ್ಟು ಮುನ್ನಡೆಯಿರಿ. ನಿಮಗೆ ಜಯವು ನಿಶ್ಚಿತ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/222–23**

*ಮುಂದೆ ಎಂದೂ ಸಂಭವಿಸದೇ ಇರುವ ಯಾವುದೋ ವಿಷಯದ ಕುರಿತು ಯೋಚಿಸುತ್ತ ನಮ್ಮ ಇಂದಿನ ಬದುಕನ್ನು ಚಿಂತನೆಯಲ್ಲಿ ತೊಡಗಿಸಿಕೊಳ್ಳುವುದು ಬೇಡ. ಹಾಗಾಗಿ ನಿರಾತಂಕದಿ ಬದುಕೋಣ.*

ದಿವ್ಯತೆಯು ನಮಗಾಗಿ ರೂಪಿಸಿದ ಜೀವನದೆಡೆಗೆ ಪಯಣಿಸಲು ನಮ್ಮ ಆತಂಕವೇ ನಮಗೆ ಅಡ್ಡಿಯಾಗುತ್ತದೆ. ನಮ್ಮಲ್ಲಿರುವ ವಿಶ್ವಾಸದ ಕೊರತೆಯೇ ನಮ್ಮ ಅಪರಿಪೂರ್ಣವಾದ ಜೀವನಕ್ಕೆ ಇರುವ ಸಂಕೇತವಾಗಿರುತ್ತದೆ.

## ಶ್ರೀ ಅರವಿಂದರ
## 'ಗೀತಾ ಪ್ರಬಂಧಗಳು'

**– ಅನುವಾದ: ಜಾನ್ವಿ**

**26**

### ಅಧ್ಯಾಯ – 21
### ಪ್ರಕೃತಿಯ ನಿಯತಿವಾದ (21/1)

ನಮ್ಮ ಕೃತಿಗಳು ಮತ್ತು ಆತ್ಮಜ್ಞಾನ ಸಂಲಗ್ನವಾದಾಗ ನಾವು ಉನ್ನತವಾದ ಆತ್ಮ (ಸ್ತರದಲ್ಲಿ) ವಾಸಿಸಲು ಸಾಧ್ಯವಾಗುತ್ತದೆ. ನಾವು ಆಗ ಪ್ರಕೃತಿಯ ನಿಮ್ನ ಪಾತಳಿಯ ಕಾರ್ಯಾಚರಣೆಯಿಂದ ಮುಕ್ತವಾಗುತ್ತೇವೆ. ಅದನ್ನು ಮೀರಿ ಬೆಳೆದಿರುತ್ತೇವೆ. ನಾವು ಆಗ ಪ್ರಕೃತಿಗೆ, ಅದರ ತ್ರಿಗುಣಗಳಿಗೆ ವಾಸವಾಗಿರುವುದಿಲ್ಲ. ಪ್ರಕೃತಿಯ ಪ್ರಭುವಾದ ಈಶ್ವರನ ಜೊತೆ ಒಂದಾಗಿರುತ್ತೇವೆ. ಕರ್ಮ ಬಂಧನಕ್ಕೆ ಸಿಲುಕಿಕೊಳ್ಳದೇ ಪ್ರಕೃತಿಯನ್ನು ಪರಮಾತ್ಮನ ದಿವ್ಯ ಸಂಕಲ್ಪದಂತೆ ಕಾರ್ಯಗಳನ್ನು ಮಾಡಲು ಬಳಸಿಕೊಳ್ಳ–ಬಹುದಾಗಿದೆ. ಏಕೆಂದರೆ ನಮ್ಮೊಳಗಿರುವ ಮಹತ್ತರವಾದ ಆತ್ಮವು ಪ್ರಕೃತಿಯ ಕಾರ್ಯಗಳ ಪ್ರಭುವಾಗಿದ್ದು, ಅವುಗಳ ಪ್ರತಿಕ್ರಿಯೆಯಿಂದ ಅಬಾಧಿತವಾಗಿರುವುದು. ಇದಕ್ಕೆ ವಿಪರೀತವಾಗಿ, ಪ್ರಕೃತಿಯಲ್ಲಿ ಅಜ್ಞಾನಿಯಾಗಿರುವ ಆತ್ಮವು (ಜೀವವು) ಪ್ರಕೃತಿಯ ಅಜ್ಞಾನದಿಂದ ಆಕ್ರಾಂತವಾಗಿ ಅದಕ್ಕೆ ದಾಸನಾಗಿರುವುದು, ಪ್ರಕೃತಿಯ ಗುಣಗಳಿಗೆ ವಶವರ್ತಿಯಾಗಿರುವುದು; ಏಕೆಂದರೆ ಅಜ್ಞ ಜೀವವು (ಜೀವಾತ್ಮ) ಪ್ರಕೃತಿಯ ಗುಣಗಳ ಜೊತೆ ಏಕಾತ್ಮಿತ ಹೊಂದಿರುತ್ತದೆ. ಅವುಗಳ ಜೊತೆ ಗುರುತಿಸಿಕೊಂಡಿರುತ್ತದೆ. ಅದಕ್ಕೆ ತನ್ನ ನಿಜವಾದ ಆತ್ಮ ಸತ್ತೆಯ ಅರಿವಿರುವುದಿಲ್ಲ, ಪರಮಾತ್ಮನ ಅರಿವೂ ಇರುವುದಿಲ್ಲ. ಅದು ಬೇಡವಾದರೂ ಅಸಂತೋಷದಿಂದ ಅಹಂ–ಮನಸ್ಸಿನ ಜೊತೆ ಗುರುತಿಸಿಕೊಂಡಿರುತ್ತದೆ. ಅಹಂ ಮಾನಸಿಕತೆಯು ಪ್ರಕೃತಿಯ ಗೌಣ ಅಂಶವು, ಅದು ಎಷ್ಟೇ ಕೊಚ್ಚಿಕೊಂಡರೂ, ತನ್ನನ್ನು ಬಣ್ಣಿಸಿಕೊಂಡರೂ, ಅದೊಂದು ಕೇವಲ ಮಾನಸಿಕ ಗಂಟು ಅಷ್ಟೇ, ಅದು ಪ್ರಕೃತಿಯ ಕಾರ್ಯಗಳ ಸ್ವಾಭಾವಿಕ ಆಧಾರಬಿಂದು ಮಾತ್ರವೇ. ಈ ಅಹಂ ಎಂಬ ಮಾನಸಿಕ ಗ್ರಂಥಿಯನ್ನು ಒಡೆಯಬೇಕು. ನಮ್ಮ ಕಾರ್ಯಗಳ ಕೇಂದ್ರ ಹಾಗೂ ಫಲಾನುಭವಿ ಈ ಗ್ರಂಥಿಯಾಗಿರದಂತೆ ಮಾಡಬೇಕು, ಮತ್ತು ನಮ್ಮಲ್ಲಿರುವ ಪರಮ ಆತ್ಮವೇ ನಮ್ಮ ಕಾರ್ಯಗಳ ಕೇಂದ್ರವಾಗಬೇಕು ಮತ್ತು ಅವು ನೇರವಾಗಿ ಅಲ್ಲಿಂದಲೇ ಪ್ರೇರಿತವಾಗಿರಬೇಕು ಅಂದರೆ ಮಾತ್ರ ಪ್ರಕೃತಿಯ ಎಲ್ಲ ಅವಿರತ ಹಿಂಸೆಯಿಂದ,

ತೊಂದರೆಗಳಿಂದ ಪಾರಾಗಬಹುದು. ಇದೊಂದೇ ಏಕೈಕ ದಾರಿ. ಅಹಂ–ಮನಸ್ಸು ಉನ್ನತ ಪ್ರಜ್ಞೆಯ ನಿಮ್ನ ರೂಪ, ಇದನ್ನು ಮೀರಿ ನಾವು ಉನ್ನತ, ಪರಮೋಚ್ಚ ಪ್ರಜ್ಞೆಯ ಸ್ತರದಲ್ಲಿ ವಾಸಿಸಬೇಕಾಗಿದೆ, ದಿವ್ಯ ಸಂಕಲ್ಪ ಮತ್ತು ದಿವ್ಯ ಕ್ರಿಯಾ ಶಕ್ತಿಗಳ ಸಮಪ್ರಮಾಣದ ಸಮ್ಮಿಲನದಲ್ಲಿ ಕಾರ್ಯ ಮಾಡಬೇಕಾಗಿದೆ; ಪ್ರಕೃತಿಯ ತ್ರಿಗುಣಗಳ ಅಸಮಾನ ಕ್ರೀಡೆಯಿಂದ ಪಾರಾಗಿ, ಭಗ್ನ, ವಿಕೃತ ಗೊಂದಲದ ನಿಮ್ನ ಮಾಯಾ ಸ್ತರವನ್ನು ಮೀರಿ ಮೇಲೆ ಹೋಗಬೇಕಾಗಿದೆ. ಇದೇ ನಮ್ಮ ಪ್ರಮುಖ ಸಾಹಸ ಮತ್ತು ಗುರಿಯಾಗಿದೆ.

ಗೀತೆಯು ಅನೇಕ ಸಂದರ್ಭಗಳಲ್ಲಿ ಅನೇಕ ಶ್ಲೋಕಗಳಲ್ಲಿ ಮಾನವನ ಅಹಂ ಪ್ರಜ್ಞೆಯ ಜೀವವು ಪ್ರಕೃತಿಗೆ ದಾಸನಂತಿರುವುದು ಎಂದು ಹೇಳಿರುವುದನ್ನು ಕೆಲ ವ್ಯಾಖ್ಯಾನಕಾರರು "ಪ್ರಕೃತಿಯ ನಿಯತಿಯು ನಿರಪವಾದವಾಗಿ ಯಾಂತ್ರಿಕ ಆಡಳಿತ ನಡೆಸುತ್ತದೆ ಎಂದೂ ಅದರಿಂದಾಗಿ ಯಾವ ಜೀವಿಗೂ ವಿಶ್ವ ಭೂಮಿಕೆಯಲ್ಲಿ ಸ್ವಾತಂತ್ರ್ಯ ಇರುವುದಿಲ್ಲ" ಎಂದು ಅರ್ಥೈಸಿದ್ದುಂಟು. ಗೀತೆಯು ಬಳಸುವ ಭಾಷೆಯು ಅಷ್ಟರ ಮಟ್ಟಿಗೆ ಒತ್ತು ನೀಡುವಂತಿದ್ದು ಅಧಿಕಾರಯುತವಾಗಿರುವುದು ನಿಜ. ಆದರೆ ನಾವು ಹೀಗೆಯೇ ಎಂದು ಖಡಾಖಂಡಿತವಾಗಿ ಹೇಳುವಂತಿಲ್ಲ. ಉಳಿದ ಅನೇಕ ಉಪನಿಷದಾದಿಗಳಲ್ಲಿ ಅರ್ಥ ಮಾಡಿದಂತೆ ಗೀತೆಯನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿ ಅರ್ಥೈಸಬೇಕೇ ವಿನಃ ಎಲ್ಲೋ ಒಂದೆರಡು ಹೇಳಿಕೆಗಳನ್ನು, ಅವು ಎಷ್ಟೇ ಖಡಾಖಂಡಿತವಾಗಿ ಸತ್ಯವಾಗಿದ್ದರೂ ಸಹ, ಆಧರಿಸಿ ವ್ಯಾಖ್ಯಾನ ಮಾಡಬಾರದು. ಹಾಗೆ ಮಾಡಿದ್ದೇ ಆದರೆ ಬುದ್ಧಿಗೆ ಬಲೆ ಬೀಸಿ ಕುರುಡು ಅಭಿಪ್ರಾಯವನ್ನು ಪುರಸ್ಕರಿಸಿದಂತಾಗುವ ಸಂಭವ ಇರುತ್ತದೆ. ವಾಸ್ತವವಾಗಿ ಒಂದೊಂದು ಎಳೆಯೂ ಸಹ ಸಂಕೀರ್ಣವಾದ ನೇಯ್ಗೆಯಲ್ಲಿ ಮುಖ್ಯವಾಗಿಯೇ ಇರುತ್ತದೆ. ಆದ್ದರಿಂದ ಒಂದೊಂದೇ ಎಳೆಯನ್ನು ಹೊರತೆಗೆದು ನೋಡುವುದು ಯೋಗ್ಯವಲ್ಲ. ಗೀತೆಯಲ್ಲಿನ ಪ್ರತಿಯೊಂದು ಹೇಳಿಕೆಯೂ ಸಮಗ್ರ ಕೃತಿಯಲ್ಲಿನ ಒಂದು ಎಳೆಯಂತೆ ಅತಿ ಮುಖ್ಯವಾದುದು, ಅದನ್ನು ಸಂದರ್ಭದಿಂದ ಹೊರತೆಗೆದು ಅರ್ಥೈಸದೇ ಸಮಗ್ರ ಮತಿತಾರ್ಥದ ಸಂಬಂಧದ ದೃಷ್ಟಿಯಿಂದಲೇ ಅರ್ಥೈಸಬೇಕು. ಸ್ವತಃ ಗೀತೆಯೇ ಎರಡು ರೀತಿಯ ವ್ಯಕ್ತಿಗಳನ್ನು ಅಥವಾ ವ್ಯಾಖ್ಯಾನಕಾರರನ್ನು ಕುರಿತು ಹೀಗೆ ಹೇಳುತ್ತದೆ; ಕೆಲವರಿಗೆ ಸಮಗ್ರ ಅಧ್ಯಯನವಿರುವುದಿಲ್ಲವಾಗಿ ಅರೆ–ಬರೆ ಜ್ಞಾನವಿರುತ್ತದೆ, ಇಂಥವರನ್ನು ಅಕೃತ್ಸ್ನವಿತ್ ಎಂದು ಹೇಳಲಾಗುವುದು, ಇಂಥವರು ಸತ್ಯದ ಅರ್ಥಮರ್ಥ ತಿಳುವಳಿಕೆಯಿಂದಾಗಿ ತಪ್ಪು ದಾರಿ ಹಿಡಿಯುತ್ತಾರೆ.

ಕೆಲ ಯೋಗಿಗಳಿರುತ್ತಾರೆ, ಅಂಥವರಿಗೆ ಸಮನ್ವಯ ಪೂರ್ವಕವಾದ ಸಮಗ್ರ ಜ್ಞಾನ ಇರುತ್ತದೆ. ಇಂಥವರನ್ನು ಗೀತೆಯು ಕೃತ್ಸ್ನವಿತ್ ಎಂದು ಕರೆಯುತ್ತದೆ. ಮೊದಲು ಇಡೀ ಅಸ್ತಿತ್ವವನ್ನು ಚೆನ್ನಾಗಿ ಅರಿತುಕೊಂಡು, ಅಸ್ತಿತ್ವವು ಒಂದೇ ಎಂಬುದನ್ನು ಗಟ್ಟಿ ಮಾಡಿಕೊಳ್ಳಬೇಕು, ಅದರಲ್ಲಿರುವ ವಿರೋಧಾಭಾಸವೆಂದು ತೋರುವ ಸತ್ಯವನ್ನು ಹಿಡಿದು ತಪ್ಪು ದಾರಿ ಹಿಡಿಯಬಾರದು. ಇದು ಅತ್ಯಂತ ಮೊದಲು ಯೋಗಿಯಾದವನಿಗೆ ಇರಬೇಕಾದ ಗುಣ, ಅಂದರೆ ಮಾತ್ರ ಅವನಿಗೆ ಶಾಂತಿ ಮತ್ತು ಜ್ಞಾನ ಲಭಿಸುವುದು. ನಮ್ಮ ಅಸ್ತಿತ್ವದ ಒಂದು ದಂಡೆಯಲ್ಲಿ ನಮ್ಮ ಜೀವಕ್ಕೆ (ಜೀವಾತ್ಮನಿಗೆ) ಪ್ರಕೃತಿಗೆ ಸಂಬಂಧಿಸಿದಂತೆ ನಿರ್ದಿಷ್ಟ ಹಂತದ ಪೂರ್ಣ ಸ್ವಾತಂತ್ರ್ಯ ಇದೆ; ಇನ್ನೊಂದು ದಂಡೆಯಲ್ಲಿ ಮತ್ತಷ್ಟು ನಿರ್ದಿಷ್ಟ ಹಂತದ ಪ್ರಕೃತಿಯ ನಿಯತಿ ಅಥವಾ ಅದರದೇ ಆದ ಸ್ವವ್ಯಾಪ್ತಿಯ ಸಂಪೂರ್ಣ ಅಧಿಕಾರವಿದೆ. ಅಷ್ಟೇ ಅಲ್ಲ ಈ ಎರಡೂ ವಿರುದ್ಧ ಸತ್ಯಗಳನ್ನು ಸಮೀಕರಿಸುವ ಪ್ರಯತ್ನದಲ್ಲಿ ಮಾನವನ ಅಭಿವೃದ್ಧಿ ಹೊಂದುತ್ತಲೇ ಇರುವ ಬುದ್ಧಿಯು ಈ ಸಮನ್ವಯವನ್ನು ವಿಕೃತವಾದ ರೀತಿಯಲ್ಲಿ ಪ್ರತಿಫಲಿಸಿ ಅಸತ್ಯ ಹಾಗೂ ಭ್ರಮಾತ್ಮಕವಾದ ಸ್ವಾತಂತ್ರ್ಯವನ್ನು ಕಲ್ಪಿಸಿಕೊಳ್ಳುವ ಮೇಲ್ ತೋರಿಕೆಯ, ಅರೆ–ಬರೆ ವಿಚಾರಧಾರೆಯ ಮಧ್ಯಂತರ ಸ್ಥಿತಿಯೂ ಒಂದಿದೆ. ಇಂಥ ಮಧ್ಯಂತರ ಸ್ಥಿತಿಗೆ ನಾವು ಇಚ್ಛಾ ಸ್ವಾತಂತ್ರ್ಯ ಎಂದು ಕರೆಯುವುದು. ಆದರೆ ಗೀತೆಯು ಇಂಥ ಅರ್ಧಮರ್ಧ ಸ್ವಾತಂತ್ರ್ಯವನ್ನು ಒಪ್ಪುವುದಿಲ್ಲ. ಇದನ್ನು ಪೂರ್ಣ ಸ್ವಾತಂತ್ರ್ಯವಲ್ಲ. ಪೂರ್ಣ ಪ್ರಭುತ್ವವೂ ಅಲ್ಲವೆಂದು ನಿರಾಕರಿಸುತ್ತದೆ.

ಗೀತೆಯ ಬೋಧನೆಯ ಹಿಂದೆ ಜೀವಾತ್ಮ ಮತ್ತು ಪ್ರಕೃತಿಯ ವಿಷಯವಾಗಿ ಎರಡು ಅತಿ ಮಹತ್ವದ ತತ್ವಗಳನ್ನು ಹೇಳಲಾಗಿದೆ. ಅದನ್ನು ನಾವು ಸದಾ ನೆನಪಲ್ಲಿಟ್ಟುಕೊಳ್ಳಬೇಕು. ಅದು ಸಾಂಖ್ಯರ ಪರಿಕಲ್ಪನೆಯಾದ ಪ್ರಕೃತಿ ಮತ್ತು ಪುರುಷರ ಸಂಬಂಧದ ತತ್ವವನ್ನು ವೇದಾಂತದ ಸತ್ಯದ ಮೂಲಕ ತುಸು ಸರಿಪಡಿಸಿ, ಪೂರ್ಣಗೊಳಿಸಿ ಪ್ರತಿಪಾದಿಸುತ್ತದೆ. ಗೀತೆಯು ಪುರುಷನನ್ನು ತ್ರಿವಿಧನೆಂದೂ, ಪ್ರಕೃತಿಯನ್ನು ದ್ವಿವಿಧವೆಂದೂ ವರ್ಣಿಸುತ್ತದೆ. ಪ್ರಕೃತಿಯ ಎರಡು ವಿಧಗಳ ಪೈಕಿ ನಿಮ್ನ ಸ್ತರದ ಪ್ರಕೃತಿಯು ಮಾಯೆಯಾಗಿದ್ದು, ಇದು ತ್ರಿಗುಣಗಳಿಂದ ಕೂಡಿರುತ್ತದೆ. ಉನ್ನತ ಪ್ರಕೃತಿಯು ದೈವೀ ಸ್ವಭಾವದ್ದಾಗಿದ್ದು, ನಿಜವಾದ ಆತ್ಮ ಪ್ರಕೃತಿಯನ್ನು ಹೊಂದಿರುತ್ತದೆ. ಇದು ಮುಖ್ಯವಾದ ಬೀಗದ ಕೈ, ಇದು ಸಮನ್ವಯ ಮಾಡುವುದರ ಜೊತೆಗೆ ನಮ್ಮ ತಿಳುವಳಿಕೆಯನ್ನು ತಿದ್ದುತ್ತದೆ. ಅನ್ಯಥಾ ನಾವು, ಯಾವೆಲ್ಲವನ್ನು ವಿರುದ್ಧವೆಂದು, ಸಮನ್ವಯ ಮಾಡಲು ಸಾಧ್ಯವೇ ಇಲ್ಲವೆಂದು ನಿರಾಕರಿಸಿ

ಬಿಡುತ್ತಿದ್ದೆವೋ, ಅವುಗಳ ಬಗೆಗೆ ನಮಗೆ ಸರಿಯಾದ ತಿಳುವಳಿಕೆಯನ್ನು ನೀಡುತ್ತದೆ, ಅವುಗಳ ಬಗೆಗೆ ಸರಿಯಾದ ವಿವರಣೆ ನೀಡಿ ಅವುಗಳನ್ನು ಸಮೀಕರಿಸುತ್ತದೆ. ನಮ್ಮ ಪ್ರಜ್ಞಾಯುಕ್ತ ಅಸ್ತಿತ್ವದಲ್ಲಿ ಕೆಲ ಬೇರೆ ಬೇರೆ ಸ್ತರಗಳಿವೆ; ಒಂದು ಸ್ತರದಲ್ಲಿ ಕಂಡುಬಂದ ಸತ್ಯವು ಮತ್ತೊಂದು ಸ್ತರದಲ್ಲಿ ಸುಳ್ಳು ಅಥವಾ ಅವ್ಯವಹಾರ್ಯವೆನಿಸುವುದು, ಏಕೆಂದರೆ ನಾವು ಮೇಲು ಮೇಲಿನ ಸ್ತರಕ್ಕೆ ಏರಿದಂತೆಲ್ಲ ನಮ್ಮ ದೃಷ್ಟಿ ಹೆಚ್ಚು ಹೆಚ್ಚು ಸಮಗ್ರ ಅಥವಾ ಪೂರ್ಣವಾಗುತ್ತ ಹೋಗುತ್ತದೆ, ಆದ್ದರಿಂದ ಪೂರ್ವ ತೋರಿಕೆಯ ಸಂಗತಿಯು ಬೇರೆಯದೇ ಆದ ರೂಪವನ್ನು ತಾಳುವುದಲ್ಲದೇ ಅದು ತೀರ ಭಿನ್ನವಾಗಿಯೇ ತೋರುತ್ತದೆ. ಇತ್ತೀಚಿನ ವೈಜ್ಞಾನಿಕ ಸಂಶೋಧನೆಯು ದೃಢಪಡಿಸಿದಂತೆ ಮನುಷ್ಯ, ಪ್ರಾಣಿ, ಸಸ್ಯ ಹಾಗೂ ಜಡ ಭೌತಿಕ ಕೂಡ ಮೂಲಭೂತವಾಗಿ ಒಂದೇ ಪ್ರಕಾರದ ಪ್ರಾಣಿಕ ಪ್ರತಿಕ್ರಿಯೆ ಹೊಂದಿರುತ್ತವೆ. ಆದರೂ ಎಲ್ಲವೂ ತಮ್ಮದೇ ಆದ ವೈಶಿಷ್ಟ್ಯವನ್ನು ಪ್ರತಿಫಲಿಸುತ್ತವೆ. ನಾವಿದನ್ನು ನರವಾಹಿನಿಗಳ ಪ್ರಜ್ಞೆ (nervous consiciousness) ಎಂದು ಕರೆಯುತ್ತೇವೆ; ಇದು ಸರಿಯಾದ ಶಬ್ದವಲ್ಲವೆಂಬುದು ಗೊತ್ತಿದೆಯಾದರೂ ಬೇರೆ ಒಳ್ಳೆಯ ಶಬ್ದದ ಕೊರತೆಯಿಂದಾಗಿ ಇದನ್ನೇ ಉಪಯೋಗಿಸುತ್ತೇವೆ. ಮನುಷ್ಯನಾದಿಯಾಗಿ ಎಲ್ಲವೂ ಒಂದೇ ವಿಧವಾದ ಯಾಂತ್ರಿಕ ಮಾನಸಿಕತೆಯನ್ನು ಹೊಂದಿವೆ ಎಂಬುದು ಖಚಿತವಾಗಿದೆ. ಆದರೆ ಇವೆಲ್ಲವೂ ತಮ್ಮ ಅನುಭವವನ್ನು ತೀರ ವಿಭಿನ್ನವಾದ ರೀತಿಯಲ್ಲಿ ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ಪ್ರಸ್ತುತ ಪಡಿಸುತ್ತವೆ ಮತ್ತು ಇವು ಪರಸ್ಪರ ಹೊಂದಾಣಿಕೆಯಾಗದಷ್ಟು ವಿರುದ್ಧವಾಗಿರುತ್ತವೆ. ನಾವು ಮೇಲಿನ ಸ್ತರಕ್ಕೆ ಏರಿಹೋದಂತೆಲ್ಲ ಅವುಗಳಿಗೆಲ್ಲ ಹೊಸ ಅರ್ಥ ಬರುತ್ತದೆ. ಅವುಗಳ ಮೌಲ್ಯಮಾಪನವನ್ನು ಕೂಡ ಬೇರೆ ಮಾನದಂಡಗಳಿಂದ ಮಾಡಬೇಕಾಗುತ್ತದೆ. ಇದು ವ್ಯಕ್ತಿಯ ಜೀವ (ಜೀವಾತ್ಮನ) ಸ್ತರದ ಮೇಲೆ ಅವಲಂಬಿತವಾಗಿರುತ್ತದೆ. ನಮ್ಮ ಸಾಮಾನ್ಯ ಮಾನಸಿಕ ಸ್ತರದಲ್ಲಿ ಯಾವುದನ್ನು ಇಚ್ಛಾ ಸ್ವಾತಂತ್ರ್ಯವೆಂದು ಕರೆಯುತ್ತೇವೆಯೋ ಮತ್ತು ಆ ವಿಷಯವಾಗಿ ಸಾಕಷ್ಟು ಸಮರ್ಥನೆಯನ್ನು ಕೊಟ್ಟರೂ ಸಹ, ಯೋಗಿಯಾದವನಿಗೆ ಅದು ಇಚ್ಛಾ ಸ್ವಾತಂತ್ರ್ಯ ಎನಿಸುವುದಿಲ್ಲ. ಅವನು ಸಾಮಾನ್ಯ ಅರ್ಥಾಪತ್ತಿಯ ಸ್ತರದಿಂದ ಬಹಳ ಮೇಲೆ ಏರಿ ಹೋಗಿದ್ದಾನೆ, ಅವನಿಗೆ ನಮ್ಮ ಹಗಲು ರಾತ್ರಿಯಾಗಿಯೂ, ನಮ್ಮ ರಾತ್ರಿಯು ಹಗಲಾಗಿಯೂ ಕಾಣುತ್ತದೆ. (2.69) ನಮ್ಮ ಆತ್ಮ ಸ್ವಾತಂತ್ರ್ಯವನ್ನವನು ಒಪ್ಪುವುದಿಲ್ಲ. ನಮ್ಮ ಇಚ್ಛಾ ಸ್ವಾತಂತ್ರ್ಯವನ್ನು ಅವನು ಪ್ರಕೃತಿಯ ತ್ರಿಗುಣಗಳ ಕಾರ್ಯವೆಂದೇ ಭಾವಿಸುತ್ತಾನೆ. ನಾವು ಏನೆಲ್ಲ ಸಂಗತಿಗಳನ್ನು ಕಾಣುತ್ತೇವೆಯೋ, ಅವನು ಕೂಡ ಅವುಗಳನ್ನೇ

ನೋಡುತ್ತಾನೆ, ಆದರೆ ಅವನ ದೃಷ್ಟಿ ಭಿನ್ನವಾಗಿರುತ್ತದೆ. ಅವನದು ಪೂರ್ಣ ದೃಷ್ಟಿಯಾಗಿರುತ್ತದೆ. ಕೃತ್ಸ್ನವಿತ್ ನಮ್ಮ ಅಜ್ಞಾನದಿಂದಾಗಿ, ಅರೆಬರೆ ಜ್ಞಾನ ಅಥವಾ ತಿಳುವಳಿಕೆಯಿಂದ ಅಕೃತ್ಸ್ನವಿದ: ನಾವು ವಸ್ತುಗಳನ್ನು, ಪ್ರಪಂಚವನ್ನು ತಪ್ಪಾಗಿ ಅರ್ಥೈಸುತ್ತೇವೆ. ನಾವು ಯಾವುದನ್ನು ಇಚ್ಛಾ ಸ್ವಾತಂತ್ರ್ಯವೆಂದು ಕರೆಯುತ್ತೇವೆಯೋ ಅದು ಅವನಿಗೆ ಬಂಧನವಾಗಿ ತೋರುತ್ತದೆ.

ನಿಮ್ನ ಪ್ರಕೃತಿಯ ಬಲೆಯಲ್ಲಿ ಸಿಲುಕಿಕೊಂಡಿರುವ ನಾವು ಸ್ವತಂತ್ರರು, ನಮಗೆ ಇಚ್ಛಾ ಸ್ವಾತಂತ್ರ್ಯವಿದೆಯೆಂದು ಬೀಗುವುದು ತಪ್ಪಾಗುತ್ತದೆ ಎಂದು ಗೀತೆ ಹೇಳುತ್ತದೆ; ಆದರೂ ಸಹ, ಇದಕ್ಕೆ ವಿರುದ್ಧವಾಗಿ ಅಹಂ ಪ್ರಜ್ಞೆಯುಳ್ಳ ಆತ್ಮವು ಎಲ್ಲಿಯವರೆಗೆ ಈ ತ್ರಿಗುಣಾತ್ಮಕ ಪ್ರಕೃತಿಯ ವಶವರ್ತಿಯಾಗಿರುವುದೋ ಅಲ್ಲಿಯವರೆಗೆ ಇದು ಸತ್ಯ ಎಂದೂ ಹೇಳುತ್ತದೆ. ಪ್ರಕೃತಿಯ ಗುಣಗಳಿಂದಲೇ ಲೋಕದ ಸಮಸ್ತ ವ್ಯವಹಾರ ನಡೆಯುತ್ತಿದ್ದರೂ ಸಹ ಅಹಂ ಪ್ರಜ್ಞೆಯಿಂದ ಕೂಡಿದ ಜೀವನು ತಾನೇ ಕರ್ತೃ ಎಂದು ಭಾವಿಸುತ್ತಾನೆ. ಎಲ್ಲ ಕಾರ್ಯಗಳನ್ನು ಮಾಡುವವನು ತಾನೇ ಎಂಬ ಭಾವನೆ ಇರುತ್ತದೆ. ಆದರೆ ಗುಣಗಳ ವಿಭಜನೆಯ ನಿಜ ಸತ್ವವನ್ನು ಅರಿತವನು, ಈ ಎಲ್ಲ ಕ್ರಿಯೆಗಳು, ಪ್ರತಿ–ಕ್ರಿಯೆಗಳು, ಕಾರ್ಯ ಕಾರ್ಯಫಲಗಳು ಗುಣಗಳ ಅಧೀನ ಎಂಬ ಸತ್ಯವನ್ನು ಕಂಡುಕೊಳ್ಳುತ್ತಾನೆ. ಅದರಿಂದಾಗಿ ಅವನಲ್ಲಿ ಕರ್ಮ ಮತ್ತು ಕರ್ಮ ಫಲಗಳಲ್ಲಿ ಆಸಕ್ತಿ ಕಡಿಮೆಯಾಗುತ್ತದೆ. ಅವುಗಳ ಬಂಧನದಲ್ಲಿ ಅವನು ಸಿಲುಕಿಕೊಳ್ಳುವುದಿಲ್ಲ. ಆದರೆ ಸಮಗ್ರ ಜ್ಞಾನವುಳ್ಳ ವ್ಯಕ್ತಿಯು ಅಲ್ಪಮತಿಗಳಾದ, ಪ್ರಕೃತಿಯ ಗುಣಗಳಲ್ಲಿ ಸಿಲುಕಿದ ಸಾಮಾನ್ಯ ಜನರನ್ನು ವಿಚಲಿತಗೊಳಿಸಬಾರದು, ದೊಡ್ಡ ದೊಡ್ಡ ತತ್ತ್ವ ಶಾಸ್ತ್ರದ ಚಿಂತನೆಗಳನ್ನು ಹೇಳಿ ಅವರ ಮನದಲ್ಲಿ ಗೊಂದಲ ಎಬ್ಬಿಸಬಾರದು. "ನೀನು ಮಾತ್ರ ಎಲ್ಲ ಆಶೆಗಳನ್ನು, ಅಹಂ ಭಾವವನ್ನು (ಅಹಂ– ನಾನೆಂಬ ಕರ್ತೃತ್ವ ಭಾವವನ್ನು) ಬಿಟ್ಟು, ಸಕಲ ಕರ್ಮಗಳನ್ನು ನನಗೆ ಅರ್ಪಿಸಿ, ಯುದ್ಧ ಮಾಡು. ಆತ್ಮ ಜ್ವರದಿಂದ ಮುಕ್ತನಾಗಿ ಕಾರ್ಯಪ್ರವೃತ್ತನಾಗು" (3.27–30) ಈ ಪರಿಚ್ಛೇದದಲ್ಲಿ ಪ್ರಜ್ಞೆಯ ಎರಡು ಭೂಮಿಕೆಗಳನ್ನು, ಕರ್ಮದ ಎರಡು ದೃಷ್ಟಿಕೋನಗಳನ್ನು ವಿಂಗಡಿಸಿ ಹೇಳಿರುವುದನ್ನು ಕಾಣಬಹುದು. ಒಂದು ಭೂಮಿಕೆಯಲ್ಲಿ ತನ್ನ ಅಹಂನ ಜಾಲದಲ್ಲಿ ಸಿಲುಕಿ ಅಹಂ ಪ್ರಚೋದನೆಗೆ ಒಳಗಾಗಿ, ಅದರಧೀನವಾಗಿ ಕಾರ್ಯಮಾಡುತ್ತಾನೆ. ತನ್ನ ಇಚ್ಛಾ ಬಲದಿಂದಲೇ ತಾನು ಕರ್ಮಗಳನ್ನು ಮಾಡುತ್ತಿರುವುದಾಗಿ ಅವನು ಭಾವಿಸುತ್ತಾನೆ. ಈ ಗ್ರಹಿಕೆ, ಕಲ್ಪನೆ ವಸ್ತು ಸ್ಥಿತಿ ಅಲ್ಲ. ಇನ್ನೊಂದು ಭೂಮಿಕೆಯಲ್ಲಿ ಅಹಂಕಾರದ ಹಿಡಿತದಿಂದ

ಪಾರಾಗಿ, ಅದರ ಜೊತೆ ಆತ್ಮೀಯವಾಗಿ ಬೇರೆಯದೇ, ಪ್ರಕೃತಿಯ ನಿಯಂತ್ರಣದಿಂದ ಮೇಲಕ್ಕೇರಿ ಪ್ರಕೃತಿಯ ಕಾರ್ಯಗಳನ್ನು ಸಾಕ್ಷಿ ಪ್ರಜ್ಞೆಯಿಂದ ವೀಕ್ಷಿಸುತ್ತ, ಅನುಮಂತಾ ಆಗಿ ಅವುಗಳಿಗೆ ಸಮ್ಮತಿ ನೀಡುತ್ತ, ಅವಶ್ಯವಿದ್ದಲ್ಲಿ ನಿಯಂತಾ ಆಗಿ ಕೂಡ ಕೆಲಸ ಮಾಡುತ್ತದೆ.

ಆತ್ಮನು (ಜೀವನು) ಪ್ರಕೃತಿಗೆ ವಶನಾಗಿದ್ದಾನೆ, ಅದರ ಆಳಾಗಿದ್ದಾನೆ ಎಂದು ನಾವು ಮಾತನಾಡುತ್ತೇವೆ. ಆದರೆ ಗೀತೆಯು ಆತ್ಮ ಮತ್ತು ಪ್ರಕೃತಿಯ ನಡುವಿನ ಸಂಬಂಧವನ್ನು ಮತ್ತು ಭೇದವನ್ನು ವಿವರಿಸುತ್ತ, ಪ್ರಕೃತಿಯು ಕೇವಲ ಕಾರ್ಯಕಾರಿಣಿ ಶಕ್ತಿ, ಆತ್ಮನು ಅದರ ಪ್ರಭು–ಈಶ್ವರ ಎಂದು ಹೇಳುತ್ತದೆ. ಜೀವವು ಅಹಂ ಪ್ರಜ್ಞೆಯಿಂದ ಆವೃತವಾಗಿದೆ ಎಂಬುದು ಗೀತೆಯ ಮತ. ವೇದಾಂತದ ಮತದ ಪ್ರಕಾರ ನಿಜವಾದ ಆತ್ಮವು ದೈವಿಕವಾದದ್ದು, ದಿವ್ಯವಾದದ್ದು; ಅದು ನಿತ್ಯ ಮುಕ್ತ ಮತ್ತು ಆತ್ಮ (ಸ್ವಯಂ) ಜ್ಞಾನವುಳ್ಳದ್ದಿರುವುದು. ಹಾಗಾದರೆ ಪ್ರಕೃತಿಯಿಂದ ಆವೃತವಾಗಿರುವ ಜೀವ (ಆತ್ಮ) ಯಾವುದು? ಯಾವುದು ಪ್ರಕೃತಿಗೆ ಅಧೀನವಾಗಿದೆ ಎಂಬುದು ಮಹತ್ವದ ಪ್ರಶ್ನೆ. ಇದಕ್ಕೆ ಉತ್ತರವೇನೆಂದರೆ, ಈ ಆತ್ಮ, ಜೀವ, ಪ್ರಕೃತಿ ಮುಂತಾಗಿ ನಾವು ಮಾತನಾಡುವುದು, ವರ್ಣಿಸುವುದೆಲ್ಲವೂ ಸಾಮಾನ್ಯ ದೃಷ್ಟಿಕೋನದಿಂದ; ಮಾನವನ ನಿಮ್ನ ಅಥವಾ ಮಾನಸಿಕ ಅರ್ಥಾಪತ್ತಿಯನ್ನನುಸರಿಸಿ ಹೇಳುವ ರೀತಿ ಇದು. ಹೀಗೆ ಹೇಳುವಾಗ ನಾವು ಮೇಲೆ ಕಾಣುವ ತೋರಿಕೆಯನ್ನೇ ನಿಜವೆಂದು ಹಿಡಿದು ಹೇಳುವ ಪರಿ; ಸಾಮಾನ್ಯವಾಗಿ ನಾವು ಆತ್ಮವೆಂದು ಹೇಳುವುದು ಕೂಡ ಜೀವವನ್ನೇ. ನಿಜವಾದ ಆತ್ಮ ಅಥವಾ ಪುರುಷನನ್ನು ಕುರಿತು ಹೇಳುವ ಮಾತಲ್ಲ ಇದು. ನಿಜವಾಗಿ ನೋಡಿದರೆ ಅಹಂ ಪ್ರಜ್ಞೆಯ ಪ್ರಕೃತಿಗೆ ಅಧೀನವಾಗಿರುವ ತತ್ತ್ವವು. ಅದು ಪ್ರಕೃತಿಯದೇ ಒಂದು ಅಂಶ ಅಥವಾ ಭಾಗ. ಪ್ರಕೃತಿಯು ಕಾರ್ಯ ಮಾಡುವುದೇ ಈ ಅಹಂ ಪ್ರಜ್ಞೆಯ ಮೂಲಕ. ಮನೋ ಭೂಮಿಕೆಯಲ್ಲಿ ಸ್ವ ಪ್ರಜ್ಞೆಯು ಅಹಂ ಜೊತೆಗೆ ಗುರುತಿಸಿಕೊಂಡಾಗ ಅದು ನಿಮ್ನ ಆತ್ಮ ಅಥವಾ ಅಹಂ (ಭಾವದ) ಜೀವವಾಗಿ ತೋರುವುದು. ಆದ್ದರಿಂದ ನಾವು ಆತ್ಮ ಎಂದು ಹೇಳುವಾಗಲೆಲ್ಲ ಸಾಮಾನ್ಯವಾಗಿ ಈ ಪ್ರಾಕೃತಿಕ ವ್ಯಕ್ತಿತ್ವ ಅಥವಾ ಮನಃ ಪ್ರಾಣ ಶರೀರಗಳ ಜೀವಿಯೇ ಅಭಿಪ್ರೇತವಾಗಿರುತ್ತದೆ. ನಮ್ಮೊಳಗಿನ ವಾಸನಾ ಪುರುಷ ಅಥವಾ ನಿಮ್ನ ಬಯಕೆಗಳ ಸತ್ತೆಯು ವಾಸ್ತವವಾಗಿ ದಿವ್ಯ ಪುರುಷನಿಂದ ತೀರ ಭಿನ್ನನೇನಲ್ಲ. ಅವನು ಪ್ರಕೃತಿಯ ಕಾರ್ಯಾಚರಣೆಯಲ್ಲಿ ನಮ್ಮ ಮನಃ ಪ್ರಾಣ ಶರೀರಗಳಲ್ಲಿ ಮೂಡಿರುವ ಪ್ರತಿಬಿಂಬವಾಗಿರುವುನು. ಪ್ರಕೃತಿಯ ಕಾರ್ಯಕಾರಿಣಿ

ಶಕ್ತಿಗಳಾದ ಸತ್ವ, ರಜ, ತಮಗಳೆಂಬ ತ್ರಿಗುಣಗಳಿಗೆ, ಅವುಗಳ ವಿವಿಧ ಕಾರ್ಯಗಳಿಗೆ ಈ ಪ್ರತಿಬಿಂಬಿತ ಜೀವನು ಬದ್ಧನಾಗಿರುವುನು. ಹೀಗಾಗಿ ವಾಸನಾಮಯ ಜೀವನು ಪ್ರಕೃತಿಯ ಅಂಶನೇ ಆಗಿರುವುನು. ಹೀಗೆ ನಮ್ಮೊಳಗೆ ಇಬ್ಬರು – ದ್ವಿವಿಧ ಪುರುಷರಿದ್ದಾರೆ ಎಂದು ಹೇಳಬಹುದು. ಮೇಲೆ ಕಾಣುವ ವಾಸನಾಮಯ ಪುರುಷನು ಪ್ರಕೃತಿಯ ಗುಣಗಳಿಗೆ ಅಧೀನನಾಗಿದ್ದು. ಅವುಗಳ ಸಮ್ಮೇಲನದಲ್ಲಿನ ವೈಪರಿತ್ಯದ ಪ್ರಕಾರ ಬದಲಾವಣೆ ಹೊಂದುತ್ತಿರುವುನು. ಇವನು ಪ್ರಕೃತಿಗೆ ಬದ್ಧನಾಗಿದ್ದು, ಅದರಿಂದಲೇ ನಿಯಂತ್ರಿತನಾಗಿರುವುನು. ಇನ್ನೋರ್ವ ಪುರುಷನು ನಿತ್ಯಮುಕ್ತನಾಗಿರುವವನು. ಇವರನ್ನು ಪ್ರಕೃತಿಯ ಗುಣಗಳಿಂದ ಮೇಲೇರಿ, ಅವುಗಳನ್ನು ಮೀರಿ, ಅವುಗಳಿಗೆ ಬದ್ಧನಾಗಿರದೇ ಸ್ವತಂತ್ರನಾಗಿರುವುನು. ಈ ರೀತಿ "ದ್ವಾವಿಮೌ ಪುರುಷೌ" ಗುರುತಿಸಬಹುದು. (15–16) ನಾನು ಅಥವಾ ಅಹಂ ಎಂಬ ಭಾವದಿಂದ ಕೂಡಿದ ಜೀವನು (ಆತ್ಮನು) ಮನೋ ಕೇಂದ್ರಿತನಾಗಿದ್ದು ಪ್ರಕೃತಿಯ ಎಲ್ಲ ಬದಲಾವಣೆಗಳಿಗೆ, ವಿಕಾರಗಳಿಗೆ ಬದ್ಧನಾಗಿರುವುನು. ಇವನೇ "ಎಲ್ಲ ಕರ್ಮಗಳನ್ನು ಮಾಡುವ ಕರ್ತಾರ ನಾನೇ, ನಾನೇ ನೈಜ ಆತ್ಮ" ಎಂದು ಭಾವಿಸಿರುತ್ತಾನೆ. ಆದರೆ ಪ್ರಕೃತಿಗೆ ವಶವರ್ತಿಯಾದ ಆತ್ಮನು (ಜೀವನು) ಪ್ರಕೃತಿಯ ಗುಣಗಳ ಸಂಯುಕ್ತ ರೂಪವಾಗಿರುವುನೇ ವಿನಃ ನಿಜವಾದ ಆತ್ಮನಾಗಿರುವುದಿಲ್ಲ. ನಿಜವಾದ ಆತ್ಮನು ಪ್ರಕೃತಿಗೆ, ಅದರ ಚಟುವಟಿಕೆಗಳಿಗೆ ಆಧಾರವಾಗಿರುತ್ತ, ಅವುಗಳಿಗೆ ಈಶ್ವರನೂ, ಪ್ರಭುವೂ ಆಗಿರುವುನು. ಅವನು ಪ್ರಕೃತಿಯ ಸಂಘಾತಗಳಲ್ಲಿ ಕಾಣಿಸಿಕೊಂಡರೂ ಅವುಗಳಿಂದ ಅಬಾಧಿತನಾಗಿರುವುನು. ಅವನು ಅವಿಕಾರಿಯಾಗಿದ್ದು ಪ್ರಕೃತಿಯ ವಿಕಾರಗಳಿಗೆ, ಕಾರ್ಯಗಳಿಗೆ ಅತೀತನಾಗಿರುವುನು. ಪ್ರಕೃತಿಯ ವಿಕೃತಿಗಳಿಂದ ಪಾರಾಗಬೇಕು, ಮುಕ್ತನಾಗಬೇಕು ಎನ್ನುವುದಾದರೆ ಈ ವಾಸನಾಮಯ ಪುರುಷನ ಎಲ್ಲ ಕಾಮನೆಗಳಿಂದ ಬಿಡುಗಡೆ ಹೊಂದಬೇಕು ಮತ್ತು ಅಹಂ ಪ್ರಜ್ಞೆಯ ಮಿಥ್ಯಾ ಗ್ರಹಿಕೆಯಾದ "ನಾನೇ ಆತ್ಮ" ಎಂಬ ಭಾವವನ್ನು ತ್ಯಜಿಸಬೇಕು. ಇದನ್ನೇ ಗೀತೆಯು "ಎಲ್ಲ ಕರ್ಮಗಳನ್ನು ನನಗೆ ಅರ್ಪಿಸಿ ನೀನು ಆಧ್ಯಾತ್ಮ ಭಾವದಿಂದ, ನಿರಾಶೀರ್ನಿರ್ಮಮೋ ಭೂತ್ವಾ ನಿಶ್ಚಿಂತೆಯಿಂದ ಯುದ್ಧ ಮಾಡು" (3.30) ಎಂದು ಹೇಳುತ್ತದೆ.

ಪ್ರಕೃತಿ – ಪುರುಷರ ಈ ಪರಿಕಲ್ಪನೆ ನಿಜವಾಗಿ ಸಾಂಖ್ಯರದ್ದು, ಅಸ್ತಿತ್ವದ ಈ ರೀತಿಯ ವಿಶ್ಲೇಷಣೆ, ವಿವರಣೆ ಆರಂಭವಾಗಿದ್ದೇ ಅವರಿಂದ. ಪುರುಷನು ನಿಷ್ಕ್ರಿಯ, ಅವನು ಏನೂ ಮಾಡುವುದಿಲ್ಲ; ಕ್ರಿಯಾಶೀಲವಾಗಿರುವ ತತ್ವವೆಂದರೆ ಅದು

ಪ್ರಕೃತಿಯೇ, ಅದೇ ಎಲ್ಲ ಕಾರ್ಯಗಳನ್ನು ಮಾಡುವುದು ಎಂಬುದು ಅವರ ಅಭಿಪ್ರಾಯ – ಪುರುಷನು ಅಸ್ತಿತ್ವದ ಚೈತನ್ಯದ ಪ್ರಕಾಶದಿಂದ ಭರಿತನಾಗಿರುತ್ತಾನೆ. ಪ್ರಕೃತಿಯು ವಾಸ್ತವವಾಗಿ ಜಡ, ಚೈತನ್ಯರಹಿತ, ತನ್ನೆಲ್ಲ ಕರ್ಮಗಳನ್ನು ಯಾಂತ್ರಿಕವಾಗಿಯೇ ಮಾಡುತ್ತದೆ, ಆ ಎಲ್ಲ ವ್ಯವಹಾರಗಳನ್ನು ಸಾಕ್ಷಿ ಪುರುಷನಲ್ಲಿ ಪ್ರತಿಬಿಂಬಿಸುತ್ತದೆ. ಪ್ರಕೃತಿಯು ತನ್ನ ತ್ರಿಗುಣಗಳ ವಿಷಮ ವ್ಯವಹಾರದ ಮೂಲಕ ಎಲ್ಲ ಕ್ರಿಯೆಗಳನ್ನು ಮಾಡುತ್ತದೆ. ಈ ಗುಣಗಳು ಪರಸ್ಪರ ತಾಕಲಾಡುತ್ತಿರುತ್ತವೆ, ಹೆಚ್ಚು–ಕಡಿಮೆ ಆಗುತ್ತಿರುತ್ತವೆ, ಬದಲಾವಣೆ ಹೊಂದುತ್ತಿರುತ್ತವೆ ಮತ್ತು ಪ್ರಕೃತಿಯು ತನ್ನ "ಅಹಂ" ಬುದ್ಧಿಯ ಮೂಲಕ ಪುರುಷನು ಈ ಎಲ್ಲ ಕರ್ಮಗಳ ಜೊತೆ ಗುರುತಿಸಿಕೊಳ್ಳುವಂತೆ ಮಾಡುತ್ತದೆ. ಹೀಗಾಗಿ ನಿಶ್ಚಲನಾದ ಆತ್ಮನಲ್ಲಿ ವಿಕಾರಿ ವ್ಯಕ್ತಿತ್ವದ ಆಭಾಸವಾಗುತ್ತದೆ. ಪುರುಷನ ವಿಶುದ್ಧ ಆತ್ಮ ಚೈತನ್ಯವನ್ನು ಪ್ರಕೃತಿಯ ಪ್ರಜ್ಞೆಯು ಆಚ್ಛಾದಿಸಿ ಮರೆ ಮಾಡುತ್ತದೆ; ಅಹಂ ಪ್ರಜ್ಞೆಯ ಅಂತರಂಗದಲ್ಲಿರುವ ಪುರುಷನನ್ನು ಮನಸ್ಸು ಮರೆತು ಬಿಡುತ್ತದೆ; ಇಂದ್ರೀಯಗಳು, ಅವುಗಳ ಕಾರ್ಯಗಳು, ಪ್ರಾಣಿಕದ ವಾಸನೆಗಳು, ಕಾಮನೆಗಳು ಮತ್ತು ಶಾರೀರಿಕ ಬಯಕೆಗಳು ಬುದ್ಧಿಯನ್ನು ಭ್ರಷ್ಟಗೊಳಿಸುತ್ತವೆ. ಮನಃ ಪ್ರಾಣ ಶರೀರಗಳ ಈ ಅಹಂ ಪ್ರಜ್ಞೆಯ ವ್ಯವಹಾರವನ್ನು ಎಲ್ಲಿಯವರೆಗೆ ಪುರುಷನು ಒಪ್ಪುವುನೋ ಅಲ್ಲಿಯವರೆಗೆ ಅವನು ಅಜ್ಞಾನದ ಹಾಗೂ ವಾಸನೆಗಳ ನಿಯಂತ್ರಣದಲ್ಲಿಯೇ ಇರುವುದು ಅನಿವಾರ್ಯವಾಗಿದೆ.

ಸಮಸ್ಯೆ ಇಷ್ಟೇನೆ ಎಂದು ಕೇಳಿದರೆ ಇಲ್ಲ; ಏಕೆಂದರೆ ಜೀವವು (ಜೀವಾತ್ಮ) ತನ್ನ ಸಮ್ಮತಿಯನ್ನು ಹಿಂತೆಗೆದುಕೊಂಡುಬಿಟ್ಟರೆ ಅಥವಾ ನಿರಾಕರಿಸಿದರೆ, ಎಲ್ಲ ರೀತಿಯ ಕರ್ಮಗಳನ್ನು, ತದ್ದನುಸಾರವಾಗಿ ಕರ್ಮ ಫಲವನ್ನು ನಿರಾಕರಿಸಿದಂತಾಗಿ, ತ್ರಿಗುಣಗಳ ಸಾಮ್ಯಾವಸ್ಥೆಯಲ್ಲಿ ನಿಶ್ಚಲವಾಗಿ ಇದ್ದುಬಿಡಬಹುದು ಎಂಬುದೇನೋ ಸರಿ ಮತ್ತು ಇದೊಂದು ರೀತಿಯ ಪರಿಹಾರ ಕೂಡ ಹೌದು. ಆದರೆ ಈ ಪರಿಹಾರ ಎಂಥದೆಂದರೆ, ರೋಗವನ್ನು ಗುಣ ಪಡಿಸಲು ಹೋಗಿ ರೋಗದ ಜೊತೆಗೆ ರೋಗಿಯನ್ನು ಕೂಡ ಕೊನೆಗಾಣಿಸಿದಂತಾಗುವುದು. ಇಂಥ ಉಪಚಾರವನ್ನು ಗೀತೆ ಖಂಡಿಸುತ್ತದೆ. ವಿಶೇಷವಾಗಿ ಅಜ್ಞಾನಿಗಳಿಗೆ ಇಂಥ ಪರಿಹಾರವನ್ನು ಬಲವಂತವಾಗಿ ಬೋಧಿಸಿದರೆ, ಅವರ ಮೇಲೆ ಬಲವಂತವಾಗಿ ಹೇರಿದರೆ, ಅಂಥವರು ತಾಮಸಿಕ ನಿಷ್ಕ್ರಿಯತೆಗೆ ಶರಣಾಗುವ ಸಂಭವ ಇದೆ. ಅವರ ಬುದ್ಧಿ ವಿಭಜಿತವಾಗಿ – ಬುದ್ಧಿ ಭೇದ – ಅನೃತ ಅಥವಾ ತಪ್ಪು ವಿರೋಧ ಮಾಡ ತಿಳಿಸುವುದು. ಅವರ ಸಕ್ರಿಯವಾದ ಪ್ರಕೃತಿ ಹಾಗೂ ಬುದ್ಧಿಗಳು ಪರಸ್ಪರ ವಿರೋಧಿ

ಬಣದಲ್ಲಿ ನಿಂತಂತೆ ನಿರಂತರ ಸಂಘರ್ಷದಲ್ಲಿ ತೊಡಗುವುದರಿಂದ ಒಂದು ರೀತಿಯ ಪರಿಹಾರವಿಲ್ಲದ ಸಮಸ್ಯೆ, ಗೊಂದಲ ಉಂಟಾಗುವುದು. ಇದನ್ನು ಮಿಥ್ಯಾಚಾರ ಎಂದು ಕರೆಯುವುರು, ಇದು ಕೇವಲ ತಾಮಸಿಕ ಜಡತೆಯಾಗಿದ್ದು ಕರ್ಮ ಮಾಡುವುದನ್ನು ಈ ಅವಸ್ಥೆ ವಿರೋಧಿಸುವುದು. ಇದರಿಂದ ನಿತ್ಯ ನೈಮಿತ್ತಿಕ ಕರ್ಮಗಳು ಕೂಡ ನಿಂತುಹೋಗುವ ಅಪಾಯ ಇರುವುದು. ಜೀವನದಲ್ಲಿ ಉತ್ಸಾಹ ಕ್ಷೀಣಿಸುವುದು, ಬತ್ತಿಹೋಗುವುದು; ಇದನ್ನು ಮುಕ್ತಿ ಎಂದು ತಿಳಿಯಬಾರದು. ಇದು ನಿಮ್ಮ ಪ್ರಕೃತಿಯ ತ್ರಿಗುಣಗಳಿಗೆ, ಅಜ್ಞಾನಕ್ಕೆ ವ್ಯಕ್ತಿಯನ್ನು ದೂಡುವುದೇ ಹೊರತು, ನಿಜವಾದ ಮೋಕ್ಷವನ್ನು ತಂದುಕೊಡುವುದಿಲ್ಲ ಅಥವಾ ಹೀಗೂ ಆಗಬಹುದು, ಇಂಥ ಉನ್ನತವಾದ ಬೋಧನೆಯನ್ನು ಅವರು ಅರ್ಥಮಾಡಿಕೊಳ್ಳದೇ ಹೋಗಬಹುದು, ಇದರಲ್ಲಿ ಸತ್ಯ ಕಾಣದೇ ಅವಾಸ್ತವಿಕ ಕುಂದು ಕೊರತೆಗಳನ್ನು ಎಣಿಸಬಹುದು, ತಮ್ಮ ವ್ಯವಹಾರಿಕ ಬುದ್ಧಿಗೆ, ಮನಸ್ಸಿಗೆ ಇದು ವಿರೋಧವೆನಿಸಿದ್ದರಿಂದ ತಳ್ಳಿಹಾಕಿ ಬಿಡಬಹುದು, ತಮ್ಮ ಇಚ್ಛಾ ಸ್ವಾತಂತ್ರ್ಯದ ಪರಿಕಲ್ಪನೆಯೇ ಸತ್ಯ ಎಂದು ಹಠ ಹಿಡಿಯಬಹುದು. ಅವರು ಮೊದಲಿನಂತೆ ಭ್ರಮೆಯ ದಾರಿಯಲ್ಲಿಯೇ ಮುಂದುವರೆಯಬಹುದು. ಆಶೆ, ಕಾಮನೆ, ವಾಂಛೆಗಳಿಗೆ ಬಲಿಬಿದ್ದು, ಅಹಂಕಾರವಶರಾಗಿ ಇನ್ನಷ್ಟು ಆಳವಾದ ಅಜ್ಞಾನದಲ್ಲಿ ಮುಳುಗಿ ಹೋಗಬಹುದು. ಇದರಿಂದ ಅವರು ಮುಕ್ತಿಯ ಸುಸಂಧಿಯನ್ನೇ ಕಳೆದುಕೊಂಡು ಬಿಡುವುರು.

ಇಂಥ ಉನ್ನತವಾದ ಸತ್ಯಗಳು ಉನ್ನತವಾದ ಹಾಗೂ ವಿಶಾಲವಾದ ಪ್ರಜ್ಞಾ ಪಾತಳಿಯಲ್ಲಿ ಮಾತ್ರ ಅನ್ವಯವಾಗುವುವೇ ಹೊರತು ನಿಮ್ಮ ಪಾತಳಿಯಲ್ಲಿ ಅವು ಅವ್ಯವಹಾರ್ಯವಾಗಿ ಬಿಡುವುವು. ನಿಮ್ಮ ಪಾತಳಿಯ ಮೇಲಿಂದ ನೋಡಿದರೆ ಇವು ಅರ್ಥಹೀನವೆನಿಸುವುವು, ಅಪಾರ್ಥಕ್ಕೆಡೆ ಮಾಡಿಕೊಡುವುವು. ಇದರಿಂದಾಗಿ ಕೇವಲ ತಪ್ಪು ಕಲ್ಪನೆಯಲ್ಲಿ ದುರುಪಯೋಗಕ್ಕೂ ಕಾರಣವಾಗುವುವು. ಒಳಿತು ಕೆಡುಕುಗಳ ವಿವೇಚನೆ, ಪ್ರಥಕ್ಕರಣವು ನಿಜವಾಗಿಯೂ ಒಳ್ಳೆಯದು ಮತ್ತು ಉನ್ನತ ಭೂಮಿಕೆಯ ಸತ್ಯವು, ಇದು ವ್ಯವಹಾರಿಕ ಸತ್ಯವಷ್ಟೇ ಅಲ್ಲ ಅಹಂ ಪ್ರಜ್ಞೆಯುಳ್ಳ ಮಾನವನ ಬದುಕಿನಲ್ಲಿ ಅತಿ ಮೌಲಿಕವಾದದ್ದು ಕೂಡ. ಮಾನವನ ಬದುಕು ಮಧ್ಯಂತರದ ಅವಸ್ಥೆಯು, ಪಶು ಭಾವ ಮತ್ತು ದಿವ್ಯ ಭಾವ ಇವುಗಳ ನಡುವಿನ ಸಂಕ್ರಮಣ ಅವಸ್ಥೆ ಅದು. ಈ ಪಾತಳಿಯಲ್ಲಿ ವ್ಯಾವಹಾರಿಕ ಸತ್ಯ ಮತ್ತು ಧರ್ಮಗಳೇ ಶ್ರೇಷ್ಠ. ಈ ಪಾತಳಿಯಿಂದ ಮೇಲಕ್ಕೆ ಏರಿದರೆ ನಾವು ಶುಭಾಶುಭಗಳ ಪರಿಕಲ್ಪನೆಯನ್ನೇ ಮೀರಿ ಹೋಗುತ್ತೇವೆ, ಅಲ್ಲಿ ಯಾವ ದ್ವಂದ್ವಗಳೂ ಇಲ್ಲ, ಈಶ್ವರನು ಪಾಪ ಪುಣ್ಯಗಳ

ಪರಿಕಲ್ಪನೆಯನ್ನು ಮೀರಿ ಎತ್ತರದಲ್ಲಿರವಂತೆ ಮಾನವನೂ ಸಹ ಅವುಗಳನ್ನು ದಾಟಿ ಮೇಲೆ ಹೋಗುತ್ತಾನೆ. ಸಾಮಾನ್ಯ ಮಾನವನು ಸಾಮಾನ್ಯ ಸ್ತರದಲ್ಲಿರುವುದರ ಜೊತೆಗೆ ಅವನ ಬುದ್ಧಿಯು ಅಪಕ್ವವಾಗಿರುತ್ತದೆ. ಆದ್ದರಿಂದ ತನ್ನ ತೆಕ್ಕೆಗೆ ಮೀರಿದ ಸತ್ಯಗಳನ್ನು ಹಿಡಿದುಕೊಳ್ಳಲು ಹೋಗಿ, ಅದು ಸಾಧ್ಯವಾಗದೇ ಹೋಗಿ, ಅವುಗಳನ್ನು ತನ್ನ ಸ್ವೇಚ್ಛಾಚಾರಕ್ಕೆ ತಕ್ಕಂತೆ ಬಳಸಲು ಯತ್ನಿಸುವ ಸಾಧ್ಯತೆ ಇರುವುದು. ಅದು ಒಳಿತು ಕೆಡಕುಗಳ ಭೇದವನ್ನೇ ಮರೆತು ಅಥವಾ ಕಡೆಗಣಿಸಿ ಕೊನೆಗೆ ವಿನಾಶದ ಕಂದರದಲ್ಲಿ ಬೀಳುವ ಸಾಧ್ಯತೆ ಇರುವುದು. "ಸರ್ವಜ್ಞಾನ ವಿಮೂಢಾನ್ ತಾನ್ ವಿಧಿನಷ್ಟಾನ ಚೇತಸಃ" (3.12) ಪ್ರಕೃತಿಯ ನಿಯತಿ ಅಥವಾ ನಿರ್ಧಾರಕ್ಕೆ ಕೂಡ ಇದೇ ಸತ್ಯ ಅನ್ವಯವಾಗುವುದು. ಪ್ರಕೃತಿಯ ನಿಯತಿಯನ್ನು ಕೂಡ ಬುದ್ಧಿಯು ಅಪಾರ್ಥ ಮಾಡಿಕೊಳ್ಳುವುದು ಮತ್ತು ದುರುಪಯೋಗಪಡಿಸಿಕೊಳ್ಳುವುದು. ಮಾನವನು ಪ್ರಕೃತಿಯ ನಿರ್ಮಿತಿಯೇ, "ಪ್ರಕೃತಿಯು ಅವನನ್ನು ಯಾವ ರೀತಿ ತಯಾರು ಮಾಡಿರುವುದೋ ಅವನು ಹಾಗೇಯೇ ಇರುತ್ತಾನೆ, ಅದು ಮಾಡಿಸಿದಂತೆ ಮಾಡುತ್ತಾನೆ" ಎಂದೂ ಹೇಳುವವರೂ ಸಹ ಇದೇ ವರ್ಗದಲ್ಲಿ ಬರುತ್ತಾರೆ. ಅವರು ಪ್ರಕೃತಿಯನ್ನು ದುರುಪಯೋಗ ಮಾಡಿಕೊಳ್ಳುತ್ತಾರೆ ಎಂದೇ ಹೇಳಬೇಕಾಗುವುದು. ಒಂದರ್ಥದಲ್ಲಿ ಇದೇನೋ ನಿಜ, ಪೂರ್ಣ ಸುಳ್ಳೇನಲ್ಲ; ಆದರೆ ಯಾವ ಅರ್ಥಾಪತ್ತಿಯ ಹಿನ್ನೆಲೆಯಲ್ಲಿ ಇದನ್ನು ಹೇಳುತ್ತಿರುವುರೋ ಅದು ಯಥಾರ್ಥವಲ್ಲ. ಅಹಂ ಪ್ರಜ್ಞೆಯ ಜೀವಿಯು ತನ್ನ ಕರ್ಮಗಳಿಗೆ ಬಾಧ್ಯಸ್ಥನಲ್ಲ. ಪ್ರಕೃತಿಯೇ ಕರ್ತೃ, ಅದೇ ಎಲ್ಲವನ್ನೂ ಮಾಡಿಸುತ್ತದೆ ಎಂದು ಮುಂತಾಗಿ ವ್ಯಾಖ್ಯಾನ ಮಾಡುವುದು ತಪ್ಪು, ಅದು ಮಿಥ್ಯಾಚಾರವೆನಿಸುವುದು. ಅಹಂ ಪ್ರಜ್ಞೆಯುಳ್ಳ ಪ್ರತಿಯೊಂದು ಜೀವಿಗೂ ಇಚ್ಛಾ ಸ್ವಾತಂತ್ರ್ಯ ಇದೆ, ತನ್ನ ಇಚ್ಛೆಯಂತೆ ಕರ್ಮ ಮಾಡುವ ಅವಕಾಶವೂ ಇದೆ. ಎಲ್ಲವನ್ನೂ ಪ್ರಕೃತಿಯೇ ಮಾಡಿಸುವುದು ಎಂಬುದು ನಿಜವೇ ಆದರೂ ಸಹ, ಜೀವಿಯು ಎಲ್ಲಿಯವರೆಗೆ ತನ್ನ ಸ್ವ–ಇಚ್ಛೆಯಂತೆ ಕರ್ಮ ಮಾಡುವುದೋ, ಅಲ್ಲಿಯವರೆಗೆ ಆ ಜೀವಿಯು ಕರ್ಮ, ಕರ್ಮ ಫಲದ ಸಂಕೋಲೆಯೊಳಗೇನೆ ಇರುವುದು, ಅದು ಕರ್ಮ ಫಲ ಭೋಗವನ್ನು ಅನುಭವಿಸಲೇಬೇಕಾಗುವುದು. ಬೇಕಾದರೆ ಇದನ್ನೊಂದು ಬಲೆ ಎಂದೂ ಹೇಳಬಹುದು ಇದು ಗೊಂದಲಮಯ, ಈ ಬಲೆಯು ಗೊಂದಲಗೆಡಿಸುವುದು ಎಂಬಂತೆ ತೋರಬಹುದು. ಆದರೆ ಈ ಬಲೆಯನ್ನು ಜೀವ ತಾನಾಗಿ ಹೆಣೆದುಕೊಂಡು ಅದರೊಳಗೆ ಬಂದಿಯಾಗಿದೆ ಎಂದು ಹೇಳಿದರೆ ತಪ್ಪಲ್ಲ.

(ಸಶೇಷ)

## ಶ್ರೀ ಅರವಿಂದರ
# ‘ಪ್ರೇಮ ಮತ್ತು ಮೃತ್ಯು’

**– ಅನು: ಶ್ರೀ ಕಿಶೋರಕುಮಾರ ಕಾಸಾರ (ಸಮಷ್ಟಿ), ಕಲಬುರ್ಗಿ**

## ದೃಷ್ಟಿ 5
### ಇಳಾರೋಹಣ

ಅವತಾರಿಯೋರ್ವ ವಿಭೂತಿತನದ ವಿಧಿಯನು ಪೂರೈಸಿ ಪೂರ್ಣಲೋಕದೆಡೆ
ಪಯಣಿಸುವೊಲು
ಪಾತಾಳಕಿಳಿದು ಪಾಪಾತ್ಮರ ಪೌಳಿಯಡಿಯಲ್ಲಿದ್ದ ಪತ್ನಿಯನು ಪಡೆದು
ಪೃಥ್ವಿಯೆಡೆಗೇರಿದ ರುರುವವನು,
ನಿಂತು ನೋಡಿರಲು ಹಸಿರ ಹಿನ್ನೆಲೆಯ ನೀಲಿಮದ ನೆತ್ತಿಯಲಿ ನಲಿಯುತ್ತಿದ್ದನವ
ನಗುಮೊಗದ ನೇಸಾರ.
ಗೋಮಂಡಲದಿಂ ಗಮಿಸಿ ಗೋಕುಲದೆಡೆಗೆಂಗುಂಭಿಸುತಿಹ ಗಂಗೆಯ
ಗುಂಫದೆಡೆ ಗುಂಪಾಗಿ ಬೆಳೆದ
ಹಸಿರು ಹುಲ್ಲಿನ ಹಾಸಿಗೆಯದು ಹೊನ್ನಯಮ ಹರ್ಮ್ಯದೊಲು ಹಾದಿಹೋಕರ
ಹಸಾದವಾಗುತಲಿ ಹಬ್ಬಿತ್ತು.
ಕೆಳಗಿಳಿವ ಕಾಲದಲಿ ಕಂಗಳವು ಕಂಡುಂಡ ಕಲ್ಪತರುಗಳೊಲು ತರಹೇವಾರಿಯಾಗಿ
ತೂಗುತಲೆದುತೋರಿದ್ದ,
ಶಮಿ, ಪ್ಲಕ್ಷ, ಶಿಂಶಪಾ, ಖದಿರ, ಶಾಲ್ಮಲಿ, ಆಲ, ತಾಲ, ತಮಾಲ, ವಟ, ನ್ಯಗ್ರೋದಾದಿ
ನೆರಳಿನ ನಿಲುವುಗಳೆಲ್ಲ
ನಿಂದು ನೋಡುತಿಹ ನಾಮಕರ ನೇತ್ರಗಳನ್ನೆಲ್ಲ ನಲಿವಿನ ನಿತ್ಯಾಗಾರವನ್ನಾಗಿಸಿ
ನಿಂತಿಹವು.
ಅಲ್ಲೊಂದೆಡೆಯ ಮರದ ಮೇಲೆರಿ ಮಾತನಾಡುವೊಲು ಕೂತಿದ್ದ ಕೋಕಿಲವೊಂದು
ಕರ್ಣಾಕರನ ಕಿರಣಕಾಂತಿಯನೇ ಕೊಂಡು ಕುಹುಗುಟ್ಟಿ ಕೂಗುತಿರುವಂತದು
ಕಂಡಿತ್ತು.
ಕಾಲಾಂತರದಿ ಕಾರ್ಮಣವದು ಕಂಡಿದ್ದ ಕರ್ಮಭೂಮಿಯ ಕಾವು
ಬೆನ್ನೆಲುಬಿನೊಳಗೆಲ್ಲ ಭರಿಸಿ ಬೆಚ್ಚಗಾಗಿಸಿತ್ತು.

ಪಾತಾಳದ ಪ್ರಾಂಗಣದಲಿ ಪಡೆದ ಶೈತ್ಯದ ಶ್ವಾಸವನೆಲ್ಲ ಎಳೆದು ಏಳಂಗುಲದೆಡೆಗೆ
ಎಸೆದಿತ್ತು.
ಮರ್ತ್ಯಕೆಂದೇ ಮಾಡಿಟ್ಟ ಮಾನವನ ಮೈ–ಮನಗಳವು ಮರಳಿ ಮೇಲೇರಿ
ಮಾನುಷದ ಮಾಹಾತ್ಮ್ಯವನಲ್ಲಿ ಮನಗಂಡಿತ್ತು.
ಕೆಸರಿನ ಕೊಚ್ಚೆಯೊಳಗೆ ಬೆಚ್ಚಗಾಗುತ ಬೆಳೆದು ಬಂಗಾರಮಯದೊಲಿಹ
ಬದುಕನು ಕಾಣುವ ಕಮಲದಂತಾಗುತಲಿ ಕಂಡಿತ್ತು.
ನಿಸರ್ಗದ ನೋಟವನೆಲ್ಲ ನಿಂತಲ್ಲೇ ನೀರ್ಕುಡಿದಿರುವಂತೆ ನೋಡಿ ನೆಚ್ಚಿದನು
ಮರುಕ್ಷಣವೇ ಬೆಚ್ಚಿದನು,
ತನ್ನಾಕೆಯ ತೋರುದೇಹಕಾಗಿ ತಡಕಾಡಿದನು. ತಾ ನಿಂತ ತಾಣದ ತವರಿನಲ್ಲೇ
ತನ್ನವಳು ತಂಗಿರುವುದಕಂಡನು.
ಮಾತೆಯ ಮಡಿಲ ಮೇಲೇರಿ ಮಲಗಿರುವ ಮುದ್ದುಮಗಳಂತಾಗಿ ಮಿನುಗಿದ್ದ
ಮಾನಿನಿ ಮೈಯ ಬಳಿಸಾರಿ ನಿಂದನು.
ಶೈತ್ಯದ ಸೆರೆಯಾಳಾಗಿ ಸೆಟೆದುರುಳಿದ್ದ ಸುವರ್ಣಾಂಗಿಯ ಸಿರಿದೇಹವದು
ಸಮಸಮವಾಗಿ ಸರಿದು ಸುಲಕ್ಷಣಯುತವಾಗಿ ಸುಳಿದಿತ್ತು.
ಹೆಪ್ಪುಗಟ್ಟಿದ ಕನ್ಯೆಯ ಕಾಂತಿಯದು ಕಣ್ರೆಪ್ಪೆಯು ಕದಲುವೊದರೊಳಗಾಗಿ
ಕೂಡಿತ್ತು. ಕಳೆಕಳೆಯಾಗುತ ಕೊಳೆಯನೆಲ್ಲ ಕಳೆದಿತ್ತು.
ನೆತ್ತಿಮೇಲೆ ನೆರೆದ ನೀಳಕೇಶಗಳವು ನೀರಾಳದಲಿ ನಲುಗಿದ್ದೂ, ನೀಲಿಮದಡಿಯಲಿ
ನವಿರಾಗಿ ನಲಿದಿತ್ತು.
ಗುಳಿಕೆನ್ನೆಯ ಗಲ್ಲದ ಮೇಲೆ ಮರೆತೋದ ಮೃದುತ್ವವದು ಮರಳಿ ಮೂಡಿತ್ತು,
ಮಂದಹಾಸವನಲ್ಲಿ ಮೆರೆಸಿತ್ತು.
ತಾವರೆಯೊಲಿಯ ತರುಣಿಯ ತುಟಿಯ ತೇಜವದು ತಾನೇ ತಾನಾಗಿ ತೆರೆದು
ತಂದಿತ್ತು, ತಾರಕೆಯೊಲದುತೋರಿತ್ತು.
ಮರಳಿ ಮೂಡಿದ ಮಹಾನಿಧಿಯಾದ ಮಾನಿನಿಯ ಮೈಯ ಮಲ್ಲಿಗೆಯ
ಮೋಡಿಯಲಿ ಮೂಢನಾದ ಮಾನವನವ
ಅವಳ ದೇಹದ ಸೌಂದರ್ಯವದವನ ಪ್ರಾಣ, ಮನ, ಆತ್ಮದೊಳಗೆಲ್ಲ ಆಲಾಪವೆಬ್ಬಿಸಿ
ಆನಂದಮಯದೆಡೆ ಆರೋಹಿಸುವರೆಗೆ
ನಿಂತು ನೋಡಿದನು. ಕಂಗಳಿಗೆ ಕೊಟ್ಟ ಕಾರ್ಯವದು ಕಾರ್ಮಣನನು ಕೂಗಿ
ಎಬ್ಬಿಸುವರೆಗೆ ಉಬ್ಬಸವಿಡಿದು ನಿಂತಿದ್ದನು.

ಮರುಕ್ಷಣವೇ ಮಲಗಿದವಳ ಮೈಯ ಮೇಲೆ ಮೂರುಗಾಲಿಗನಾಗುತಲವಳ
ಮೊಗದ ಕಣ್ರೆಪ್ಪೆಯ ಮೇಲೆ ಮುತ್ತಿಟ್ಟನವ.
ಮರಳಿದಳವಳು, ಮರಳಿ ಹೊರಳಿದಳವಳು. ಗದ್ಗದಿತವಿಹ
ಗಂಟಲಾಳದೊಳಗಿಂದೆದ್ದ ನಿಟ್ಟುಸಿರನಿಟ್ಟು ಎಚ್ಚರವಾದಳವಳು.
ನೀಳವಿಹವಳ ನೇತ್ರಗಳಿಂದವನ ನೋಡಿ ನಲಿದು ನಿತ್ರಾಣವಿಹ ತೋಳ್ಗಳನೆತ್ತಿ
ತಬ್ಬಿಕೊಂಡಿಹಳವನ
ಆನಂದದ ಆವಾಸದೊಳಗಿಂದೆದ್ದ ಅಳುವಿನ ಹೊನಲದು ಅವರ
ಹೊನ್ನಶಿರದಿಂದಿಳಿದು
ಸತಿಪತಿಗಳ ದೇಹವನೆಲ್ಲತೋಯ್ದು ತೊಪ್ಪೆಯಾಗಿಸಿತ್ತು. ತಿರುಗಿ ತಂಪಾಗಿಸಿತ್ತು.
ದುಃಖವದೆಲ್ಲ ಕರಗಿ ಕಣ್ಣೀರಿನ ಕಾರಣರೂಪದಿ ಕೆಳಗಿಳಿದು ಕಾಣೆಯಾಗಿತ್ತು.
ಮತ್ತೆಕಾಣದಾಗಿತ್ತು.
ಅಜ್ಞಾತವಿಹ ಅಂತರ್ವಾಣಿಯೊಂದು ಆಲಾಪಿಸಿತ್ತು, “ಸುಡುವ ಸೂರ್ಯನ
ಸೀಮೆಯೆಡೆಗೆ ಸುಳಿದ ಪ್ರೇಮವೇ!
ಹಸಿರು ಹಿನ್ನೆಲೆಯ ಹರ್ಮ್ಯದೆಡೆಗೆ ಹೊರಳಿದ ಪ್ರೇಮವೇ! ನಿನಗೆ ಮಂಗಲವಿರಲಿ.”
ಮನೆಬಿಟ್ಟು ಮಣ್ಣಿನೊಳಗಾಡಲೆಂದೋಡಿದ ಮಕ್ಕಳು ಮರಳಿ ಮಾತೆಯ
ಮಡಿಲೇರಿ ಮಲಗಿರಲು
ತನ್ನಕಂದರನು ತಬ್ಬಿ ತೂಗಿಸುವ ತಾಯಿಯೊಲು, ಮರ್ತ್ಯವದು ಮೃಣ್ಮಯರ
ಮೂರುದೆಸೆಯಿಂದ ಮುತ್ತಿ ಮೂಸಿತ್ತು, ಉಸಿರಿತ್ತಿತ್ತು.
ಕರುಣೆಯ ಕಾರ್ಯವಿದನು ಕಂಡು ಕೋಕಿಲವೊಂದು ಕೂಗುತ್ತಕೇಕೆ ಹಾಕಿತ್ತು.
ನಿಲಯನಿವಾಸಿಗಳ ನೆತ್ತಿಮೇಲೆ ಸುತ್ತುಹಾಕಿತ್ತು.

---

**ಟಿಪ್ಪಣಿ:**

## ದೃಷ್ಟಿ 4

### ನಿಶಾವತರಣ

ಈ ಹಿಂದಣದ ಮೂರು ದೃಷ್ಟಿಗಳು ಮರ್ತ್ಯನೆಲೆಯ ಲೌಕಿಕದ ಸೀಮೆಯಲ್ಲಿಯೇ ಜರುಗಿದರೆ, ನಿಶಾವತರಣವೆಂಬ ನಾಲ್ಕನೇ ದೃಷ್ಟಿಯು ನರಕದ–ಪಾತಾಳದ ಭಿತ್ತಿಯಲ್ಲಿ ಘಟಿಸಿದ್ದು, ಸಂಪೂರ್ಣವಾಗಿ ಅಲೌಕಿಕದ ದರ್ಶನವನ್ನು ಚಿತ್ರಿಸುತ್ತದೆ. ಭೂಮಿಯಿಂದ ಕೆಳಗಿಳಿವ ರಹಸ್ಯಮಯದ ಸುರಂಗ ಮಾರ್ಗಗಳು

ಮತ್ತು ಪಾತಾಳ ಗಂಗೆಯ ಸೂಕ್ಷ್ಮ ವರ್ಣನೆ ಹಾಗೂ ತಲದಿಂದ ಪಾತಾಲದವರೆಗೂ ವ್ಯಾಪಿಸಿದ ವಿಭಿನ್ನ ನೆಲೆಗಳ ಸ್ಥೂಲ ಚಿತ್ರಣವನ್ನೂ, ಆ ನೆಲೆಯ ಪ್ರಭೃತಿಗಳ ಸಾಂಕೇತಿಕ ಪ್ರತಿಮೆಗಳನ್ನೂ ನಮ್ಮೆದುರಿಗೆ ತೆರೆದಿಡುತ್ತದೆ. ಸಾವಿತ್ರಿ ಮಹಾಕಾವ್ಯಕ್ಕೂ ಮುನ್ನ ಶ್ರೀ ಅರವಿಂದರಿಗೆ ಲಭಿಸಿದ್ದ ಅಧೋ ಲೋಕಗಳ ದರ್ಶನದ ಸಾರವನಿಲ್ಲಿ ಭಟ್ಟಿ ಇಳಿಸಿದಂತಿದೆ. ಈ ಕರಾಳ ಲೋಕಗಳ ವರ್ಣನೆಯನ್ನು ಸಾವಿತ್ರಿ ಮಹಾಕಾವ್ಯದ Book II Canto 7 ಮತ್ತು 8 ರಲ್ಲಿ, ಹಾಗೂ Book IX, X ರಲ್ಲಿ ಸವಿಸ್ತಾರವಾಗಿ ವಿವರಿಸಲಾಗಿದೆ. ಇಲ್ಲಿ ಅದರ ಕೆಲವೊಂದು ಹೊಳಹುಗಳನ್ನು ಮಾತ್ರ ಗುರುತಿಸಬಹುದು. ಅಲ್ಲದೆ ಇಲ್ಲಿಯ ದರ್ಶನಗಳಲ್ಲಿ ಪಾಶ್ಚಾತ್ಯದ ಕಾಣ್ಕೆಯನ್ನು ಮೇಳವೀಕರಿಸಿ ಅದಕ್ಕೊಂದು Fantacyಯ ರೂಪವನ್ನು ಕೊಡಲಾಗಿದೆ.

ನಿಶಾವತರಣದ ದೃಷ್ಟಿಯು ಎಂಟು ಹಂತಗಳಲ್ಲಿ ಜರುಗುತ್ತದೆ. ಈ ಹಂತಗಳನ್ನು ಶ್ರೀ ಅರವಿಂದರು ಪ್ರತ್ಯೇಕವಾಗಿ ಹೆಸರಿಸದಿದ್ದರೂ, ಪ್ರಸ್ತುತದ ಅಧ್ಯಯನದ ದೃಷ್ಟಿಯಿಂದ ಈ ಪ್ರತ್ಯೇಕ ಹಂತಗಳಿಗೆ ನಾಮಕರಣಗೊಳಿಸುವುದು ಯುಕ್ತಕರವೆನಿಸುತ್ತದೆ. ಗಂಗಾ ದ್ವಾರದೆಡೆ, ಪಾತಾಳ ಗಂಗೆ, ಮತ್ಸ್ಯಕನ್ಯೆಯರ ಮಹಾಸಾಗರ, ಧೂಸರ ದೇಶದ ಬೂದು ಸಾಮ್ರಾಜ್ಯ – ಭ್ರಮಾಸಾಗರ, ಕರಿನೀರ ಕಾಲುವೆ, ಮಾಯಕದ ಮಂದ್ರ ಮೈದಾನ, ಮೃತ್ಯುಸದನ ಮತ್ತು ಪುನರ್–ಪಯಣವೆಂಬ ಎಂಟು ಹಂತಗಳಲ್ಲಿ ಕಾವ್ಯನಾಯಕ ರುರುವಿನ ಅವರೋಹಣವು ಜರುಗುತ್ತದೆ. ಹಾಗೂ ಆಯಾ ಹಂತಗಳಲ್ಲಿ ನೆಲೆಸಿದ ಪೃಭೃತಿಗಳ ದರ್ಶನವು ಲಭಿಸಿ ಅವನು ಕ್ರಮೇಣ ಮುಂದಿನ ಹಂತಗಳಿಗೆ ಅವರೋಹಿತ ಮಾರ್ಗದಲ್ಲಿ ಪ್ರವೇಶಿಸುತ್ತಾನೆ. ಈ ಹಂತಗಳಲ್ಲಿ ಮೊದಲ ಮತ್ತು ಕೊನೆಯ ಸ್ತರಗಳಲ್ಲಿ ಪ್ರಭೃತಿಗಳಿಲ್ಲ. ಅದರ ಹೊರತಾಗಿ ಉಳಿದ ಆರು ಸ್ತರಗಳಲ್ಲಿ ಪ್ರಭೃತಿಗಳ ವರ್ಣನೆಯಿದ್ದು, 2ನೇ ಸ್ತರದಿಂದ ಕ್ರಮವಾಗಿ ಶ್ವೇತನಾವಿಕ, ಮೂರು ಮೊಗವಾಡದ ಮಹಾದೇವತೆ, ಸರ್ಪ ಸಂಕುಲ, ಸುವರ್ಣಾಗ್ನಿಯ ಸೆರಗಿನ ಸೀರೆಯುಟ್ಟ ಸುವರ್ಣಾಂಗಿ, ಪುಣ್ಯಪುರುಷರು ಹಾಗೂ ಯಮದೇವತೆಯರೇ ಆ ಸ್ತರಗಳ ಪ್ರಭೃತಿಗಳಾಗಿದ್ದಾರೆ.

ನಿಶಾವತರಣದ ನಾಲ್ಕನೆಯ ದೃಷ್ಟಿಯು ಆರಂಭವಾಗುತ್ತಿದ್ದಂತೆ ರುರುವು ಇಲ್ಲಿಯವರೆಗೂ ವಾಸಿಸಿದ್ದ ತಾಣದ ಭೌಗೋಳಿಕ ಚಿತ್ರಣವನ್ನು ನೀಡಲಾಗುತ್ತದೆ. ಮೊದಲ ದೃಷ್ಟಿಯಿಂದಲೂ ಇಲ್ಲಿಯವರೆಗೂ ಆ ತಾಣದ ವಿವರಣೆಯು ನಮಗೆ ಗೋಚರವಾಗುವದಿಲ್ಲ. ಆದರೆ ಇಲ್ಲಿ ಆ ಪ್ರದೇಶದಲ್ಲಿ ಹರಿಯುವ ನದಿಗಳ ನಾಮ ಮಾತ್ರದಿಂದಲೇ ಅದು ಸಪ್ತ ಸೈಂಧವವನ್ನು ನಿರ್ದೇಶಿಸುತ್ತದೆ ಎಂಬುದು

ಖಾತ್ರಿಯಾಗುತ್ತದೆ. ಇನ್ನು ಆರ್ಯಾವರ್ತವೆಂಬ ನಾಮಾಂತ ಪ್ರಸಿದ್ಧವಿಹ ಸಪ್ತ ಸೈಂಧವದಿಂದ ನಡೆವ ರುರುವು ನೇರ ದಸ್ಯು ದೇಶಗಳೆಡೆ ಸಂಚರಿಸಿ, ಅಲ್ಲಿ ಹರಿಯುವ ಗಂಗೆಯ ತಟಾಕಕ್ಕೆ ಬರುತ್ತಾನೆ. ಮೊದಲೇ ಕಾಮನ ನಿರ್ದೇಶನ–ವಾಗಿದೆಯೋ ಎಂಬಂತೆ ಗಂಗೆಯ ತೆರೆಯ ಮೇಲೆ ಬಿಳಿ ಬಣ್ಣದ ತರಣಿಯೊಂದನು ತೇಲಿಸಿ ಶ್ವೇತನಾವಿಕನೋರ್ವ ರುರುವಿಗಾಗಿ ಕಾದು ನಿಂತಿರುತ್ತಾನೆ. ಈ ನಾವಿಕನ ವರ್ಣನೆಯು ಮೇಲ್ನೋಟಕ್ಕೆ ಗ್ರೀಕ್ ಮಿಥಕಗಳಲ್ಲಿ ಉಲ್ಲೇಖವಾದ ಸ್ಟಿಕ್ಸ್ ನದಿಯ ಮೇಲೆ ಕಾದಿರುವ ಕೇರನ್ ಹೆಸರಿನ ಮುದುಕ ನಾವಿಕ ಮತ್ತು ಬ್ಯಾಬಿಲೋನಿಯಾದ ಸುಮೇರಿಯನ್ ಜನಪದ ಮಹಾಕಾವ್ಯವಾದ ಗಿಲ್ಗಮೇಶ್‌ನಲ್ಲಿ ಉಲ್ಲೇಖವಾದ ಸೂರ್ಯನ ಮತ್ತು ಸ್ವರ್ಗ ಲೋಕಗಳ ಮಧ್ಯೆ ಹರಿಯುವ ಮೃತ್ಯು ಜಲದ ಮೇಲೆ ನಾವೆಯೊಂದರಲಿ ಹುಟ್ಟುಹಾಕಿ ನಿಂತ ಉರ್ಶಾನಬಿಯೆಂಬ ನಾವಿಕ ಹಾಗೂ ಡಾಂಟೆಯ ದರ್ಶನದಲ್ಲಿ ವರ್ಜಿಲ್ ಮತ್ತು ಡಾಂಟೆಯನ್ನು ಇನ್‌ಫೆರ್ನೊದೆಡೆಗೆ ಕರೆದೊಯ್ಯುವ ಫ್ಲೆಜಿಯಸ್‌ನೆಂಬ ನಾವಿಕನ ಸಂಕೇತದಂತೆ ಕಂಡುಬಂದರೂ ಭಾರತೀಯ ದರ್ಶನಗಳಲ್ಲಿ ಈ ರೀತಿಯ ನಾವಿಕನ ಉಲ್ಲೇಖವಿಲ್ಲ. ಹಾಗೂ ಶ್ರೀ ಅರವಿಂದರು ಸೂಚಿಸಿದ ಈ ರೀತಿಯ ನಾವಿಕನ ವರ್ಣನೆಯು ಇದೆ ಮೊದಲು. ಆದರೆ ಈ ನಾವಿಕನು ರುರುವಿನೊಂದಿಗೆ ಯಾವುದೇ ಮಾತನಾಡುವದಿಲ್ಲ. ಅವನ ಕಣ್ಣೋಟವೇ ರುರುವನ್ನು ದೋಣಿಗೇರುವಂತೆ ಪ್ರಚೋದಿಸುತ್ತದೆ. ಕೊನೆಗೆ ರುರುವನ್ನು ಪಾತಾಳ ಗಂಗೆಯಿಂದ ಕೆಳಗಿಳಿಸಿದ ನಂತರವೂ ಅಷ್ಟೇ. ಆತ ಒಂದು ವಿದಾಯವನ್ನೂ ಹೇಳದೆ ಕೇವಲ ಮೇಲ್ಮುಖವಾಗಿ ನೋಡುತ್ತ ತಾನಿನ್ನು ತೆರಳಬೇಕೆಂದೂ, ರುರುವನ್ನು ದೋಣಿಯಿಂದ ಕೆಳಗಿಳಿಯಬೇಕೆಂದೂ ಸಾಂಕೇತಿಕದ ನೋಟವನ್ನೀಯುತ್ತಾನೆ.

ಭಾರತೀಯ ದರ್ಶನಗಳಲ್ಲಿ ಪಾತಾಳ ಗಂಗೆಯ ಉಲ್ಲೇಖವು ಹಲವು ಕಡೆ ಬರುವುದಾದರೂ ಅದರ ಸೂಕ್ಷ್ಮ ವರ್ಣನೆಯನ್ನು ಎಲ್ಲೂ ನೀಡಲಾಗಿಲ್ಲ. ಆ ಪಾತಾಳ ಗಂಗೆಯ ಯಥಾವತ್ ರೂಪದ ಕಲ್ಪನೆಯನ್ನು ಶ್ರೀ ಅರವಿಂದರು ಇಲ್ಲಿ ನಮ್ಮೆದುರಿಗಿಡುತ್ತಾರೆ. ಈ ಪಾತಾಳ ಗಂಗೆಯು ಒಂದು ಸುರಂಗದ ರೀತಿಯಲ್ಲಿ ನಮ್ಮನ್ನು ಒಳಗೆಳೆದುಕೊಂಡಂತೆ ಭಾಸವಾಗುವ ಕಲ್ಪನೆಯನ್ನು ಇಲ್ಲಿ ಚಿತ್ರಿಸಲಾಗಿದೆ. ನರಕದ ನಾಲೆಗೆ ಇಳಿಯಲಿರುವ ಸುರಂಗದ ವರ್ಣನೆಯು ರೋಮನ್ ಸಾಹಿತ್ಯದಲ್ಲಿ ಕಂಡುಬರುತ್ತದೆ. ಅದರ ಪ್ರಕಾರ ಭೂಲೋಕದಿಂದ ಅಧೋ ಲೋಕಕ್ಕೆ ಸಂಚರಿಸಲು ಒಟ್ಟು ಮೂರು ಸುರಂಗ ಮಾರ್ಗಗಳಿದ್ದು, ಅದರಲ್ಲಿ ಮೊದಲನೆಯದ್ದು ದಕ್ಷಿಣ

ಗ್ರೀಸಿನ ಪೆಲೊಪೊನೀಸ್ ಪ್ರಾಂತ್ಯದ ಟೀನಾರಂ ಭೂಶಿರದ ಹತ್ತಿರವಿದೆ; ಎರಡನೆಯದ್ದು ಅಥೇನ್ಸ್‌ನ ಬಳಿಯ ಕೋಲೋನಸ್ ಎಂಬ ಹಳ್ಳಿಯ ಸಮೀಪದಲ್ಲಿದೆ; ಇನ್ನು ಕೊನೆಯ ಸುರಂಗ ಮಾರ್ಗವು ಅರ್ಗಾಸ್ ನಗರದ ಲೆರ್ನಾ ಹಳ್ಳಿಯ ಬದಿಯಲ್ಲಿ ಹರಿಯುವ ಅದೇ ಹೆಸರಿನ ನದಿಯಾಳದಲ್ಲಿ ಅಸ್ತಿತ್ವದಲ್ಲಿದ್ದು, ಇದರ ಮಾಹಿತಿಯನ್ನು ಪಡೆದ ಆಗಿನ ರೋಮನ್ ಚಕ್ರವರ್ತಿ ನೀರೊನು ಆ ನದಿಯ ನೀರನೆಲ್ಲ ಹೊರಹಾಕಿಸಿ ತಳವನ್ನು ಶೋಧಿಸಿ ಕೊನೆಗೆ ಅಲ್ಲಿ ಅಂತಹ ಯಾವ ಸುರಂಗ ಮಾರ್ಗವೂ ಇರದುದನ್ನು ಕಂಡು ತನ್ನ ಕಾರ್ಯವನ್ನು ಕೈಬಿಟ್ಟನೆಂಬ ಪ್ರತೀತಿಯಿದೆ. ಈ ರೀತಿಯಲ್ಲಿ ಶೋಧಿಸಬೇಕಾದರೆ ಗಂಗೆಯಡಿಯ ಪಾತಾಳ ಗಂಗೆಯ ಅಸ್ತಿತ್ವವನ್ನು ಸುಳ್ಳೆಂದು ತಳ್ಳಿಹಾಕಲು ಸಾಧ್ಯವಿಲ್ಲ. ಆದರೆ ಅದನ್ನು ಸ್ಥೂಲ ನೆಲೆಯಲ್ಲಿ ಅಲ್ಲದೆ ಸೂಕ್ಷ್ಮಮಟ್ಟದಲ್ಲಿ ಮಾತ್ರ ಅನುಭವಿಸಲು ಸಾಧ್ಯವೆಂಬುದನ್ನು ಭಾರತೀಯ ಸಿದ್ಧಾಂತಗಳು ತೋರಿಸಿಕೊಡುತ್ತವೆ.

ಪಾತಾಳ ಗಂಗೆಯಿಂದ ಕೆಳಗಿಳಿದ ರುರುವಿನೆದುರು ಅಲ್ಲಿಯವರೆಗೂ ಅವನ ಬರುವಿಕೆಗಾಗಿಯೇ ಕಾದು ಕುಳಿತುಕೊಂಡಿದೆಯೋ ಎಂಬಂತಿದ್ದ ಹಸಿರು ಬಣ್ಣದ ಸಾಗರವೊಂದು ಮೈದಳೆದು ನಿಲ್ಲುತ್ತದೆ. ಆರಂಭದಲ್ಲಿ ಗಾಢ ವರ್ಣದಲ್ಲಿ ಕಣ್ಣೇನೂ ಕಾಣದಂತಿದ್ದ ಸಾಗರದಲ್ಲಿ ಕ್ರಮೇಣ ಹಸಿರು ಹಿನ್ನೆಲೆಯು ಗೋಚರಿಸಿರಲು ಅವತರಣಿಕೆಯ ಮಾರ್ಗದಲಿ ಕೆಳಗಿಳಿಯುತ್ತಿದ್ದ ರುರುವಿನ ಸುತ್ತ ಸಹಸ್ರಾರು ಮತ್ಸ್ಯ ಕನ್ಯೆಯರು ಬೆತ್ತಲಾಗಿ ಸುತ್ತುತ್ತಿರುತ್ತಾರೆ. ಅವರ ದೇಹದ ಸ್ತನಾದಿಯಾದ ಪ್ರತಿಯೊಂದು ಅಂಗವನ್ನು ಕಾಣುತ್ತಾ ಕೆಳಗಿಳಿವ ರುರುವಿನ ವೇಗಕ್ಕೆ ಅವನ ಕೂದಲು ಮೇಲಕ್ಕೆದ್ದು ಮಣಿತಗುಣಿತವನಿಡುತ್ತವೆ. ಇದೇ ಮಾರ್ಗವಾಗಿ ಕೆಳಗಿಳಿಯುತ್ತಿದ್ದಂತೆ ಹಸಿರು ವರ್ಣದ ಸಾಗರದ ನೀರೆಲ್ಲವೂ ಹರಿದು ಕೆಳಗಿಳಿಯುತಿಹ ರಂಧ್ರವೊಂದರೆಡೆಗೆ ಬರುತ್ತಾನೆ. ಅಲ್ಲಿ ಅದೇ ರಂಧ್ರದಾಳದೊಳಗಿಂದ ಮೇಲೇರಿ ಬಂದ ಮೂರು ಮೊಗವಾಡದ ಮಹಾದೇವತೆಯ ದರ್ಶನವಾಗುತ್ತದೆ. ಆ ಸ್ತರದ ಪ್ರಭೃತಿಯಾದ ಆ ದೇವಿಯ ಸಂಕಲ್ಪಕ್ಕೆ ಒಳಗಾದ ರುರುವು ಆ ಭಾಗದಿಂದ ಭವಿಸಿ ಧೂಸರ ದೇಶದೊಳಗಣ ಬೂದು ಬಣ್ಣದ ಭ್ರಮಾ ಸಾಗರಕ್ಕೆ ಬಂದಿಳಿಯುತ್ತಾನೆ.

ಬೂದು ಬಣ್ಣದ ಭ್ರಮಾ ಸಾಗರಕ್ಕೆ ಬಂದಿಳಿದ ರುರುವಿಗೆ ಚೈತನ್ಯದ ಅಂಶವೇ ಇರದೆ ಪೂರ್ಣ ಪತನಗೊಂಡಂತಹ ಪ್ರಪಂಚವೊಂದರ ಅನುಭವವಾಗುತ್ತದೆ. ಅಲ್ಲಿ ಕಾಲ–ದೇಶ–ಆಯಾಮಗಳೆಂಬ ಯಾವುದೇ ದ್ರವ್ಯಗಳೂ ಅಸ್ತಿತ್ವದಲ್ಲಿರಲಿಲ್ಲ. ಬಹು

ಹೊತ್ತು ತಾನು ಇದೇ ಸ್ತರದೊಳಗೆ ಚರಿಸಿದ್ದೇ ಆದಲ್ಲಿ, ತಾನೂ ಭ್ರಮೆಯ ಸಂಧಿಗ್ಧಕ್ಕೆ ಒಳಗಾಗುವೆನೆಂಬ ಭಯದಿಂದ ರುರುವು ಕೆಳಗಿಳಿಯಲು ಪ್ರಯತ್ನಿಸುತ್ತಿದ್ದಂತೆ ಅವನನ್ನೇ ಕೈಬೀಸಿ ಕರೆಯುತ್ತದೆಯೋ ಎಂಬಂತಿದ್ದ ಬಂಡೆಗಲ್ಲುಗಳ ಸಂದಿಗೊಂದಿಯ ಬಿಲಗಳನ್ನು ಕಂಡು ಅವುಗಳ ಹತ್ತಿರ ಚಲಿಸುತ್ತಿದ್ದಂತೆ, ಆ ಪೊಟರೆಗಳಲ್ಲಿ ವಾಸವಾಗಿದ್ದ ದೈತ್ಯವಾದ ಸರ್ಪ ಸಂಕುಲಗಳ ಬಿಸಿಯುಸಿರು ಅವನನ್ನು ಹಿಂಸಿಸಲಾರಂಭಿಸುತ್ತದೆ. ಇದರಿಂದ ಭೀತನಾದ ರುರುವು ಆ ತಾಣವನ್ನೇ ತೊರೆದು ನೇರ ಕೆಳಗಿಳಿಯುತ್ತಾನೆ.

ಬೂದು ಬಣ್ಣದ ಭ್ರಮಾ ಸಾಗರದಿಂದ ಇಳಿದ ರುರುವು ಮಾರ್ಗದಲ್ಲಿ ಸುಳಿದ ಆರು ನರಕಗಳ ನೆಲೆಗಳನ್ನು ಹಿಂದಿಕ್ಕಿ ನೇರ ಕರಿನೀರ ಕಾಲುವೆಯ ಸ್ತರಕ್ಕೆ ಬರುತ್ತಾನೆ. ಈ ಸ್ತರವು ಮೇಲ್ನೋಟಕ್ಕೆ ಸಂಪೂರ್ಣವಾಗಿ ಡಾಂಟೆಯ ಪ್ರಭಾವಕ್ಕೆ ಒಳಗಾಗಿರುವದನ್ನು ಗಮನಿಸಬಹುದು. ಅವನ ಡಿವೈನ್ ಕಾಮಿಡಿಯ ಇನ್‌ಫೆರ್ನೋದ ನರಕ ದರ್ಶನದಲ್ಲಿ ಅವನು ಕಾಣುವ ಪಾಪಾತ್ಮರ ಜಲದೊಳಗೆ ಅಸಂಖ್ಯ ಪಾಪಿಗಳ ಆತ್ಮಗಳು ತೊಳಲುತ್ತಿರುವದನ್ನು ದರ್ಶಿಸಿರುವದಾಗಿ ಉಲ್ಲೇಖಿಸುತ್ತಾನೆ. ಅವರುಗಳಲ್ಲಿ ಪ್ರಾಕ್ತನ ಕಾಲದಲ್ಲೇ ಅಳಿದುಹೋದ ಮಹಾ ಸಾಮ್ರಾಜ್ಯಗಳ ಚಕ್ರವರ್ತಿಗಳಿದ್ದಾರೆ; ಡಾಂಟೆಯ ಕಾಲಕ್ಕೂ ಪೂರ್ವದಲ್ಲಿದ್ದ ಹಲವಾರು ದಾರ್ಶನಿಕರಿದ್ದಾರೆ; ಅವನದೇ ಕಾಲಘಟ್ಟದಲ್ಲಿ ವಿವಿಧ ದೇಶಗಳಲ್ಲಿ ಬದುಕಿದ್ದ ಪ್ರಮುಖರಿದ್ದಾರೆ. ಡಾಂಟೆಯ ಪ್ರಕಾರ ಅವನು ಕಂಡ ನರಕ ಜಲದ ದರ್ಶನವು ಕಾಲಾತೀತವಾಗಿದ್ದೂ, ಅವನು ಕಾಣುತ್ತಿರುವ ಪಾಪಿಗಳು ಭೂತ, ವರ್ತಮಾನ, ಭವಿಷ್ಯತ್ ಕಾಲಗಳಿಂದ ಬಂದು ಅಲ್ಲಿ ಮುಳುಗೇಳುತ್ತಿದ್ದಾರೆ ಎಂಬುದಾಗಿದೆ. ಆದರೆ ಇಲ್ಲೊಂದು ವಾದವಿದೆ. ಡಿವೈನ್ ಕಾಮಿಡಿಯು ಪ್ರಚಲಿತವಾದ ನಂತರ ಹಲವಾರು ವಿಮರ್ಶಕರು, 'ಡಾಂಟೆಯು ತನಗೆ ಇಷ್ಟವಿರದಿದ್ದ ಹಲವಾರು ಮಹಾಮಹಿಮರನ್ನೂ, ತನ್ನದೇ ಕಾಲದ ಪ್ರಮುಖರನ್ನೂ ತನ್ನ ದ್ವೇಷ ಸಾಧನೆಗೆಂದು ಅವರನ್ನು ನರಕ ಜಲದೊಳಗೆ ಮುಳುಗಿರುವಂತೆ ಚಿತ್ರಿಸಿದ್ದಾನೆ' ಎಂದು ವಾದಿಸುತ್ತಾರೆ. ಈ ವಾದವು ನಿಜವೋ? ಸುಳ್ಳೋ? ಒಟ್ಟಿನಲ್ಲಿ ಅವನದೇ ಕಾಲಘಟ್ಟದ ಹಲವರನ್ನು ತಾನು ಪಾಪಾತ್ಮರ ಜಲದೊಳಗೆ ಕಂಡಿರುವದಾಗಿ ಡಾಂಟೆಯು ಘೋಷಿಸುತ್ತಾನೆ. ಆದರೆ ಶ್ರೀ ಅರವಿಂದರು ಪ್ರೇಮ ಮತ್ತು ಮೃತ್ಯುವಿನಲ್ಲಿ ಚಿತ್ರಿಸಿದ ಕರಿನೀರ ಕಾಲುವೆಯೊಳಗೆ ಈ ಸಂದಿಗ್ಧಗಳನ್ನು ಸೃಷ್ಟಿಸುವದಿಲ್ಲ. ಇಲ್ಲಿ ರುರುವು ಕೇವಲ ಭೂತ–ವರ್ತಮಾನ–ಭವಿಷ್ಯತ್ ಕಾಲದ ಚತುರ್ವರ್ಣೀಯರಾದ ಹಲವಾರು ಸ್ತ್ರೀ–ಪುರುಷರ ಆತ್ಮಗಳನ್ನು ಕಂಡಿರುವದಾಗಿ ವರ್ಣಿಸುತ್ತಾರೆಯೇ ಹೊರತು ಅವರ ಹೆಸರುಗಳನ್ನು ಸೂಚಿಸುವದಿಲ್ಲ. ರುರುವು ಕರಿನೀರ

ಕಾಲುವೆಯಲ್ಲಿ ಚರಿಸುತ್ತಿದ್ದ ಆತ್ಮಗಳನ್ನು ನೋಡುತ್ತ ನಿಂತಿರುವಾಗಲೇ ಆ ಸ್ತರದ ಪ್ರಭೃತಿಯಾದ ಸುವರ್ಣಾಗ್ನಿಯ ಸೆರಗಿನ ಸೀರೆಯುಟ್ಟ ಸುವರ್ಣಾಂಗಿಯೋರ್ವಳ ದರ್ಶನವಾಗುತ್ತದೆ. ಶೂನ್ಯದೊಳಗಿಂದಲೇ ಅವಳು ಅಗ್ನಿಶಿರ–ಅಗ್ನಿಹಸ್ತಗಳೊಡನೆ ಉದಿಸಿ ಪ್ರತ್ಯಕ್ಷಳಾಗುತ್ತಾಳೆ. ನೋಡ ನೋಡುತ್ತಿದ್ದಂತೆ ಕರಿನೀರ ಕಾಲುವೆಯ ಆಚೆ ಸೇತುವೆಯೊಂದು ನಿರ್ಮಾಣವಾಗುತ್ತದೆ. ಆ ಸೇತುವೆಯ ಮೇಲೆ ಸುಳಿವ ಸುವರ್ಣಾಂಗಿಯು ತನ್ನ ಅಗ್ನಿಹಸ್ತವನೆತ್ತಿ ರುರುವಿನ ಶಿರವನ್ನು ಸ್ಪರ್ಶಿಸುತ್ತಾಳೆ. ಆ ಕ್ಷಣಕ್ಕೆ ಅದ್ಭುತವೊಂದು ಸಂಭವಿಸಿದಂತಾಗಿ ಕರಿನೀರ ಕಾಲುವೆಯು ಅದೃಶ್ಯವಾಗಿ ಅಲ್ಲಿ ಬೇರೊಂದು ಲೋಕವೇ ಕಣ್ದೆರೆದು ನಿಲ್ಲುತ್ತದೆ. ಸೇತುವೆಯಾಲೀ, ಸುವರ್ಣಾಂಗಿಯಾಗಲೀ ಅಲ್ಲೆಲ್ಲೂ ಕಾಣುವದಿಲ್ಲ.

ಸೇತುವೆಯನ್ನು ದಾಟಿದ ರುರುವಿನೆದುರು ಮಾಯಕದ ಮಂದ್ರ ಮೈದಾನವು ಹರಡಿಕೊಂಡಿರುತ್ತದೆ. ಅವನ ದೃಷ್ಟಿಯು ಎಲ್ಲಿಯವರೆಗೆ ಚಾಚಿರುತ್ತದೋ ಅಲ್ಲಿಯವರೆಗೂ ಅದು ಹಬ್ಬಿಕೊಂಡಿದ್ದು, ಅಲ್ಲಿ ಯಾವುದೇ ಆತ್ಮಗಳ ಸುಳಿವು ಗೋಚರಿಸುವದಿಲ್ಲ. ಬರಿ ಪುಣ್ಯಯುತ ಆತ್ಮಗಳಿಂದ ತುಂಬಿದ್ದ ಆ ಸ್ತರದಲ್ಲಿ ಕಾರ್ಮಣ ಶರೀರಿಗಳಿಗೆ ಅವುಗಳ ದರ್ಶನವಾಗುವದಿಲ್ಲ. ಆದರೆ ರುರುವು ಸಾಮಾನ್ಯ ಪುರುಷನಾಗಿರದೇ, ಆರ್ಷ ಕುಲೋತ್ತಮರ ಪರಂಪರೆಯಿಂದ ಬಂದ ಋಷಿ ಕುಮಾರನಾಗಿದ್ದು, ಕಾಮವನ್ನು ಜಯಿಸಿ ಪ್ರೇಮವನ್ನು ಪಡೆಯಲೋಸುಗ ಸ್ವತಃ ಕಾಮದೇವನಿಂದ ಪ್ರೇರಿತವಾದ ಪುಷ್ಪವೊಂದನ್ನು ಹಿಡಿದು ಬಂದಿರುತ್ತಾನೆ. ಹಾಗಾಗಿ ಅವನಿಗೆ ಅಲ್ಲಿ ಅದೃಶ್ಯಯುತ ಆತ್ಮಗಳ ಸಾಮೀಪ್ಯದ ಅನುಭವವಾಗುತ್ತದೆ. ಇದನ್ನರಿತ ಅಲ್ಲಿಯ ಆತ್ಮಗಳು ಅವನನ್ನು ತಾಕಿ ಮುಂದಡಿಯಿಡುತ್ತವೆ, ಅವನ ಮೈಮುಟ್ಟಿ ಮುಂದೋಡುತ್ತವೆ, ಅವನೆದುರು ಸುಳಿದು ಸುಳಿಗಾಳಿಯನೆಬ್ಬಿಸುತ್ತವೆ, ಇನ್ನು ಕೆಲವು ಎಳೆಯ ಆತ್ಮಗಳು ಅವನನ್ನು ತಬ್ಬಿ ಕುಚೋದ್ಯವಾಡುತ್ತವೆ. ಆದರೆ ಆ ಆತ್ಮಗಳ ಕಾರ್ಯದಿಂದ ರುರುವಿನಲ್ಲಿ ಯಾವುದೇ ತೆರನಾದ ಕೋಪ–ತಾಪಗಳು ಸುಳಿಯುವದಿಲ್ಲ. ಬದಲಾಗಿ ಬದುಕಿದ್ದಾಗ ಪುಣ್ಯಜೀವಿಗಳಾಗಿದ್ದೂ ಮರಣಾನಂತರ ಮುಂದಿನ ಘಟ್ಟಕ್ಕೆ ಏರದೇ ಅಲ್ಲಿಯೇ ಸಿಲುಕಿ ಹಾಕಿಕೊಂಡಿರುವ ಅವುಗಳ ಪರಿಸ್ಥಿತಿಗೆ ಮರುಗುತ್ತಾನೆ. ಅವನ ಈ ಭಾವನೆಯಿಂದ ಅವನೊಳಗೆ ದರ್ಶನದ ಸಂಸ್ಫೂರ್ತಿಯು ಜಾಗೃತವಾಗಿ ಅವನಿಗೆ ಅಲ್ಲಿಯ ಆತ್ಮಗಳನ್ನು ನೋಡುವ ಶಕ್ತಿಯು ದೊರೆಯುತ್ತದೆ. ಅವನು ನೋಡುತ್ತಾನೆ, ಅಲ್ಲಿ ವಯಸ್ಕರಾದ ಪುರುಷ–ಸ್ತ್ರೀಯರುಗಳಿದ್ದಾರೆ, ತರುಣ–ತರುಣಿಯರಿದ್ದಾರೆ, ಎಳವೆಯಲ್ಲಿಯೇ ಮಡಿದ ಮಕ್ಕಳಿದ್ದಾರೆ,

ಹಸುಕಂದಮ್ಮಗಳಿದ್ದಾರೆ, ಪ್ರಸೂತಿ ತನವನ್ನೂ ಪೂರೈಸದೆ ಪಾತಾಳಕಿಳಿದ ಬಾಣಂತಿಯರಿದ್ದಾರೆ; ಅವರೆಲ್ಲರನ್ನು ಕಂಡು ರುರುವು ಭಾವುಕನಾಗುತ್ತಾನೆ. ಹೊತ್ತುಗೊತ್ತಿಲ್ಲದ ಸಮಯದಲ್ಲಿ ಧುತ್ತೆಂದು ಎರಗಿ ಪ್ರಾಣ ವಾಯುವನು ಹೊತ್ತೊಯ್ಯುವ ಮೃತ್ಯುವಿನ ಮಹಾಘಾತುಕ ಮನಸ್ಥಿತಿಗೆ ಶಪಿಸುತ್ತಾನೆ. ಅಲ್ಲಿರುವ ಅಸಂಖ್ಯ ಆತ್ಮಗಳು, ಯಾವಾಗ ಕಾರ್ಮಣನೋರ್ವ ತಮ್ಮನ್ನು ಕಂಡು ತಮ್ಮ ಕಷ್ಟಕ್ಕೆ ಸ್ಪಂದಿಸುತ್ತಿದ್ದಾನೆ ಎಂಬುದನ್ನು ಅರಿತವೋ, ಆ ಕೂಡಲೇ ಅವೆಲ್ಲವುಗಳು ರುರುವಿನೆದುರು ತಮ್ಮ ಕಾರ್ಪಣ್ಯಗಳನ್ನು ತೋಡಿಕೊಳ್ಳಲಾರಂಭಿಸಿದವು. ರುರುವಿಗೆನೋ ಅಲ್ಲಿರುವ ಎಲ್ಲಾ ಆತ್ಮಗಳನ್ನು ಅರಿತು ಅವುಗಳನ್ನು ಉದ್ಧರಿಸುವ ಮನವಿದ್ದರೂ, ತನ್ನ ಮುಂದಿರುವ ಮಹಾಕಾರ್ಯವನ್ನು ಮನನಗೈಯುತ್ತ ಮನವಿರದೆ ಆ ತಾಣದಿಂದ ಕಾಲ್ದೆಗೆದು ಕೆಳಗಿಳಿಯುತ್ತಾನೆ.

ಮಾಯಕದ ಮಂದ್ರ ಮೈದಾನದಿಂದ ನಡೆವ ರುರುವು ನೇರವಾಗಿ ಮೃತ್ಯು ಸದನದೆಡೆ ಇಳಿಯುತ್ತಾನೆ. ಸಹಸ್ರಾರು ಸ್ತಂಭಗಳಿಂದ ನಿರ್ಮಿತವಾದ ಸಭಾಂಗಣವೊಂದರಲ್ಲಿ ಅವನ ಅವತರಣಿಕೆಯಾಗುತ್ತದೆ. ಆ ಇಡೀ ಸಭಾಂಗಣವನ್ನು ಗುಮ್ಮಟವೊಂದು ಮೇಲ್ಹಾವಣಿಯಂತೆ ಮುಚ್ಚಿರುತ್ತದೆ. ಸ್ತಂಭಗಳ ಹೊರತಾಗಿ ಅಲ್ಲಿ ಬೇರೆ ಯಾವುದೇ ಪದಾರ್ಥಗಳು ಅಸ್ತಿತ್ವದಲ್ಲಿರುವದಿಲ್ಲ. ಆಗ ನೋಡನೋಡುತ್ತಿರುವಂತೆ ಶೂನ್ಯದೊಳಗಿಂದ ಮಹಾದ್ವಾರವೊಂದು ಹುಟ್ಟಿ, ರುರುವಿನ ಎದುರಿನಲ್ಲಿ ಸ್ಥಾಯಿಯಾಗುತ್ತದೆ. ಆ ದ್ವಾರದ ಭಿತ್ತಿಯ ಮೇಲೆ ಚಿತ್ರವಿಚಿತ್ರವಾದ ಆಯುಧಗಳನ್ನು ಹಿಡಿದು, ದಂಡಧಾರಿ, ಕೋದಂಡಧಾರಿಯಾಗಿ ನಿಂತ ಯಮಕಿಂಕರರು ಮೃತ್ಯು ಸದನಕ್ಕೆ ಅನಧಿಕೃತ ಪ್ರವೇಶವನ್ನು ಪಡೆಯಲಿರುವ ಕಾರ್ಮಣನನ್ನು ಕೊಲ್ಲಲೆಂದು ಮುನ್ನುಗ್ಗುತ್ತಿರುವಾಗಲೇ, ಅವನ ಕೈಯೊಳಗಿದ್ದ ಕಾಮ ಪುಷ್ಪವನ್ನು ಕಾಣುತ್ತಲೇ, ಮೃತ್ಯು ಲೋಕಕೆ ರುರುವಿನ ಆಗಮನವು ದೈವನಿಯತಿ ಎಂಬುದನ್ನರಿತು ಅವನ ಮಾರ್ಗದಿಂದ ಹಿಂಜರಿಯುತ್ತವೆ. ಆ ದ್ವಾರದ ಮುಖಾಂತರ ರುರುವು ಸದನವನ್ನು ಪ್ರವೇಶಿಸುತ್ತಾನೆ. ಹಾಗೂ ಅದುವೇ ತಾನು ತಲುಪಬೇಕಿರುವ ಮೃತ್ಯುವಿನ ತಾಣವೆಂಬ ಅರಿವು ಉಂಟಾಗುತ್ತದೆ. ಅಲ್ಲಿ ಅವನ ನೋಟದ ನೇರಾನೇರದಲ್ಲಿ ಸಾಲು ಮೆಟ್ಟಿಲುಗಳು ಹಾಸಿದ್ದು ಆ ಮೆಟ್ಟಿಲುಗಳ ಮೇಲಿನ ಗದ್ದುಗೆಯಲ್ಲಿ ಮೃತ್ಯುವಿನ ಪೀಠವು ಶೋಭಿಸುತ್ತಿರುತ್ತದೆ. ಮೃತ್ಯುಪೀಠದ ಮೆಟ್ಟಿಲುಗಳ ಮೇಲೆ ಸರ್ಪ ಸಂಕುಲಕ್ಕೆ ಮೂಲಕರ್ತೃಗಳಾದ ಜರತ್ಕಾರು, ತಕ್ಷಕ, ವಾಸುಕಿ, ಕರ್ಕೋಟಕಾದಿಯಾದ ಅಹಿಪ್ರಮುಖರೆಲ್ಲರೂ ನಾಗ

ಪ್ರತಿಮಾ ರೂಪದಲ್ಲಿ ಹೊಟ್ಟೆ ಹೊಸೆಯುತ್ತ, ನಾಲಗೆಯಲ್ಲಿ ವಿಷ ಜ್ವಾಲೆಯನ್ನೇ ಉಗುಳುತ್ತ ಮಲಗಿರುತ್ತಾರೆ. ಪ್ರಿಯಂವದೆಯ ಮರಣಕ್ಕೆ ಕಾರಣವಾದ ನಾಗ ಕುಲಕ್ಕೆ ಆದಿಪುರುಷರಾದ ಅವರನ್ನು ಕಾಣುತ್ತಿದ್ದಂತೆ ಮರ್ತ್ಯದಲಿ ನಾಗರ ಭೌತಿಕ ರೂಪಗಳು ಮಾತ್ರ ಅಸ್ತಿತ್ವದಲ್ಲಿದ್ದು ಆ ಅಹಿಕುಲದ ಸೂಕ್ಷ್ಮ ಸಂವಹನೆಯು ಇಲ್ಲಿಯ ಮೃತ್ಯು ಸದನದಿಂದಲೇ ಉತ್ಸರ್ಜಿತವಾಗುವದನ್ನು ಮನಗಾಣುತ್ತಾನೆ. ಮತ್ತು ಅಲ್ಲಿನ ವಿಷ ಜಂತುಗಳಿಗೆ ಇಲ್ಲಿಂದಲೇ ನಿರ್ದೇಶನವಾಗುವ ಸತ್ಯದ ಅರಿವಾಗುತ್ತದೆ.

ಇಂತಹ ಉರಗ ನಾಯಕರುಗಳನ್ನು ಕಂಡ ನಂತರ ಗದ್ದುಗೆಯಲಿ ಮಂಡಿಸಿದ ಮಹಾಮಹಿಮನೆಡೆ ದೃಷ್ಟಿ ಹರಿಸಿರಲು, ಅಲ್ಲಿ ಮಂಡಿಸಿದ ಮೃತ್ಯುದೇವನ ಮುಖ ದರ್ಶನವಾಗುತ್ತದೆ. ನಾಗ ಕುಲದ ನಾಯಕನಾದ ಮಹಾಪದ್ಮನೆಂಬ ಉರಗೋತ್ತಮನು ಆ ಮೃತ್ಯು ದೇವನ ಕಿರೀಟದಲಿ ಕುಳಿತು ಮೈಮಣಿಸುತ್ತಿರುತ್ತಾನೆ. ಯಮ, ಧರ್ಮದೇವತೆ, ಕೃತಾಂತ, ನಿಯಂತೃ, ಹೇಡೀಸ್ ಎಂಬಿತ್ಯಾದಿಯಾದ ನಾಮಗಳಿಂದ ಪ್ರಚಲಿತವಾದ ಮೃತ್ಯು ದೇವನನು ಕಾಣುತ್ತಿದ್ದಂತೆ ಕಾರ್ಮಣನು ಕೈಮುಗಿದು ಅವನಿಗೆ ಭಕ್ತಿಯನ್ನು ಸಮರ್ಪಿಸುತ್ತಾನೆ. ಆ ಮೃತ್ಯು ದೇವನ ಅಕ್ಕಪಕ್ಕದಲ್ಲಿ ನಾಲ್ಕು ಕಣ್ಣುಗಳನ್ನು ಹೊಂದಿದ ಎರಡು ಬೇಂಟೆ ನಾಯಿಗಳು ಕುಳಿತು ಗುರುಗುಟ್ಟುತ್ತಿರುತ್ತವೆ. ಈ ನಾಯಿಗಳ ಕಲ್ಪನೆಯು ಗ್ರೀಕ್ ದರ್ಶನಗಳಲ್ಲಿ ಕಾಣಬರುವ ಮೃತ್ಯಲೋಕದ 'ಸರ್ಬೆರಸ್' ನಾಯಿಯ ಸಂಕೇತದಂತೆ ತೋರಿಬಂದರೂ ಅದಕ್ಕೆ ಮೂಲ ಪ್ರತಿಮೆಯು ಭಾರತೀಯ ದರ್ಶನದ ಕಾಲಭೈರವನ ರೂಪಕವೇ ಆಗಿದೆ. ಇಂತಹ ಮೃತ್ಯು ಸದನದಲ್ಲಿ ನಿಂತ ರುರುವಿನೆದುರು ನಿರಂತರದ ಕಾಲದ ಚಕ್ರವೊಂದು ತಿರುಗುತ್ತಿರುತ್ತದೆ. ಮೃಣ್ಮಯದ ಪ್ರತಿಯೋರ್ವ ಆತ್ಮದ ಆಯುರ್ಮಾನವನ್ನು ಅಳೆಯುವ ಕಾಲಮಾಪಕದಂತದು ಬಿಡುವಿಲ್ಲದೆ ತಿರುಗುತ್ತಿರುತ್ತದೆ.

ಶರೀರವಳಿದು ಹಗುರವಿಹ ಆತ್ಮಗಳಿಗೆ ಮಾತ್ರ ಪ್ರವೇಶವಿರುವ ಅಧೋ ಲೋಕದಲ್ಲಿ ಸ್ಥೂಲವನ್ನು ಹೊತ್ತು ನಿಂತಿರುವ ಕಾರ್ಮಣನ ಅಸ್ತಿತ್ವಕ್ಕೆ ಮಣಿದು ಮೃತ್ಯು ಲೋಕದ ದ್ರವ್ಯಗಳೆಲ್ಲವೂ ಜ್ವಾಲೆಯೊಳಗೆ ಸುಟ್ಟುರಿಯುತ್ತಿರುವಂತೆ ಹಿಂಸೆ–ಗೊಳಗಾಗುತ್ತವೆ. ವಿಷದ ಜ್ವಾಲೆಯಿಂದ ಮರ್ತ್ಯವನ್ನು ಭಯಭೀತಗೊಳಿಸಿರುವ ಸರ್ಪ ಸಂಕುಲವು ರುರುವಿನ ಸಾಮಿಪ್ಯಕ್ಕೆ ಒಳಗಾಗಿ ಸರ್ಪಯಾಗದೊಳಗೆ ಸಿಲುಕಿ ಸಾಯುತ್ತಿರುವಂತೆ ಹೊಟ್ಟೆಹೊಸೆಯುತ್ತ ಚೀತ್ಕಾರವನೆಬ್ಬಿಸುತ್ತವೆ. ನಿರಾಳದಾಳದಲಿ ಶೈತ್ಯದಲ್ಲಿರುವ ತನ್ನ ಅಧಿಲೋಕವು ಇಂತು ಬೆಂಕಿಯೊಳಗೆ ಸುಟ್ಟುರಿಯುತ್ತಿರುವಂತೆ

ನರಳಾಡುತ್ತಿರುವದನ್ನು ಅರಿತ ನಿಯಂತೃವು ರುರುವಿನ ಆಗಮನವನ್ನು ಪ್ರಶ್ನಿಸುತ್ತಾನೆ. ಇಲ್ಲಿಂದ ಆರಂಭವಾಗುವ ಮೃತ್ಯು ಮತ್ತು ರುರುವಿನ ವಾಗ್ವಾದವು ಮೃತ್ಯುವಿನ ಸೊಲಿನವರೆಗೂ ನಡೆಯುತ್ತದೆ. ಹೀಗೆ ಮೃತ್ಯು ಮತ್ತು ಮಾನವನ ಸಂಭಾಷಣೆಯ ರೂಪವನ್ನು ಶ್ರೀ ಅರವಿಂದರ ಸಾವಿತ್ರಿ ಮಹಾಕಾವ್ಯದ Book IX, Xರಲ್ಲಿ ಕಾಣಬಹುದಾದರೂ, ಅಲ್ಲಿಯ ಸಂಭಾಷಣೆಗೂ ಇಲ್ಲಿಯ ಸಂಭಾಷಣೆಗೂ ಅಪಾರವಾದ ವ್ಯತ್ಯಾಸವಿದೆ. ಅಲ್ಲಿ ಇಡೀ ಮಾನವ ಸಂಕುಲದ ಪ್ರತಿನಿಧಿಯಾದ ಸಾವಿತ್ರಿಯು ಕಳೆದೋದ ಸತ್ಯವನ್ನು ಪುನಃ ಮೃಣ್ಮಯಕ್ಕೆ ಮರಳಿಸುವಂತೆ ಕೋರಿ ತನ್ನ ವಾದವನ್ನು ಮಂಡಿಸುತ್ತಾಳೆ. ಆದರೆ ಅವಳ ವಾದದಲ್ಲಿ ಅವಳೊಬ್ಬಳ ಸಂಕಟವಷ್ಟೇ ಅಲ್ಲದೇ ಮನುಕುಲಕದ ಆದಿಯಿಂದಲೂ ಮಾನವ ಜನಾಂಗವು ದಿವ್ಯತೆಯೆಡೆಗೆ ಮೊರೆದ ಪ್ರಾರ್ಥನೆಯ ಒಟ್ಟು ಮೊತ್ತವೇ ಆಗಿರುತ್ತದೆ. ಆದರೆ ಇಲ್ಲಿ ರುರುವಿನ ವಾದವು ಸಾವಿನ ಸತ್ಯವನ್ನು ಹೊರಗೆಳೆಯುವ ಸಾಧನೆಯ ಸ್ವರೂಪವಾಗಿದೆ. ಅದೇ ಸಮಯಕ್ಕೆ ಅಜ್ಞಾತವಾದ ಅಂತರ್ವಾಣಿಯೊಂದು ಮೊಳಗಿ ರುರು ಮತ್ತು ಪ್ರಿಯಂವದೆಯರ ಜನ್ಮ ರಹಸ್ಯವನ್ನು ತಿಳಿಸುತ್ತದೆ. ಅದರ ಪ್ರಕಾರ ರುರುವು ಕೇವಲ ಮರ್ತ್ಯನಾಗಿರದೆ ಅವನ ಜಾತಕದೊಳಗೆ ದಿವ್ಯತೆಯ–ದೈತ್ಯತೆಯ ಸಂಯುಕ್ತತೆಯಿರುವದಾಗಿ ಘೋಷಿಸುತ್ತದೆ. ಶ್ರೀಮಾತೆಯವರು ಹೇಳುವಂತೆ ಮರ್ತ್ಯಕ್ಕೆ ದಿವ್ಯತೆಯ ಅವತರಣಿಕೆ ಎಷ್ಟು ಮುಖ್ಯವೋ, ದೈತ್ಯತೆಯ ಆರೋಹಣವೂ ಅಷ್ಟೇ ಮುಖ್ಯ. ಏಕೆಂದರೆ ಮರ್ತ್ಯದಲ್ಲಿ ಛಲ–ಸಾಹಸ–ಸಾಧನೆಗಳ ಮೂಲವು ಅಧೋ ಲೋಕಗಳಿಂದಲೇ ಬಂದಿರುವದಾಗಿದೆ. ಭೂಮಿಯಿಂದ ಮೇಲೆ ಹೋದಂತೆ ಆಧ್ಯಾತ್ಮಿಕತೆ(Spiritualism)ಯು ಹೆಚ್ಚಿದಂತೆ; ಮರ್ತ್ಯದಿಂದ ಕೆಳಗಿಳಿಯುತ್ತ ಹೋದಂತೆ ಭೌತಿಕತೆ(Materialism)ಯು ಹೆಚ್ಚುತ್ತಾ ಹೋಗುತ್ತದೆ. ಹಾಗೂ ಅವೆರಡೂ ಏಕಕಾಲಕ್ಕೆ ಪೃಥ್ವಿಯನ್ನು ಪ್ರವೇಶಿಸಲೆಂದು ಪ್ರಯತ್ನಿಸುತ್ತಿರುತ್ತವೆ. ಆದರೆ ಭೂಮಿಯ ಮೇಲೆ ಅವುಗಳ ಆಗಮನಕ್ಕೆ ಸಾಧನವೊಂದರ, ಮಾಧ್ಯಮ–ವೊಂದರ ಅವಶ್ಯಕತೆಯಿರುತ್ತದೆ. ದಿವ್ಯತೆಯ ಆಧ್ಯಾತ್ಮಿಕತೆಯು ಯೋಗಿಗಳ ಅಂತರ್ಜಾನದ ಮೂಲಕ ಭೂಮಿಯನ್ನು ಪ್ರವೇಶಿಸಿದರೆ; ದೈತ್ಯತೆಯ ಭೌತಿಕತೆಯು ವಿಜ್ಞಾನಿಗಳ ತಂತ್ರ ಜ್ಞಾನದ ಮುಖೇನ ಬುವಿಯನ್ನು ಸೇರಿ ನೆಲೆಸುತ್ತದೆ. ಒಂದು ಸಿದ್ಧಾಂತದ ಪ್ರಕಾರ ಈಗ ಪೃಥ್ವಿಯಲ್ಲಿ ನಾವು ಬಳಸುತ್ತಿರುವ ತಂತ್ರ ಜ್ಞಾನದ ಯಾಂತ್ರಿಕತೆಯೆಲ್ಲವೂ ಅಧೋ ಲೋಕಗಳಿಂದಲೇ ಬಂದಿರುವ ಭಾಗ್ಯವಾಗಿದೆ. ಇದನ್ನು ಇನ್ನೂ ಸರಳವಾಗಿ ಅರ್ಥೈಸಿಕೊಳ್ಳಬೇಕಾದರೆ, ದೈತ್ಯ ಲೋಕದ ಶಿಲ್ಪಿಯೆಂದು

ಕರೆಯಲಾದ 'ಮಯ'ನ ಕುರಿತಾದ ಪ್ರಾಚೀನ ಸಾಹಿತ್ಯಗಳೆಲ್ಲವೂ ಅವನನ್ನು ಓರ್ವ ಮುಂದುವರಿದ ವಿಜ್ಞಾನಿಯಂತೆ ವಿವರಿಸಿರುವದನ್ನು ಗಮನಿಸಬಹುದು. ಮಹಾಭಾರತದ ಮಯಸಭೆಯ ಯಂತ್ರ ಕೌಶಲ್ಯ ಹಾಗೂ ಕಥಾ ಸರಿತ್ಸಾಗರದಲ್ಲಿ ಅವನು ನಿರ್ಮಿಸುವ ಕೀಲುಗೊಂಬೆಗಳ ಕಥಾನಕವು ಆಧುನಿಕ ಯುಗದ ರೋಬೋಟಿಕ್ಸ್‌ಗಳನ್ನು ಹೋಲುವದನ್ನು ಕಾಣಬಹುದು. ಒಟ್ಟಿನಲ್ಲಿ ಪೃಥ್ವಿಗೆ ದಿವ್ಯತೆ–ದೈತ್ಯತೆ ಎರಡರ ಆಗಮನವೂ ಅವಶ್ಯಕವೆಂಬುದಂತೂ ಸತ್ಯ. ಆದರೆ ಕೇವಲ ಯಾಂತ್ರಿಕತೆಯಲ್ಲಿಯೇ ಮುಂಬರಿಯುವ ಅಭೀಪ್ಸೆಯಲ್ಲಿ ಆಧ್ಯಾತ್ಮಿಕತೆಯನ್ನು ತೊರೆದ ಮನುಕುಲವು ದಿವ್ಯತೆಯಿಂದ ಹಿಂಸರಿದು ದೈತ್ಯತೆಯೆಡೆಗೇ ಮೊಗ ಮಾಡಿರುವುದು ಮಾತ್ರ ಶೋಚನೀಯ. ಆರಂಭದಲ್ಲಿ ರುರುವು ಕಾಮನ ನಿರ್ದೇಶನದಂತೆ ಅಧೋ ಲೋಕಕ್ಕೆ ಇಳಿದಿರುವದನ್ನು ಅರಿತ ಮೃತ್ಯುವು ಕೋಪಗೊಂಡು ಕಾಮನ ಕಳ್ಳಾಟವನ್ನು ಪ್ರಚುರಪಡಿಸುತ್ತಾನೆ. ಮರ್ತ್ಯದ ನೆಲೆಯಲ್ಲಿ ಈ ಹಿಂದೆ ರುರುವಿನೆದುರು ಇದೇ ರೀತಿಯಲ್ಲಿ ಕಾಮನು ಮೃತ್ಯುವಿನ ಕೆಡುಕುಗಳನ್ನು ಪ್ರಸ್ತಾಪಿಸಿರುತ್ತಾನೆ. ಇದು ಮೇಲ್ನೋಟಕ್ಕೆ ಗ್ರೀಕ್ ಮಿಥಕಗಳಲ್ಲಿರುವಂತೆ ದೇವತೆಗಳಿಬ್ಬರು ಎದುರಾಳಿಗಳ ತಪ್ಪುಗಳನ್ನು ಹೊರಗೆಡವುತ್ತ ತಮ್ಮತನವನ್ನು ಭದ್ರಪಡಿಸಿಕೊಳ್ಳುತ್ತಿರುವ ಪಾಶ್ಚಾತ್ಯ ದರ್ಶನದ ಛಲದಂತೆ ಕಂಡುಬಂದರೂ, ಇದು ಶಕ್ತಿಗಳೆರಡು ನೇರಾನೇರದಲ್ಲಿ ಕದನಕ್ಕಿಳಿಯದೇ ಮನುಕುಲದ ಮಹಾತ್ಮನೋರ್ವನ ಮೂಲಕ ಜಗತ್ತಿಗೆ ಸತ್ಯ ದರ್ಶನವನ್ನು ಸಾರುತ್ತಿರುವದನ್ನು ತೋರಿಸಿಕೊಡುತ್ತದೆ. ಕಾಮನ ಕಳ್ಳಾಟವನ್ನು ಎತ್ತಿತೋರಿಸಿದ ನಂತರವೂ ರುರುವು ತನ್ನ ಬಿಗಿದ ಪಟ್ಟನ್ನು ಸಡಿಲಿಸದಿರುವದನ್ನು ಕಂಡ ಕೃತಾಂತನು, ಈಗಾಗಲೇ ಮಡಿದಿರುವ ಮನದನ್ನೆಯನ್ನು ಮರಳಿ ಮೇಲಿನ ಲೋಕಕೆ ಕೊಂಡೊಯ್ಯಲು ಮೃತ್ಯು ಯಜ್ಞವನ್ನು ಪೂರೈಸಬೇಕೆಂಬ ನಿಯಮವನ್ನು ತಿಳುಹಿ, ಅದರ ನ್ಯೂನ್ಯತೆಯನ್ನು ತಿಳುಹಿ, ಭಯವಿಡಿಸಿ, ಅವನನ್ನು ತನ್ನ ನಡೆಯಿಂದ ಹಿಂಸರಿಯುವಂತೆ ಪ್ರಯತ್ನಿಸುತ್ತಾನೆ. ಆದರೆ ಮೃತ್ಯು ಯಜ್ಞದ ನಿಯಮದಂತೆ ರುರುವು ಮಡಿದ ಪ್ರಿಯಳಿಗಾಗಿ ತನ್ನ ಉಳಿದ ಆಯುವಿನ ಅರ್ಧ ಭಾಗವನ್ನು ಸಮರ್ಪಿಸಲು ಸಿದ್ಧನಾಗಿರುವದನ್ನು ಅರಿತ ಮೃತ್ಯುವು ಧರ್ಮ ಸಂಕಟಕ್ಕೆ ಒಳಗಾಗುತ್ತಾನೆ. ಆದರೆ ತನ್ನ ಮೃತ್ಯು ಲೋಕದ ನಿಯಮಗಳನ್ನು ಸಡಿಲಿಸಬಾರದೆಂಬ ಛಲದಿಂದ ಮೃತ್ಯುವು ಮೃತ್ಯು ಯಜ್ಞದಿಂದ ಸಂಭವಿಸಬಹುದಾದ ತೊಂದರೆಗಳನ್ನು ವಿವರಿಸುತ್ತಾ, ಈಗಾಗಲೇ ಕಳೆದುಹೋಗಿ ಅಳಿದುಳಿದ ಆಯುವಿನಲ್ಲಿ ಅರ್ಧ ಭಾಗವನ್ನು ಮಡಿದ ಕನ್ಯೆಗೆ ನೀಡಿರಲು ಇಬ್ಬರೂ ಜೊತೆಯಾಗಿ ಮರ್ತ್ಯಕ್ಕೇನೋ

ಮರಳಬಹುದು ಆದರೆ, ರುರುವಿನ ಖಾತೆಯಲ್ಲಿ ಉಳಿದ ಆಯುವನ್ನು ಎರಡು ಭಾಗಗಳಾಗಿ ವಿಂಗಡಿಸಿ ಅದರಲ್ಲಿ ಇಬ್ಬರಿಗೂ ಸಮಪಾಲನ್ನು ನೀಡಿದಾಗ ಅವರಿಬ್ಬರ ಜೀವಿತಾವಧಿಯಲ್ಲಿ ಕೇವಲ ಕೆಲವೇ ವರ್ಷಗಳ ಆಯಸ್ಸು ಉಳಿದುಕೊಳ್ಳುತ್ತದೆ. ಅದನ್ನು ಅವರಿಬ್ಬರೂ ಭುವಿಯಲ್ಲಿ ಕಳೆದು ಇನ್ನೂ ಯೌವನಾವಸ್ಥೆಯು ಪೂರ್ಣಗೊಳ್ಳುವದರ ಒಳಗೆ ಮಡಿದು ಮೃತ್ಯು ಲೋಕಕ್ಕೆ ಮರಳುತ್ತಾರೆ. ಹಾಗಾಗಿ ಅವರ ಬದುಕಿನಲ್ಲಿ ಮುಪ್ಪಿನ ದಿನಗಳೇ ಇಲ್ಲದಾಗುವ ಸತ್ಯವನ್ನು ವಿವರಿಸುತ್ತಾನೆ. ಪ್ರೇಮದ ಪುನರ್ಮಿಲನಕ್ಕಾಗಿ ತಾನು ವೃದ್ಧಾಪ್ಯದವರೆಗೂ ಬದುಕಿರುವ ಭಾಗ್ಯವನ್ನು ಕಳೆದುಕೊಳ್ಳಲು ತಾನು ಸಿದ್ಧವಿರುವದಾಗಿ ರುರುವು ಖಚಿತಪಡಿಸಿಕೊಂಡ ನಂತರವೂ ಮೃತ್ಯುವು ತನ್ನ ನಿಯಮವನ್ನು ಸಡಿಲಿಸುವದಿಲ್ಲ. ಹಾಗೂ ಬದುಕಿನ ದಾರಿಯಲ್ಲಿ ಬಂದುಹೋಗುವ ಬಾಲ್ಯ, ಕೌಮಾರ್ಯ, ತಾರುಣ್ಯ, ಯೌವನ, ಪ್ರೌಢತ್ವ, ಮುಪ್ಪುಗಳೆಂಬ ಋತುಮಾನಗಳ ಮಹತ್ವವನ್ನು ಸಾರುತ್ತ, 'ಯೌವನದ ಯಾಂತ್ರಿಕತೆಯಲ್ಲಿ ಮುಪ್ಪಿನ ಮಾಂತ್ರಿಕತೆಯನ್ನು ಮರೆತು ಮೂಢರಾಗಿ ಮೈಮರೆಯಬಾರದೆ'ಂದು ತಿಳಿಸುತ್ತಾನೆ. ಹಾಗೂ ಋಷಿ ಪರಂಪರೆಯಿಂದ ಬಂದ ರುರುವು ತಾರುಣ್ಯದಲ್ಲಿ ತಪಿಸಿದ ಸಿದ್ಧಿಗಳು ಮುಪ್ಪಿನಲ್ಲಿ ಮೈದಳೆದು ನಿಲ್ಲುವ ಯೌಗಿಕ ಸತ್ಯವನ್ನು ಪ್ರಚುರಪಡಿಸುತ್ತಾನೆ. 'ಬೀಜವೊಂದು ಕಾಯಾಗಿ, ಹಣ್ಣಾಗಿ, ಮಾಗಿದ ಫಲವಾಗಿ ಮರದಿಂದುದುರಬೇಕು, ಮಹಾದೇವನ ಮಡಿಲೇರಿ ಮೆರೆಯಬೇಕು! ಆಗಲೇ ಆ ಬೀಜವು ಬಿತ್ತಿರುವದಕ್ಕೂ ಒಂದು ಅರ್ಥವು ದೊರಕುವುದು' ಎಂದು ಮುಪ್ಪಿನ ಮಹಾತ್ಮೆಯನ್ನು ತಿಳಿಸುತ್ತಾನೆ. ಈ ಸಂಭಾಷಣೆಯಲ್ಲಿ ಮೃತ್ಯುದೇವನು ಮಾನವ ಜನಾಂಗವು ವೃದ್ಧಾಪ್ಯದ ಬಗೆಗೆ ತಿಳದುಕೊಂಡ ತಪ್ಪು ತಿಳುವಳಿಕೆಗಳನ್ನೆಲ್ಲ ರುರುವಿನ ಮುಖಾಂತರ ಜಗತ್ತಿಗೆ ಮನವರಿಕೆ ಮಾಡಿಕೊಡುವಂತಿದೆ. ವೃದ್ಧಾಪ್ಯವು ಕೇವಲ ರೋಗರುಜಿನಗಳ ಬಂಧೀಖಾನೆಯೆಂದು ಅರಿತುಕೊಂಡ ಈ ಯಾಂತ್ರಿಕ ಜೀವನದ ದಿನಮಾನದಲ್ಲಿ ಮುಪ್ಪೆಂಬುದು ಬದುಕಿನ ಮುಸ್ಸಂಜೆಯ ಮಹಾಕ್ಷಣಗಳೆಂಬುದನ್ನು ಇಲ್ಲಿ ಶ್ರೀ ಅರವಿಂದರು ಮೃತ್ಯುವಿನ ಬಾಯಿಯಿಂದ ಜಗತ್ತಿಗೆ ಸಾರುತ್ತಾರೆ. ಕೊನೆಗೆ ರುರುವು ಇದಕ್ಕೂ ಒಪ್ಪದಿದ್ದಾಗ ನಿಯಂತೃವಿನ ನಿರ್ದೇಶನದಂತೆ ಚಿತ್ರಗುಪ್ತನು ತನ್ನ ಸ್ಮೃತಿಯೊಳಗೆ ಸೆರೆಹಿಡಿದ ಗುಪ್ತ ಚಿತ್ರಗಳನೆಲ್ಲ ಚಲನಚಿತ್ರದಂತೆ ಪರದೆಯ ಮೇಲೆ ಮೂಡಿಸುತ್ತಾನೆ. ಚಲಿಸುವ ಚಲನಚಿತ್ರದಂತೆ ಪ್ರಸಾರವಾದ ಭಿತ್ತಿ ಚಿತ್ರಗಳಲ್ಲಿ ಯಮನು ಬುವಿಯ ಭವಿಷ್ಯದ ಸತ್ಯವನ್ನು ತೋರಿಸುತ್ತಾನೆ. ಅಲ್ಲಿ ಕಂಡ ಆರಂಭಿಕ

ದೃಶ್ಯಗಳಲ್ಲಿ ಮುಂಬರುವ ಜಗತ್ತಿನ ಭೂಪಟವು ಬಂದು ಮರೆಯಾಗುತ್ತದೆ. ನಂತರ ಪ್ರಪಂಚದ ಅನೇಕ ದೇಶಗಳ ಸಾಂಸ್ಕೃತಿಕ ಮತ್ತು ರಾಜಕೀಯ ಬೆಳವಣಿಗೆಗಳು ಹೇಗೆ ಕಾಲವು ತಾನೆ ರಚಿಸಿದ ಭವ್ಯ ಸೌಧಗಳನ್ನು ತಾನೇ ಕೆಡವಿ ಹಾಕುತ್ತದೆ ಎಂಬುದನ್ನು ತೋರಿಸಲೆಂದು, ಗ್ರೀಸ್ ದೇಶದ ಅಥೇನ್ಸಿನ ಬೆಟ್ಟವೊಂದರ ಮೇಲೆ ಕಟ್ಟಿಸಿದ ಮಹಾಸೌಧ ಅಕ್ರೋಪೊಲೀಸ್‌ನಲ್ಲಿ ನಿತ್ಯನೂತನೆಯಾದ ದೇವಿ ವರ್ಜಿನಳಿಗಾಗಿ ಮಹಾಶಿಲ್ಪಿ ಫಿಡಿಯಸನು ಕೆತ್ತಿದ ಶಿಲ್ಪ ಸ್ವಾರಸ್ಯವನ್ನು ತೋರಿಸುತ್ತಾನೆ, ಮರುಕ್ಷಣವೇ ಭಾರತೀಯ ಕೋನಾರ್ಕದ ಸೂರ್ಯ ಮಂದಿರ ಸಹಸ್ರಾಂಗಣವನ್ನು, ಅಜಂತ–ಎಲ್ಲೋರಾ ಗುಹೆಗಳಲ್ಲಿ ಸಾಲುಗಟ್ಟಿ ನಿಲ್ಲಿಸಿದ ಬೌದ್ಧ ಶಿಲ್ಪಗಳನ್ನು ತೋರಿಸಿ, ಕಾಲದ ಓಘದಲ್ಲಿ ಆ ಸಾಂಸ್ಕೃತಿಕ ಸೌಧಗಳೆಲ್ಲ ಹೇಗೆ ದಾಳಿಗೊಳಗಾಗಿ ನೆಲ ಕಚ್ಚುತ್ತವೆ ಎಂಬುದನ್ನು ಬಿತ್ತರಿಸುತ್ತಾನೆ.

ಚಲನ ಚಿತ್ರವು ಹೀಗೆ ಸಾಗುತ್ತಿದ್ದಂತೆ ತದೇಕಚಿತ್ತನಾದ ರುರುವಿನೆದುರು ಅವನ ಭವಿಷ್ಯದ ಬದುಕಿನ ಚಿತಣ್ರವು ಮೂಡುತ್ತ ಸಾಗುತ್ತದೆ. ಒಂದು ವೇಳೆ ಮೃತಳನ್ನು ಪಡೆದೇತೀರುವೆನೆಂಬ ಕಟಿಬದ್ಧತೆಯಿಂದ ಹಿಂಸರಿದು, ಒಬ್ಬನೇ ಮರ್ತ್ಯಕ್ಕೆ ಮರಳುವೆಯಾದರೆ, ಅಲ್ಲಿ ಅವನು ಪಡೆದುಕೊಳ್ಳಲಿಹ ಭವಿಷ್ಯದ ಮಹಾದಿನಗಳ ದರ್ಶನವನ್ನು ತೋರಿಸಲಾಗುತ್ತದೆ. ಆ ಸರಣಿ ಚಿತ್ರದಲ್ಲಿ ರುರುವು ತನ್ನನ್ನು ತಾನು ಓರ್ವ ಮಾಗಿದ ಮಹರ್ಷಿಯ ರೂಪದಲ್ಲಿ ಕಾಣುತ್ತಾನೆ. ತನ್ನ ಏಕಮಾತ್ರ ದರ್ಶನಕ್ಕಾಗಿ ದೂರ ದೇಶದ ದೊರೆಗಳೆಲ್ಲ ದಾರಿಹೋಕರಂತೆ ಕಾದುಕುಳಿತಿರುವ ಅಮೋಘ ದೃಶ್ಯವನಲ್ಲಿ ಕಾಣುತ್ತಾನೆ. ಅಪಾರ ಶಿಷ್ಯ ವರ್ಗದಿಂದ ಬಳಸಿ ಬ್ರಹ್ಮರ್ಷಿ ಪದವಿಗೆ ಭಾಜನನಾದ ತಾನು ಅನಂತತೆಯ ಅಂಚಿನಲ್ಲಿ ನಿಂತು ನಿರ್ಮಾಯಘನದ ದಿವ್ಯತೆಯೊಳಗೆ ಒಂದಾಗುತ್ತಿರುವ ಮಹಾದರ್ಶನವನ್ನು ಕಂಡು ಒಂದು ಕ್ಷಣ ರೋಮಾಂಚಿತನಾಗುತ್ತಾನೆ. ಹಾಗೂ ತಾನು ಕೇವಲ ಪ್ರಿಯಂವದೆಯನ್ನು ಪಡೆಯುವಧಾವಂತದಲ್ಲಿ ಭವಿಷ್ಯದ ಈ ಮಹಾದಿನಗಳನ್ನು ಕಳೆದುಕೊಳ್ಳಲಾರೆ ಎಂದು ನಿರ್ಧರಿಸುತ್ತಾನೆ. ಮತ್ತೆ ಮರುಕ್ಷಣವೇ ಮೃತ್ಯುವಿನ ಮೊಗವಾಡವನ್ನು ಕಿತ್ತೆಸೆಯಲೆಂಬಂತೆ ತನ್ನ ಪ್ರಿಯಂವದೆಯನ್ನು ಪಡೆಯುವ ಪ್ರಾಮುಖ್ಯತೆಯನ್ನೇ ಮೃತ್ಯುವಿನ ಮುಂದಿಡುತ್ತಾನೆ. ಆ ಕ್ಷಣಕ್ಕೆ ಅವನನ್ನು ಮುತ್ತಿದ ಕರಾಳವೆಲ್ಲವು ಕರಗಿ ಬೆಳಕು ಮೂಡುತ್ತದೆ. ಬರುಬರುತ್ತ ಬೆಳಕು ಪ್ರಕಾಶಮಾನವಾಗುತ್ತಾ ತಾನೇ ಬೆಳಕಿನೊಳಗೊಂದಾಗುತ್ತಾನೆ. ಹಾಗೂ ಅವನು ಮಾಡಿದ ತ್ಯಾಗಕ್ಕೆ ಮೂರು ಲೋಕಗಳೇ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಮಣಿಯುತ್ತವೆ. ಕೆಲ ಕ್ಷಣಗಳಲ್ಲೇ

ರುರುವು ನಿಧಾನವಾಗಿ ಮೇಲೇರತೊಡಗುತ್ತಾನೆ. ಆದರೆ ಈ ಸಾರಿ ಬಂದ ಮಾರ್ಗದಲ್ಲಿ ಅಲ್ಲದೆ ಬೇರೊಂದು ಮಾರ್ಗದಲ್ಲಿಯೇ ಮೇಲ್ಮುಖವಾಗಿ ಪಯಣಿಸುತ್ತಾನೆ. ಹರಿಯುತ್ತಿರುವ ವೈತರಣಿಯನ್ನು ಹನ್ನೆರಡು ಬಾರಿ ದಾಟಿ, ನರಳುತಿಹ ನರಕವನ್ನು ಹನ್ನೆರಡು ಬಾರಿ ಬಳಸಿ, ದಾರಿಗುಂಟ ಮಲಗಿ ಮೆತ್ತಗಾಗಿದ್ದ ಸುರಂಗವೊಂದನ್ನು ಹಾಯ್ದು, ಪಾಪಾತ್ಮರುಗಳನೆಲ್ಲ ಕೂಡಿ ಹಾಕಿರುವ ಕರಾಳಮಯದ ಕೂಪವನು ಹಾಯ್ದು ಮೇಲೆರುತ್ತಾನೆ. ಅಲ್ಲಿಯ ಪಾಪಿ ಆತ್ಮಗಳ ಕೂಗು, ಅವನ ಪ್ರಜ್ಞೆಗೆ ತಾಗಿ ತೂಕಡಿಸಿದಂತಾಯ್ತು. ಆ ಪಾಪಾತ್ಮರುಗಳು ತಮ್ಮನ್ನು ಸೆರೆ ಹಿಡಿದ ಕಬ್ಬಿಣದ ನೂರೊಂದು ಭಿತ್ತಿಯನ್ನು ಮುರಿದು ಮುನ್ನುಗ್ಗುವ ಶಕ್ತಿಯಿರದೆ ಸುಂದಾಗಿ ಸೊರಗಿಕೊರಗಿ ಕೂಗುತ್ತಿರುವದನ್ನು ಕೇಳುತ್ತ ಕಣ್ತುಂಬಿ ಬಂದಿರಲು ಮೇಲೇರಿ ಕೊನೆಯ ನರಕದ ಬಾಗಿಲಿನಿಂದ ಹೊರಬಿದ್ದು ಗಂಗೆಯ ತಟಾಕದೆಡೆ ಕಾಲಿರಿಸುತ್ತಾನೆ. ಇಲ್ಲಿಗೆ ಅವನ ನರಕದ ಪ್ರಯಾಣವು ಪೂರ್ಣಗೊಂಡಿತ್ತು.

ನಿಶಾವತರಣದ ದೃಷ್ಟಿಯ ಭಾಗದಲ್ಲಿ ಶ್ರೀ ಅರವಿಂದರು ಸೂಚಿಸಿದ ಹೇಡೀಸ್, ಈಡನ್, ಅಕ್ರೋಪೋಲೀಸ್, ವರ್ಜಿನ್ ದೇವತೆಯರ ನಾಮಗಳನ್ನು ಅನುವಾದದ ಹಂತದಲ್ಲಿ ಭಾರತೀಯ ಜಾಯಮಾನಕ್ಕೆ ತಕ್ಕಂತೆ ನವೀನ ನಾಮಗಳಿಂದ ಬದಲಿಸಬಹುದಾದರೂ, ಆ ಹಂತದಲ್ಲಿ ಶ್ರೀ ಅರವಿಂದರು ಹೇಳಲು ಪ್ರಯತ್ನಿಸಿದ್ದ ಸತ್ಯಗಳನ್ನು ಅದೇ ರೂಪದಲ್ಲಿ ತೋರಿಸಲೆಂದು ಆ ಸಂಕೇತಗಳನ್ನು ಯಥಾವತ್ ಸ್ವೀಕರಿಸಲಾಗಿದೆ. ಒಂದು ರೀತಿ ಅದು ಅವಶ್ಯಕವೂ ಹೌದು. ಇದರಿಂದ ಕಾವ್ಯದ ಮೆರುಗು ಇನ್ನಷ್ಟು ಹೆಚ್ಚಿ ಅದು ಯಾವುದೇ ಕಾಲ–ದೇಶ–ಆಯಾಮಕ್ಕೆ ಮೀಸಲಾಗಿಲ್ಲ ಎಂಬುದನ್ನು ಸೂಚಿಸಿದಂತಾಗುತ್ತದೆ.

## 5

ಇಳಾರೋಹಣವೆಂಬ ಕೊನೆಯ ದೃಷ್ಟಿಯು ಈ ಹಿಂದಣ ದೃಷ್ಟಿಗಳಿಗಿಂತ ಅತಿ ಚಿಕ್ಕದಾಗಿದ್ದು, ರುರುವು ಪಾತಾಳದ ಭಿತ್ತಿಯಿಂದ ಮೇಲೇರಿ ಬಂದ ನಂತರದ ಕಥಾನಕವನ್ನು ಚಿತ್ರಿಸುತ್ತದೆ. ಏಕೆಂದರೆ, ಪ್ರಥಮ ದೃಷ್ಟಿಯಲ್ಲಿ ಪ್ರಿಯಂವದೆಯ ಪಾರ್ಥಿವವನ್ನು ಬನಶಂಕರಿಯರು ಬಂದು ಭೂಮಿಯೊಳಗೊಂದಾಗಿಸಿದ ನಂತರ ರುರುವಿಗೆ ಎಲ್ಲೂ ಅವಳ ದರ್ಶನವು ಲಭಿಸುವದಿಲ್ಲ. ಹಾಗೂ ಮೃತ್ಯು ಸದನದಲ್ಲಿ ಹೇಡೀಸನ ಮುಂದೆ ತಾನು ಮೃತ್ಯು ಯಜ್ಞಕ್ಕೆ ಸಿದ್ಧವಾಗಿರುವದನ್ನು ತಿಳಿಸಿದ

ನಂತರ ಅಲ್ಲಿಯ ಪ್ರಕೃತಿಯು ಬದಲಾಗಿ ಅವನನ್ನು ನೇರ ಭೂಮಿಯ ಸ್ತರಕ್ಕೆ ತಂದುಬಿಡುತ್ತದೆ. ಆದರೆ ಮೇಲೇರುವಾಗ ರುರುವೊಬ್ಬನೇ ಇರುತ್ತಾನೆಯೇ ಹೊರತು ಅಲ್ಲೆಲ್ಲಿಯೂ ಪ್ರಿಯಂವದೆಯು ನಮಗೆ ಕಾಣಸಿಗುವದಿಲ್ಲ. ಹಾಗಾದರೆ ಮೃತ್ಯುವು ಪ್ರಿಯಂವದೆಯನ್ನು ಮರಳಿಸಿಲ್ಲವೇ ಎಂಬ ಅನುಮಾನವು ನಮ್ಮನ್ನು ಕಾಡುತ್ತದೆ. ಆ ಪ್ರಶ್ನೆಗೆ ಇಳಾರೋಹಣವೆಂಬ ಈ ದೃಷ್ಟಿಯು ಉತ್ತರವನ್ನೀಯುತ್ತದೆ.

ಕತ್ತಲ ಕೂಪದೊಳಗೆ ಝುಗ್ಗನೆ ಬೆಳಕು ಮೂಡಿ ತಾನೂ ಆ ಬೆಳಕಿನೊಳಗೊಂದಾಗಿ ರುರುವು ಹಲವು ಚಕ್ರವಿಕ್ರಮಣದ ಮಾರ್ಗದಿಂದ ಮೇಲೇರಿ ಬಂದು ಗಂಗೆಯ ತಟಾಕದಲ್ಲಿ ನಿಲ್ಲುತ್ತಾನೆ. ಆದರೆ ಅವನೊಡನೆ ಪ್ರಿಯಂವದೆಯಿರುವದಿಲ್ಲ. ಇದರಿಂದ ಭೀತನಾದ ರುರುವು ಸುತ್ತೆಲ್ಲ ನೋಡಿ ಪರೀಕ್ಷಿಸುತ್ತಾನೆ. ಆಗ ಅಲ್ಲೇ ಅವನ ಸಮೀಪದಲ್ಲೇ ಗಂಗೆಯ ತೆರೆಯ ಮೇಲೆ ಪ್ರಿಯಂವದೆಯು ತೇಲುತ್ತ ಮಲಗಿರುವದನ್ನು ಕಂಡು ಓಡೋಡಿ ಅವಳನ್ನು ಸಮೀಪಿಸಿ ಅವಳ ದೇಹವನ್ನು ಅಪ್ಪಿಕೊಳ್ಳುತ್ತಾನೆ. ಹಲವು ಕಾಲದಿಂದ ಕತ್ತಲಿನಲಿ ಕಳೆದೋದ ಕಾಂತೆಯ ದೇಹದ ಕಾಂತಿಯು ಕಮರಿ ಹೋಗಿದ್ದು ನರಕದ ಕಪ್ಪನೆಯ ಛಾಯೆಯೊಂದು ಅವಳ ಶರೀರವನ್ನು ಆಕ್ರಮಿಸಿರುತ್ತದೆ. ಆದರೆ ಯಾವಾಗ ರುರುವಿನ ಹಸ್ತ ಸ್ಪರ್ಶವಾಗುತ್ತದೆಯೋ, ಆ ಕ್ಷಣಕ್ಕೆ ಅವನ ವದನವು ಕಾಂತಿಮಯವಾಗುತ್ತ ಸಾಗುತ್ತದೆ. ಗುಳಿಕೆನ್ನೆಯು ಕೋಮಲವಾಗಿ ಬದಲಾಗುತ್ತದೆ. ನೋಡನೋಡುತ್ತಿದ್ದಂತೆ ಅವಳ ಇಡೀ ಶರೀರವು ಸ್ವರ್ಗೀಯ–ಸ್ವರ್ಣಿಮ ಕಾಂತಿಯಿಂದ ಹೊಳೆಯಲಾರಂಭಿಸುತ್ತದೆ. ಬಹು ಕಾಲದಿಂದ ಬೇರಾಗಿದ್ದ ಪ್ರಾಣಕಾಂತನನ್ನು ನೋಡುತ್ತಲೇ ಪ್ರಿಯಂವದೆಯಲ್ಲಿ ಪ್ರೇಮವು ಪ್ರವಹಿಸಿರಲು ಕಣ್ತುಂಬಿ ಬಂದು ಅವಳ ಗದ್ಗದಿತ ಕಂಠದಿಂದ ಪ್ರಿಯಕರನನ್ನು ಕೂಗಿ ಕರೆದು ತಬ್ಬಿಕೊಳ್ಳುತ್ತಾಳೆ. ಅಲ್ಲಿಗೆ ರುರುವು ನೋತ ಪ್ರೇಮ ಯಜ್ಞವು ಫಲಿಸಿದಂತಾಗುತ್ತದೆ. ಅವರ ಪ್ರೇಮ ತತ್ವವು ಮರ್ತ್ಯವನು ಮೀಟಿ ಮೇಲೇರುತ್ತದೆ, ಪ್ರಾಣ ಮಾತ್ರಕೆಂದೇ ಬದುಕಿದ್ದ ಬಾಂದುಗಳನ್ನೆಲ್ಲಾ ಬಿಟ್ಟು ಭವಿಸುತ್ತದೆ, ಮನದ ಮಹಾಲೋಕಗಳನೆಲ್ಲ ಜಯಿಸಿ ವಿಜೃಂಭಿಸುತ್ತದೆ, ಅಂತರಾತ್ಮಾಯನದ ವಲಯವನ್ನು ಸೇರಿ, ಕೊನೆಗೊಮ್ಮೆ ಕಾರಣ ತತ್ತ್ವವನ್ನು ಪಡೆದು ಮಹಾಕಾರಣವನ್ನೇ ಮೆರೆದು ಮುಂದಡಿಯಿಟ್ಟು ಆನಂದವನ್ನು ಪ್ರಾಪ್ತಿಸಿಕೊಳ್ಳುತ್ತದೆ. ಅದರ ಸಂಕೇತದಂತೆ ಕೋಕಿಲವೊಂದು ಅವರ ನೆತ್ತಿಯ ಮೇಲೆ ಸುತ್ತುತ್ತ, ಕೂಗುತ್ತ, ಕೇಕೆ ಹಾಕಿ ನಲಿಯುತ್ತದೆ.

(ಸಶೇಷ)

# ಸಾವಿತ್ರೀ: ಯೋಗಿಕ ಶಬ್ದಾರ್ಥ

– ಶ್ರೀ ಪುಟ್ಟು ಕುಲಕರ್ಣಿ

## 1. ಬಾಣಂತಿಕೋಣೆಯವಧಿ: 40 ದಿನದ ಮಹತ್ವ

ಸದ್ಯದ ಪರಿಸ್ಥಿತಿಯಲ್ಲಿ (ಕೊರೋನಾ ಕಾರಣದಿಂದ ರೂಪಿಸಲ್ಪಟ್ಟಿರುವ (21 + 19 = 40) 'ಬದುಕಿನ' ವ್ಯವಸ್ಥೆಗೆ ಏನಾದರೂ ಒಂದು ನಿಗದಿತವಾದ ಕಾರಣವಿರಲೇಬೇಕಲ್ಲವೇ? ಈ 40 ದಿನಗಳ ವಿಷಯವಾಗಿ ಇಡೀ ಭೂಮಂಡಳದ ದೇಶಗಳೂ ಒಮ್ಮತದ ಅಭಿಪ್ರಾಯವನ್ನೇ ಹೊಂದಿ, ಅನುಷ್ಠಾನಿಸಿಕೊಂಡು, ಆರಾಧಿಸಿಕೊಂಡು ತಮ್ಮ ಜೀವನವನ್ನು ರೂಪಿಸಿಕೊಳ್ಳುತ್ತಿದ್ದಾರೆ.

ಶ್ರೀ ಅರವಿಂದರ 'ಸಾವಿತ್ರಿ' ಮಹಾಕಾವ್ಯದಲ್ಲಿ ಈ ಅವಧಿಯ ಕುರಿತು ಇರುವ ಈ ಅಪ್ರತಿಮ ಪ್ರತಿಮಾ ಅಭಿವ್ಯಕ್ತಿಯು ವಿಶ್ವದ ವಿಕಸನದ ಹಂತದಲ್ಲಿ ಬರಬಹುದಾದ, ಘಟಿಸಬಹುದಾದ ಉತ್ಪಾತಗಳನ್ನಾಗಲಿ ಅಥವಾ ಸಾಕ್ಷಾತ್ಕಾರದ ಸಾಧನೆಗೆ ನಿಯತಿಯ ಪ್ರಕಾರವೇ ನಿಗದಿಗೊಂಡ ಅವಧಿ ಎಂದರೆ 40 ಭೂಮಾನದ ದಿನಗಳು ಎನ್ನುವದನ್ನು ಸಂಕೇತಿಸಿದ್ದಾರೆ. ಇದು ವೈಶ್ವಿಕ ಕಾಲಗಣನಾ ಕ್ರಮಾಂಕದಲ್ಲಿ ಎಷ್ಟು (ಅವಧಿ) ಎನ್ನುವದು ಇನ್ನೂ ಸಂಶೋಧನೆಗೊಳ್ಳಬೇಕಿದೆ.

ಸಾವಿತ್ರಿಯ ಪ್ರಥಮ ಸಾಲಿನಲ್ಲಿ ಹೇಳಿರುವ 'Hour' ಇದೇ ಆಗಿರಬಹುದೇ? ಸಾವಿತ್ರಿ; ದಳ 1 ರೇಣು 1 ಪುಟ 7 (ಸಾಲುಗಳು 5–11) ರಲ್ಲಿ ಇರುವ ಇಂಗ್ಲೀಷ್ ಸಾಲುಗಳು ಹೀಗಿವೆ:

ಇದನ್ನೆ 'ಸಾವಿತ್ರಿ':

ಅವಳೆದೆಯ ಭಾವತೀವ್ರತೆಯ ಪ್ರೇಮ– ಭವಿತವ್ಯ ಅವಳ ಕೊಡುಗೆ
ಆಗಿತ್ತು ವ್ಯರ್ಥ, ಪರಿಗಣನೆ ಈಗ ಪ್ರಖ್ಯಾತ ತ್ಯಾಗದೊಸಗೆ
ದುಂದುಗಾರಿಕೆಯ ತೆರದಲ್ಲಿ ಬೆಸುಗೆ ಅವಳ ಆ ದಿವ್ಯ ಸಮೃದ್ಧಿ
**ತನ್ನಲ್ಲಿ ತಾನು ಅನುಭವಿಸಿ ಅವಳು 'ಬಾಣಂತಿಕೋಣೆಯವಧಿ'**
ಆ ಪರಮಗಂದು ನೆಲೆಗೊಳಿಸಿ ಅವಳ, ಅಸ್ತಿತ್ವ ಭವ್ಯವಾಗಿ
ಮೃಣ್ಮಯದ ಮೇಲೆ ಚಿನ್ಮಯದ ಮೂಲ ವಿಕಸನವು ನಿತ್ಯವಾಗಿ
ಬುವಿಮನದ ಗುಣವ ಬದಲಿಸುವ ಕ್ರಿಯೆಯು ಬಲು ಕಠಿಣ ಯತ್ನವಾಗಿ
ಶಾಶ್ವತದ ಸ್ಪರ್ಶ ಪಡೆಯೆ ನಶ್ವರವು, ಪಲ್ಲಟದಿ ಭಾವವಾಗಿ

ಆಕ್ರಮಿಸಲೆಂದು ಹಾತೊರೆದು ಬಂದ ಅಗ್ನಿ–ಆಕಾಶ ದ್ರವ್ಯ
ಪರಮ ಪಾವನದ ವಳಾವಳಿಯನ್ನು ಸಹಜದಲಿ ಧರಿಸಿಭವ್ಯ
ಸಚ್ಚಿದಾನಂದ ತಲ್ಲೀನದಲ್ಲಿ ಗುನುಗುಡುತ ನಿತ್ಯವಾಗಿ
ಅದು ತಂದ ಬೆಳಕು ನಂದಿಸಿತು ದ್ವೇಷ, ಬಹುತೇಕ ಪೂರ್ಣವಾಗಿ
ಹಾಗಾದರೆ ಏನದು 40 ದಿನದ ಅವಧಿ?

1) ಗರ್ಭ ಅಂಕರಗೊಂಡ 40 ದಿನಕ್ಕೆ ಭ್ರೂಣಕ್ಕೆ ಕಣ್ಣಿನ ರಚನೆಯಾಗುತ್ತದೆ.

2) ಮಗುವಿನ ಜನನವಾದಂದಿನಿಂದ 40 ದಿನಗಳವರೆಗೆ ತಾಯಿ (ಬಾಣಂತಿ) ಹಾಗೂ ಶಿಶುವನ್ನು ಒಂದು ನಿಗದಿತವಾದ ಕೋಣೆಯಲ್ಲಿಯೇ ಇರಿಸಲಾಗುತ್ತಿತ್ತು. ಹಾಗೂ ಎಳ್ಳೆಣ್ಣೆ ಅಥವಾ ತುಪ್ಪದ ದೀಪವೊಂದನ್ನು ಸದಾ ಅಲ್ಲಿ ಬೆಳಗುವಂತೆ ಇಡಲಾಗುತ್ತಿತ್ತು.

3) ಜೈನ ಪರಂಪರೆಯಲ್ಲಿ ಪರ್ಯುಶಾನ ಎನ್ನುವ 40 ದಿನದ ಉಪವಾಸದ ಸಾಧನಾ ಕ್ರಮವಿದೆ.

4) ಬುದ್ಧನಿಗೆ (ಎರಡನೆ ಬಾರಿಯ ಪ್ರಯತ್ನದಲ್ಲಿ) 40 ದಿನಗಳ ಕಠಿಣ ತಪಸ್ಸಿನ ನಂತರದಲ್ಲಿ 'ಸಾಕ್ಷಾತ್ಕರ'.

5) ಇಸ್ಲಾಂ ಧರ್ಮದಲ್ಲೂ ಸಹಿತ 40 ದಿನಗಳ ಉಪವಾಸದ ಪದ್ಧತಿ ಇದೆ.

6) ಯೇಸುಕ್ರಿಸ್ತನನ್ನು ಶೀಲುಬೆಗೇರಿಸಿದ 40 ದಿನಗಳ ನಂತರ 'ಪುನರ್ಜನ್ಮದ ಘಟನೆ'.

7) ಕುಂಡಲಿನಿ ಜಾಗೃತಿಗೆ 40 ದಿನಗಳ ಸಾಧನಾ ಪದ್ಧತಿ ಇದೆ.

8) ಹಾರ್ನಬಿಲ್ (ಕಿರೀಟದ ಪಕ್ಷಿ; ಕರಾವಳಿಯಲ್ಲಿ, ದಾಂಡೇಲಿ ಅರಣ್ಯ ಪ್ರದೇಶದಲ್ಲಿ ನಿಗದಿತ ಸಮಯಕ್ಕೆ ವಲಸೆ ಬರುತ್ತವೆ. ಇಲ್ಲಿ ಸಿಗುವ ಸಮೃದ್ಧ ಹಲಸು ಅವುಗಳಿಗೆ ತುಂಬ ಪ್ರಿಯವಾದದ್ದು.) ಪಕ್ಷಿ 40 ವರ್ಷಕ್ಕೊಮ್ಮೆ 40 ದಿನಗಳ ಕಾಲ ಏಕಾಂತದಲ್ಲಿಯೇ ಇದ್ದು ತನ್ನ ಸ್ವರೂಪವನ್ನು ಸಂಪೂರ್ಣ ನವೀಕರಿಸಿಕೊಳ್ಳುತ್ತದೆ. ತದನಂತರದಲ್ಲಿ ಮತ್ತೆ ಅದರ ಆಯಸ್ಸು 40 ವರ್ಷ. (ಡಾಕ್ಯುಮೆಂಟರೀ ಇದೆ.)

9) ಹನುಮಾನ ಚಾಲೀಸಾ ಇರುವದು 40 ಶ್ಲೋಕಗಳಲ್ಲಿ.

10) ಸಸ್ಯಗಳೂ ಸಹಿತ 40 ದಿನಗಳ ಕಾಲ ಸ್ಮರಣ ಶಕ್ತಿಯನ್ನು ಹೊಂದಿರುತ್ತವೆ ಎನ್ನುವದು ತೀರ ಇತ್ತೀಚಿಗೆ ಸಿದ್ಧಗೊಂಡ ಸಂಗತಿ.

11) ಆಧುನಿಕ ಮನಶ್ಶಾಸ್ತ್ರವೂ ಸಹಿತ 40 ದಿನಗಳ ಅವಧಿಯಲ್ಲಿ ಮನೋಭಾವಗಳನ್ನು ರೂಪಿಸುವ ಪದ್ಧತಿಯನ್ನು ಅನುಸರಿಸುತ್ತಾರೆ.

12) ಆಯುರ್ವೇದದಲ್ಲಿಯೂ ಸಹಿತ 40 ದಿನಗಳ ಚಿಕಿತ್ಸೆ 'ಮಂಡಲ'ವಿರುತ್ತದೆ.

13) ಸನ್ಯಾಸಾಶ್ರಮವನ್ನು ಸ್ವೀಕರಿಸಿ, ಆಶ್ರಮವಾಸಿಗಳಾಗಿಯೋ ಅಥವಾ ಮಠ–ಮಂದಿರಗಳ ಪೀಠಾಧಿಪತಿಗಳಾಗಿಯೋ ಕರ್ತವ್ಯ ನಿರ್ವಹಿಸಿ, ದೇಹತ್ಯಾಗ (ಸಮಾಧಿ) ಮಾಡಿದ ನಂತರ 40 ದಿನಗಳು ಕಳೆದ ಮೇಲೆ 41ನೇ ದಿನ 'ಯತಿಪೂಜೆ' ಎಂದು ಆಚರಣೆಯಿದೆ.

14) ಈ 40 ದಿನಗಳ ವಿನ್ಯಾಸವೇ 'ಸಪ್ತ ತತ್ತ್ವ'ಗಳನ್ನು ಆಧರಿಸಿಕೊಂಡು 40x7= 280 ದಿನಗಳಾಗುತ್ತವೆ. ಅಂದರೆ 9 ತಿಂಗಳು 10 ದಿನ. ಗರ್ಭಾಂಕುರದಿಂದ ಸರಿಯಾಗಿ ಈ ಸಪ್ತ ತತ್ತ್ವದ ಸೂತ್ರದ ಪ್ರಕಾರವೇ ಶಿಶುವಿನ ಜನನವಾಗುತ್ತದೆ.

15) ಮಹಾಬಲಿಪುರಂದಲ್ಲಿ ಶಿವನ(ಶಿವಲಿಂಗ)ವನ್ನು ನಿಗದಿತವಾಗಿ 40 ವರ್ಷಗಳಿಗೊಮ್ಮೆ ನೀರಿನಿಂದ ಹೊರಗೆ ತೆಗೆದು ಪೂಜಾ ವಿಧಿ–ವಿಧಾನಗಳನ್ನು ಪೂರೈಸಿ ಮತ್ತೆ ಅದೇ ಪುಷ್ಕರಣಿಯಲ್ಲಿ ಮುಳುಗಿಸಲಾಗುತ್ತದೆ. ಇದು 40 ವರ್ಷದ ನಂತರವೇ ಮತ್ತೆ ಹೊರಗೆ ತೆಗೆಯಲಾಗುವದು.

ಹೀಗೆ 40 ದಿನಗಳ ವಿಷಯವು ತುಂಬ ಅಧ್ಯಯನವನ್ನು ಬಯಸುತ್ತದೆ.

ಈ ವಿಷಯವಾಗಿ ಬಲ್ಲವರು/ಆಸಕ್ತರು ಚರ್ಚೆ ಮುಂದುವರೆಸಬಹುದು.

– **ಪುಟ್ಟು ಕುಲಕರ್ಣಿ** (2015)

## 2. ಪ್ರತಿಮೆ

ನಿಯತಿಯ ಪ್ರಕಾರವಾಗಿಯೇ ಜಡ ಸ್ವಭಾವವೇ ಪ್ರಕೃತಿ ಭಾವವಾಗಿರುವ ಮತ್ತು ಅದನ್ನೇ ಪ್ರತಿನಿಧಿಸುತ್ತಿರುವ 'ಶಿಲೆ'ಯು ಪ್ರಕೃತಿಯ ಒಂದು ಅಂಶವಾಗಿಯೇ ಇದೆ. ಆದರೆ ಈ ಶಿಲೆಯು 'ಶಿಲ್ಪ'ವಾಗುವಲ್ಲಿ ಇರುವ ಪ್ರಕ್ರಿಯೆಯು, ಮಾನವನ ಮನೋವಿಕಾಸದ ಪಥವನ್ನು ತೋರುತ್ತಿದೆ.

ಜಡವಾಗಿದ್ದ ‘ಶಿಲೆ’ಯಲ್ಲಿ ಚಿಂತನಾಶೀಲ ಮನಸ್ಸೊಂದು, ತನ್ನ ಮನದಲ್ಲಿ ಉದಿಸಿದ ರೂಹು ಒಂದನ್ನು ಕೃತಿರೂಪಕ್ಕಿಳಿಸುತ್ತದೆ. ಇದೇ ‘ಆಕೃತಿ’ಯಾಯಿತು. ಈ ‘ಆಕೃತಿ’ಯು ಕೇವಲ ಓರ್ವ ವ್ಯಕ್ತಿಯ ಅಭಿವ್ಯಕ್ತಿ ಮಾತ್ರ ಆಗಿರುವದಿಲ್ಲ. ಏಕೆಂದರೆ ಆ ವ್ಯಕ್ತಿಯು ಪ್ರತಿನಿಧಿಸುತ್ತಿರುವ, ಅವನ ಜೀವನದ ಸಮಯದ ಭೌಗೋಳಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಅಂಶಗಳಿಂದ ಪ್ರೇರಣೆ ಪಡೆದುಕೊಂಡು, ಆಯಾಮದ ಸ್ವರೂಪದಲ್ಲಿ ಇರುತ್ತದೆ. ಪ್ರಕಟಗೊಂಡ ‘ಆಕೃತಿ’ಯು ಆಯಾ ಅವಧಿಯಲ್ಲಿದ್ದ ಸಂಗತಿಗಳ ಗತಿ–ಗಮನವನ್ನು ಅಂತರ್ಗತಮಾಡಿಕೊಂಡಿರುತ್ತದೆ. ಹಾಗೆಂದು ಕೇವಲ ಒಂದೇ ಒಂದು ಆಕೃತಿಯು ಸರ್ವ ಆಯಾಮಗಳನ್ನು ಪ್ರತಿನಿಧಿಸುವ ಹಂತವನ್ನು ಪಡೆಯುತ್ತವೆ ಎಂದು ಊಹಿಸಲೂ ಸಾಧ್ಯವಿಲ್ಲ. ಹೀಗಾಗಿ ಪ್ರಕಟಗೊಂಡ ‘ಆಕೃತಿ’ಯು ಒಂದು ನಿರ್ದಿಷ್ಟ ಉದ್ದೇಶವನ್ನು ಹೊಂದಿರುತ್ತದೆ. ಈ ರೀತಿಯಲ್ಲಿರುವ ‘ಆಕೃತಿ’ಯು ಇದೀಗ ‘ಚಿಹ್ನೆ’ಯ ಹಂತವನ್ನು ಪಡೆದುಕೊಳ್ಳುತ್ತದೆ.

ಈ ‘ಚಿಹ್ನೆ’ಯು ಮನೋವಿಕಾಸದ ಪ್ರಗತಿಯನ್ನು, ಅದರ ಗತಿ–ಗಮನಗಳನ್ನು ಪ್ರತಿನಿಧಿಸುತ್ತದೆಯೇ ಎಂದು ಗಮನಿಸಿದಾಗ, ಶಿಲ್ಪವಾಗಿದ್ದ ಆಕೃತಿ ಚಲನಶೀಲತೆಯನ್ನು ಹೊಂದಿರುವದಿಲ್ಲ. ಹಾಗೆಂದು ಅದನ್ನು ಜಡತ್ವ ಎಂದೂ ಪರಿಗಣಿಸುವಂತಿಲ್ಲ. ಏಕೆಂದರೆ ಜಡತ್ವದ ಹಂತವನ್ನು ಈಗಾಗಲೇ ಅದು ದಾಟಿದೆ. ಈ ‘ಚಿಹ್ನೆ’ ಕಾಲಕ್ಕೆ ಸೀಮಿತವಾಗಿದ್ದಲ್ಲಿ – ಮಾನವನ ಜೀವನವು ಸದಾ ಪರಿವರ್ತನೆಯ ಪಥದಲ್ಲಿ ಇರುವದರಿಂದ ಕೆಲ ಸಮಯದ ನಂತರದಲ್ಲಿ, – ಮಾನವನ ಬೌದ್ಧಿಕ ಮತ್ತು ಮಾನಸಿಕ ವಿಕಾಸದ ಕಾರಣದಿಂದಾಗಿ, ಈ ವಿನ್ಯಾಸದಲ್ಲಿ ರೂಪಣೆಗೊಂಡ ಊರ್ಧ್ವಮುಖೀ ಯಾನದ ಕಾರಣದಿಂದ, ಅದರಲ್ಲೂ ಪ್ರಕೃತಿಯ ನಿಗೂಢತೆಯನ್ನು ಶೋಧಿಸುವ, ಅರಿತುಕೊಳ್ಳುವ ಸತತ ಪ್ರಯತ್ನದ ಫಲಿತವಾಗಿ, ವ್ಯೋಮದಿಂದಲೇ ಇದಕ್ಕೆ ಪರಿಹಾರವನ್ನು ಕಂಡುಕೊಳ್ಳುವ ತವಕದಿಂದಾಗಿ ಈ ‘ಚಿಹ್ನೆ’ಯು ‘ಸಂಕೇತ’ವಾಗಿ ರೂಪ ತಳೆಯಿತು.

ಇನ್ನು ‘ಸಂಕೇತ’ವಂತೂ ಮತ್ತೂ ಮತ್ತೂ ಮತ್ತೂ ಊರ್ಧ್ವಾತಿ ಊರ್ಧ್ವ ಯಾನದ ಅಭೀಪ್ಸೆಯೊಳಗೆ, ಆ ಮಾರ್ಗವನ್ನು ಸಂದರ್ಶಿಸುವ, ದರ್ಶಿಸುವ ಪಥವನ್ನು ಮಾನವನ ಚಿಂತನೆಗೆ ಒದಗಿಸಿತು. ಈ ರೀತಿಯ ಸಂಕೇತದ ಮೂಲಕ ಲಭ್ಯಗೊಂಡ ದರ್ಶನವು, ಸಾಕಾರಗೊಂಡ ‘ಸಂಕೇತ’ವನ್ನು ‘ಮೂರ್ತಿ’ಯಾಗಿಸಿಕೊಂಡು ಆರಾಧನೆಯ ಹಂತವನ್ನು ರೂಪಿಸಿತು. ಈ ಆರಾಧನೆಯ ಹಂತವನ್ನು

ಹೃದಯಪೂರ್ವಕವಾಗಿ ಅಪ್ಪಿಕೊಂಡ, ಒಪ್ಪಿಕೊಂಡ ಮಾನವನ ಮನಸ್ಸು ಈ 'ಮೂರ್ತಿಯ ಅಭಿವ್ಯಕ್ತಿಯು' ಕೇವಲ ಲೌಕಿಕ ಭಾವಗಳನ್ನು ಪ್ರತಿನಿಧಿಸುತ್ತಿದ್ದರೂ, ತನ್ನಲ್ಲಿ ಅಂತರ್ಗತ ಮಾಡಿಕೊಂಡಿತು. ಇದೇ ಸ್ಥಿತಿಯು ಮುಂದುವರೆದಿದ್ದರೆ ಅದು ಸದಾ ಕಾಲವೂ 'ಮೂರ್ತಿ'ಯಾಗಿಯೇ ಮುಂದುವರೆಯುತ್ತಿತ್ತು. ಹೀಗಾಗಿ 'ಮೂರ್ತಿ'ಗಳು ಒಂದು ಹಂತದ ಕಾಲಾತೀತ ಗುಣವನ್ನು ಹೊಂದಿವೆ ಎನ್ನಬಹುದು. ಆದರೆ ಈ 'ಮೂರ್ತಿ'ಯ ಹೃತ್ಪೂರ್ವಕವಾದ ಸ್ಪಂದನವು ಯಾವಾಗ "ಆತ್ಮಸಾತ್" (ಆತ್ಮಪೂರ್ವಕವಾಗಿ) ಅನುಷ್ಠಾನಗೊಳಿಸಲ್ಪಟ್ಟಿತೋ ಆಗ ಅದು 'ಪ್ರತಿಮೆ'ಯಾಗಿ ಪ್ರತಿಷ್ಠಾಪನೆ ಗೊಂಡಿತು.

ಈ ಆತ್ಮಸಾತ್ ಅಭಿವ್ಯಕ್ತಿಯ ಪ್ರತಿಮೆಯು ಯಾವಾಗಲೂ ಸತ್ಯವನ್ನೇ ರೂಹುಗೊಳಿಸಿಕೊಂಡಿರುತ್ತದೆ. ಸತ್ಯದ ಸ್ವರೂಪವೇ ಆಗಿರುತ್ತದೆ.

ಈ ಎಲ್ಲ(ಶಿಲೆ–ಶಿಲ್ಪ–ಆಕೃತಿ–ಮೂರ್ತಿ–ಪ್ರತಿಮೆ)ವೂ ಭಾರತೀಯ ಚಿಂತನಾ ಕ್ರಮವು ದೇಹದಲ್ಲಿಯೇ ಇರುವದನ್ನೂ ಅನುಸಂಧಾನ ಮಾಡಿಕೊಂಡು, ಅದನ್ನೇ ದೇವಾಲಯಗಳಲ್ಲೂ ಅಭಿವ್ಯಕ್ತಗೊಳಿಸಿದರು. ಒಂದು ದೇವಾಲಯದಲ್ಲಿ ಶಿಲೆ–ಚಿಹ್ನೆ–ಶಿಲ್ಪ–ಪ್ರತೀಕ–ಮೂರ್ತಿಗಳು ಒಂದು ನಿಗದಿತ ಸ್ಥಳದಲ್ಲಿ ಕಂಗೊಳಿಸುತ್ತವೆ. ಆದರೆ ದೇವಾಲಯದ ಹೃದಯವಾಗಿರುವ; 'ಗರ್ಭಗುಡಿ'ಯಲ್ಲಿ ಆತ್ಮಸ್ವರೂಪದಲ್ಲಿರುವ 'ಪ್ರತಿಮೆ'ಯು ಪ್ರಾಣದುಂಬಿಕೊಂಡು ದರ್ಶನಕ್ಕೆ ಲಭ್ಯವಿರುತ್ತದೆ.

ಇದೇ ಛಂದವನ್ನೇ ಭಾರತೀಯ ಕಾವ್ಯವೂ ತನ್ನಲ್ಲಿ ಅಳವಡಿಸಿಕೊಂಡಿದೆ. ಪ್ರಾಣದುಂಬಿಕೊಂಡಿರುವ ಪ್ರತಿಮೆ ಕಾವ್ಯದ ಆತ್ಮವೇ ಆಗಿರುತ್ತದೆ. ಇದನ್ನು ಶ್ರೀ ಅರವಿಂದರು ತಮ್ಮ 'ಸಾವಿತ್ರಿ' ಕಾವ್ಯದ ದಳ 7 ರೇಣು 6 ಪುಟ 546 ರಲ್ಲಿ

"ಮೃತ್ಯುವಿನ ವ್ಯಾಪ್ತ–ಘಳಿಗೆಯಲಿ ಇಲ್ಲಿ ಬೀಜವೊಂದನ್ನು ಬಿತ್ತಿ
ಮೃಣ್ಮಯದ ಮನುಜ–ಭಾವದಲಿ ದಿವದ ಅನುಭೂತಿ ಶಾಖೆ ಕೆತ್ತಿ;
ತನ್ನದೇ ಮರಣ–ಶಾಸನವನೀಗ ಉಲ್ಲಂಘಿಸುತ್ತ ಪ್ರಕೃತಿ
ಆತ್ಮದಾ ಚಿರದ ಇಚ್ಛೆಗಿದೋ ಇಂತು ಪರಿವರ್ತಗೊಂಡ ನಿಯತಿ;"

ಎಂದು ಅಭಿವ್ಯಕ್ತಿಸಿದ್ದಾರೆ.

– **ಪುಟ್ಟು ಕುಲಕರ್ಣಿ** (2015 ಮತ್ತು 2023)

## 3. "ಶೀತಚಂದ್ರ ಸಹ ಮೂಡಿರದ ಗುಹೆ"

And moon-flame oceans of swift fathomless Bliss
And calm immensities of spirit Space

(ಸಾವಿತ್ರಿ; ದಳ 1 ರೇಣು 4 ಪುಟ 47)

1) ಶ್ರೀ ಅರವಿಂದರ ಅಭಿಪ್ರಾಯದಲ್ಲಿಯೇ "ಚಂದ್ರ" ಪ್ರಜ್ಞೆಯ ದೇವತೆ. ಸತ್ಯಕ್ಕೆ ಸೂರ್ಯ; ಮನಸ್ಸಿಗೆ ಇಂದ್ರ; ಸೂಕ್ಷ್ಮ ಪ್ರಾಣಕ್ಕೆ ವಾಯು; ಭಾವನಾತ್ಮಕ ಮನಸ್ಸು ಅಥವಾ ಗುಣಕ್ಕೆ ಮಿತ್ರ–ವರುಣ–ಆರ್ಯಮಾ ಮತ್ತು ಭಗ ದೇವತೆಗಳು. ಸಹೇತುಕ ಚಿತ್ತಿಗೆ ಅಥವಾ ತಪಸ್ಸಿಗೆ ಬೃಹಸ್ಪತಿ ದೇವತೆ. ಸಹೇತುಕ ಸತ್‌ಗೆ ಬ್ರಹ್ಮ ದೇವತೆಯಾದರೆ ಸಹೇತುಕ ತಪಸ್ಸಿಗೆ ಅಗ್ನಿ ದೇವತೆ. ಈ ಎಲ್ಲ ವಿವರಗಳೂ ಪ್ರತಿಮಾ ತತ್ತ್ವದಲ್ಲಿ ವೇದದಲ್ಲಿಯೇ ರೂಪಿತಗೊಂಡಿವೆ. **(ವಿವರಗಳಿಗೆ ಶ್ರೀ ಅರವಿಂದರ ಋಗ್ವೇದದ ಮೊದಲ ಋಕ್ – ಗಮನಿಸಿ.)**

ಈ ವರ್ಗೀಕರಣ ಕೇವಲ ಮಾರ್ಗದರ್ಶೀ ಸೂತ್ರಗಳು. ಹಲವಾರು ಗುಣಗಳ ಮತ್ತು ಶಕ್ತಿಗಳ ಸಂಗಮವಾಗಿರುವ ಮತ್ತು ಅವುಗಳನ್ನು ಪ್ರತಿನಿಧಿಸುವ ಹಲವಾರು 'ಉಪ ದೇವತಾ ಗಣ'(gods)ಗಳ ಬಗೆಗೆ ಅತ್ಯಂತ ನಿಖರವಾಗಿ ನಿಕಷಕ್ಕೆ ಒಡ್ಡಿಯೇ ವೇದವು ಈ ವ್ಯವಸ್ಥೆಯನ್ನು ಅಳವಡಿಸಿಕೊಂಡಿದೆ. ಜೊತೆಗೆ ಪ್ರತಿನಿಧಿಸುತ್ತಿದೆ ಕೂಡಾ. ಈ ದೇವ ಗಣಗಳೇ ಯಜ್ಞ ಪುರುಷನ, ಈಶನ, ಆಧಾರಭೂತದ ಶಕ್ತಿಯಾದ ಸಪ್ತ ರೂಪೀ ಆವಿಷ್ಕಾರಕ್ಕೆ ಪರಿಪಕ್ವ ನೆಲೆಯಲ್ಲಿ ಕಾರ್ಯಪ್ರವೃತ್ತವಾಗಿರುತ್ತವೆ.

2) ಇನ್ನು "ಸೌಭಾಗ್ಯ ಸು(ಶು)ಭೋದಯ" ಗ್ರಂಥವು ಎಲ್ಲವನ್ನೂ ತನ್ನಲ್ಲಿಯೇ ನೋಡುವದರಿಂದಲೂ, ಕರಣಗಳ ಮೇಲೆ ಏಳುವದರಿಂದಲೂ ಮಾತೆಯು 'ಪಶ್ಯಂತಿ ಉತ್ತೀರ್ಣಾ' ಎಂದು ಕರೆಯಲ್ಪಡುತ್ತಾಳೆ. (ಪಶ್ಯತೀ ಸರ್ವಂ ಸ್ವಾತ್ಮಾನಿ ಕರುಣಾನಾಂ ಸುರಣಿಮಪಿ ಯದುತ್ತೀರ್ಣಾ। ತೇನೇಯಂ ಪಶ್ಯಂತೀತ್ಯುತ್ತೀರ್ಣೇತ್ಯಪ್ಯುದೀರ್ಯತೇ ಮಾತಾ॥) ಎನ್ನುವದು, 'ಸಾವಿತ್ರಿ'ಯಲ್ಲಿ ಬರುವ ಪ್ರಸವ ವೇದನೆಯ ಝಳಪು, ಶೀತಚಂದ್ರದ ಮಾರ್ಗದರ್ಶೀ ವಿವರಗಳಾಗಿವೆ. ಅಂದರೆ ಪಶ್ಯಂತಿಯಂತೆ ಉತ್ತೀರ್ಣಳಲ್ಲದೇ ಇರುವದರಿಂದಲೂ (ಶೀತಚಂದ್ರ ಸಹ ಮೂಡಿರದ ಗುಹೆಯು), ವೈಖರಿಯಂತೆ ಹೊರಗೆ ಬಂದಿಲ್ಲದಿರುವದರಿಂದಲೂ ಅವೆರಡರ ಮಧ್ಯದಲ್ಲಿ "ಮಧ್ಯಮಾ" ಎನಿಸುತ್ತಾಳೆ.

3) "ಪ್ರಸವಿತ್ರೀ" ಎಂದು ಲಲಿತಾ ಸಹಸ್ರನಾಮ(826)ವೂ ಸಹಿತ ಆಕಾಶಾದಿ ಪ್ರಪಂಚಗಳನ್ನು ಪ್ರಸವಿಸುವದರಿಂದ ಅವಳಿಗೆ 'ಪ್ರಸವಿತ್ರೀ' ಎನ್ನುತ್ತಾರೆ. ಪ್ರಜೆಗಳನ್ನೂ ಪ್ರಸವಿಸುವದರಿಂದ 'ಸವಿತಾ' ಎನ್ನುವ ಹೆಸರೂ ಇದೆ. "ಪ್ರಜಾನಾಂ ಚ ಪ್ರಸವತೇ ಸವಿತೇತಿ ನಿಗದ್ಯತೇ" ಎಂದು ವಿಷ್ಣು ಧರ್ಮೋತ್ತರ ಗ್ರಂಥವೂ ಹೇಳುತ್ತಿದೆ. ಇದೇ ವಿಷಯವನ್ನೇ 'ಭಗವತೀ ಪುರಾಣ'ವೂ ಸಹಿತ 'ಬ್ರಹ್ಮಾದ್ಯಾಃ ಸ್ಥಾವರಾಂಶ್ಚ ಯಸ್ಯಾ ಏವ ಸಮುದ್ಗತಾ। ಮಹದಾದಿ ವಿಶೇಷತಾಂ ಜಗದಸ್ಯಾ ಸಮುದ್ಗತಮ್। ತಾ ಮೇವ ಸಕಲಾರ್ಥಾನಾಂ ಪ್ರಸವಿತ್ರೀಂ ಪರಾಂ ನುಮಃ॥' ಎಂದಿದೆ.

ಹೀಗಾಗಿ ಇಲ್ಲಿ (ಸಾವಿತ್ರಿಯಲ್ಲಿ) ರೂಪಿತಗೊಂಡಿರುವ ವಿಷಯಗಳ ಬಗೆಗೆ The hour before ಸಂಕೇತವನ್ನು ಕಾಣಬೇಕಿದೆ.

4) ಶೀತಚಂದ್ರ; ಚಂದ್ರ ಮಂಡಲ ಮಧ್ಯದಲ್ಲಿರುವವಳು ಎನ್ನುವ ವಿವರಣೆಯಲ್ಲಿ 'ಸಹಸ್ರ ದಳ ಪದ್ಮಕರ್ಣಿಕೆಯಲ್ಲಿರುವ ಚಂದ್ರನನ್ನು ಕುಂಡಲೀನಿ ಭೇದಿಸುವದರಿಂದ 'ಚಂದ್ರ ಮಂಡಲ ಮಧ್ಯಗಾ' ಎನ್ನುವ ಹೆಸರಿದೆ. ಇದನ್ನು ಲೌಕಿಕವಾಗಿ ಆಯಸ್ಸು ಸಂಪತ್ತು ಮೊದಲಾದವುಗಳಿಗೆ ಸಾಯಂ ಸಂಧ್ಯಾವಂದನದಲ್ಲಿ ದೇವಿಯನ್ನು ಚಂದ್ರ ಮಂಡಲದ ಮಧ್ಯದಲ್ಲಿಯೇ ಆರಾಧಿಸುತ್ತಾರೆ. (ಚಂದ್ರ ಮಂಡಲವೇ ಶ್ರೀಚಕ್ರ ಎನ್ನುವದು ರಹಸ್ಯಾರ್ಥ).

ಸುಧಾಸಮೃದ್ಧ ರಜತಮಂಡಲದ ಪರಿಪೂರ್ಣ ಚಂದ್ರ–ಕಾಂತಿ
ಉತ್ಕಟದ ಭಾವದಲ್ಲವಳ ಹೃದಯ–ಮಣಿಪದ್ಮ–ಮಿನುಗು–ಕಾಂತಿ
ಶಬ್ದ–ಶಬ್ದಗಳ ಉಲಿತವಿಲ್ಲದಲೆ ಸಂಕೇತ ರೂಹುಗೊಳದೆ
ಸರ್ವ ಭಾವಗಳ ಸಪ್ರೇಮದಲ್ಲಿ ಅಧಿವಾಸಗೊಳಿಸಿ ಇಂದೆ,

ಸುಪ್ತವಾಗಿರುವ ಪರಮಹರ್ಷವದು ತಾ ಉದಿತಗೊಂಡರೂನು
ಚಿತ್ತದಲಿ ಅವಳು ಅತಿಗುಪ್ತವಾಗಿ ತಾ ಸುಪ್ತಗೊಳಿಸಿ ತಾನು,
ತೋಷ–ಪೋಷಿತದ ನಿರ್ಮಾಯ–ಘನವು ಆಗಲ್ಲಿ ಚಲನಗೊಂಡು
ಲೋಕ–ಲೋಕಗಳ ತುಂಬ ನಾದಮಯ ಸೌಂದರ್ಯ ಸತ್ಯವಿಂದು.

**– ಪುಟ್ಟು ಕುಲಕರ್ಣಿ**

(ದಳ 4 ರೇಣು 1 ಪುಟ 358)

ಶೀತಚಂದ್ರ; ಚಂದ್ರ ಮಂಡಲ ಮಧ್ಯದಲ್ಲಿರುವವಳು ಎನ್ನುವ ವಿವರಣೆಯಲ್ಲಿ 'ಸಹಸ್ರ ದಳ ಪದ್ಮಕರ್ಣಿಕೆಯಲ್ಲಿರುವ ಚಂದ್ರನನ್ನು ಕುಂಡಲಿನಿ ಭೇದಿಸುವದರಿಂದ 'ಚಂದ್ರ ಮಂಡಲ ಮಧ್ಯಗಾ' ಎನ್ನುವ ಹೆಸರಿದೆ. ಇದನ್ನು ಲೌಕಿಕವಾಗಿ ಆಯಸ್ಸು ಸಂಪತ್ತು ಮೊದಲಾದವುಗಳಿಗೆ ಸಾಯಂ ಸಂಧ್ಯಾವಂದನದಲ್ಲಿ ದೇವಿಯನ್ನು ಚಂದ್ರ ಮಂಡಲದ ಮಧ್ಯದಲ್ಲಿಯೇ ಆರಾಧಿಸುತ್ತಾರೆ. (ಚಂದ್ರ ಮಂಡಲವೇ ಶ್ರೀಚಕ್ರ ಎನ್ನುವದು ರಹಸ್ಯಾರ್ಥ)

ಇದನ್ನು ಯೋಗದ ಬಗೆಗಿನ ಹಲವು ಭಾಷ್ಯಗಳಲ್ಲಿ/ಗ್ರಂಥಗಳಲ್ಲಿ ವಿವರಸಿದ್ದನ್ನು ಕಾಣಬಹುದು. ಅದರಲ್ಲೂ ಕನ್ನಡ ಭಾಷೆಯಲ್ಲಿ ಇದನ್ನು ಅಪ್ರತಿಮವಾಗಿ ನಿರೂಪಿಸಿದವನು ಅಲ್ಲಮಪ್ರಭು.

'ಚಂದ್ರಮನೊಳಗಣ ಎರಳೆಯ ನುಂಗಿದ ರಾಹುವಿನ ನೋಟವು
ಅಂದಂದಿಗೆ ಬಂದು ಕಾಡಿತ್ತು ನೋಡಾ
ಒಂದು ತಲೆ ಒಂದು ಬಸುರು
ಅಂದಂದಿಗೆ ಬಂದು ಕೂಡಿತ್ತು ನೋಡಾ
ನಂದಿ ನಂದಿಯ ನುಂಗಿ ಬಂದುದು ಮಹೀತಳಕ್ಕಾಗಿ
ಇಂದು ರವಿ ಗಡಣವ ನಾನೇನೆಂಬೆ ಗುಹೇಶ್ವರಾ' (ವಚನ 25)

ಇಲ್ಲಿ ತಮೋಗುಣ ನಿವೃತ್ತಿ ಮಾಡುವ ಷೋಡಶಕಳಾಪರಿಪೂರ್ಣ ಭಾವದಿಂದಿರುವ ಹಾಗೂ ಸುಧಾಕರ ಸ್ವರೂಪವಾಗಿರುವ ಚಂದ್ರನಿಗೆ ಅಜ್ಞಾನ ತಮೋ ವೃತ್ತಿಯನ್ನು ತೊಡೆದು ಹಾಕಿ, ಅಮೃತ ಪಿಂಡ ಸ್ವರೂಪದಿಂದ ತೋರುವ ಪರಮಶಾಂತಿ ಎನ್ನುವ "ಚಿತ್ತು" ಈ ಶೀತಚಂದ್ರ. ಅದಿನ್ನೂ ಮೂಡಿರದ ಗುಹೆಯ ಸ್ವರೂಪದಲ್ಲಿ, ಹಾಗೂ ಅದು ಉದಿಸಲಿರುವ (ಪ್ರಸವದ ಮೂಲಕ) ಉದಿಸಲಿರುವ ಸ್ಥಿತಿಯ ವಿವರಣೆಗಳನ್ನು ಸಾವಿತ್ರಿಯ ಪ್ರಥಮ ಪುಟ(ದ)ಗಳಲ್ಲಿ ಕಾಣಬಹುದು.

ಇದೇ ವಿಷಯವನ್ನೇ ಇನ್ನೂ ವಿವರವಾಗಿ Moon-flame ocean (ದಳ 1 ರೇಣು 4 ಪುಟ 47) ಶ್ರೀ ಅರವಿಂದರು ಸಾವಿತ್ರಿಯಲ್ಲಿ ಸಂಕೇತಿಸಿದ್ದಾರೆ.


# ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ.ನಗರ 1ನೇ ಹಂತ, ಬೆಂಗಳೂರು

ದಿನಾಂಕ 11ನೇ ಜೂನ್ 2024ರ ಮಂಗಳವಾರ ಶ್ರೀ ಅರವಿಂದರ ಪುಣ್ಯಾವಶೇಷದ ದಿನವನ್ನಾಗಿ ಆಚರಿಸಲಾಯಿತು. ಬೆಳಿಗ್ಗೆ 7.30 ರಿಂದ 7.50 ರವರೆಗೆ ಸಾಮೂಹಿಕ ಧ್ಯಾನವನ್ನು ಏರ್ಪಡಿಸಲಾಗಿತ್ತು. ತತ್ಸಬಂಧ ಬೆಳಿಗ್ಗೆ 9.00 ರಿಂದ ಮಧ್ಯಾಹ್ನ 1.00 ಗಂಟೆಯವರಗೆ "Is Veda relevant today?" - in Light of Sri Aurobindo ಎಂಬ ವಿಷಯವಾಗಿ ಡಾ॥ ನಾಗೇಂದ್ರ (ಸಾಕ್ಷಿ) ಇವರು ಉಪನ್ಯಾಸ ನೀಡಿದರು. ಉಪನ್ಯಾಸ ಕಾರ್ಯಕ್ರಮದಲ್ಲಿ ಅನೇಕ ಗುರು–ಬಂಧುಗಳು ಮತ್ತು ಶ್ರೀಮಾತಾರವಿಂದರ ಭಕ್ತರು ಭಾಗವಹಿಸಿದ್ದರು.

"Works of Sri Aurobindo & The Mother" ವಿಷಯ ಕುರಿತು ದಿನಾಂಕ 10ನೇ ಜೂನ್ 2024 ರಿಂದ 11ನೇ ಆಗಸ್ಟ್ 2024 ವರೆಗೂ ಶ್ರೀಅರವಿಂದ ಸಂಕೀರ್ಣದ ಸಾಂಸ್ಕೃತಿಕ ಸಭಾ ಭವನದಲ್ಲಿ ಫೋಟೋ ಚಿತ್ರಪ್ರದರ್ಶನ ಆಯೋಜಿಸಲಾಗಿದೆ.



ಫೋಟೋ: ಇಮೇಜಿಂಗ್ ಸಾವಿತ್ರಿ

ಆತ್ಮಸಂಭೂತಿಯಲ್ಲಿವನು ಈಗ ವಿಶ್ವಾತ್ಮದೊಡನೆ ಬಂಧ
ಅವನ ಜೀವನವು ವಿಶ್ವದಾರ್ಣವವು, ಆ ಬ್ರಹ್ಮ ಚೇತದಿಂದ.

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 3 ಪುಟ 23)**

**RNI No. 22511/1971**
No. of Pages **64 + 4 (Cov. Page)**
KAR Reg No.: RNP/KA/BGS/368/2024-2026
Licensed to post without prepayment License No.PMG BG/WPP-409/2024-2026
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2026
Licensed to Post at BG PSO, Mysuru Road, Bengaluru - 560 026



ಫೋಟೋ: ಇಮೇಜಿಂಗ್ ಸಾವಿತ್ರಿ

ಇದು ಗ್ರಂಥಿಯಿಹುದು ತಾರೆ–ತಾರೆಗಳ ಬಾಂಧವ್ಯ ಬೆಸುಗೆಯಿಟ್ಟು
ಆ ದ್ವಂದ್ವಮೂಲ ಮೂಲದಲಿ ಏಕ ಇದು ಸರ್ವಶಕ್ತಿ ಗುಟ್ಟು

**– ಪುಟ್ಟು ಕುಲಕರ್ಣಿ**
**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 4 ಪುಟ 63)**

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.